
ದುಡಿವ ಜನರ ಪ್ರಾಣ ಮಿತ್ರ


ಸಂಪುಟ 27 ಸಂಚಿಕೆ 21 ಮೇ 22, 2005 ಬೆಲೆ ರೂ. 3.00

# ಫ್ಯಾಸಿಸಂ : ಅಂದು - ಇಂದು



## ಸೆಂಟಾರ್ ಮಸೂದೆ : ಎನ್‌ಡಿಎಗೆ ಛೀಮಾರಿ !



## ಜೆಡಿ(ಎಸ್)-ಕಾಂಗ್ರೆಸ್ ನಡುವಿನ ಸಮರ ಮುಂದೇನು?



## ಸರ್ಕಾರದ ನೀತಿಗಳ ಬದಲಾವಣೆಗೆ ದುಡಿವ ವರ್ಗದ ಚಳುವಳಿ

- ಶಾಸನ ರಚನೆಯಲ್ಲಿ ವರ್ಗಪಕ್ಷಪಾತ
- ಬುಡಕಟ್ಟು ಹಕ್ಕುಗಳ ರಕ್ಷಣೆಗಾಗಿ....

ಸಂಸತ್ತಿನಲ್ಲಿ ಅಂಗೀಕಾರಕ್ಕಾಗಿ ಹಲವು ಮಸೂದೆಗಳು ಕಾದು ಕುಳಿತಿವೆ. ಈ ಮಸೂದೆಗಳ ಹಿಂದಿರುವ ವರ್ಗ ಹಿತಾಸಕ್ತಿಗಳೇನು? ಎಂಬುದನ್ನು ವಿಶ್ಲೇಷಿಸಿದ್ದಾರೆ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ರವರು. ಯುಪಿಎ ಸರ್ಕಾರಕ್ಕೆ ಒಂದು ವರುಷ ತುಂಬುತ್ತಿರುವ ಸಂದರ್ಭದಲ್ಲಿ ಎಚ್ಚರಿಕೆಯ ಧ್ವನಿಯಲ್ಲಿ.

# ಶಾಸನ ರಚನೆಯಲ್ಲಿ ವರ್ಗಪಕ್ಷಪಾತ

ಪ್ರಕಾಶ್ ಕಾರಟ್

ಯುಪಿಎ ಸರಕಾರ ದೊಡ್ಡ ಬಂಡವಾಳಿಗರಿಗೆ, ಅಂತರ್‌ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಅನುಕೂಲಕರವಾದ ನೀತಿಗಳನ್ನು ರೂಪಿಸುವಲ್ಲಿ ಆತುರ ತೋರುತ್ತದೆ, ಆದರೆ ಕಾರ್ಮಿಕವರ್ಗದ, ದುಡಿಯುವ ಜನಗಳ ಹಿತಾಸಕ್ತಿಗಳ ರಕ್ಷಣೆಯಲ್ಲಿ ಮಾತ್ರ ನಿರ್ಲಕ್ಷ್ಯ ತೋರುತ್ತದೆ ಎಂದು ಸಿಪಿಐ(ಎಂ)ನ ಹದಿನೆಂಟನೇ ಮಹಾಧಿವೇಶನದ ರಾಜಕೀಯ ನಿರ್ಣಯ ಹೇಳಿದೆ. ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಎತ್ತಿಕೊಂಡ ಶಾಸನಗಳ ಪ್ರಕ್ರಿಯೆ ಎಷ್ಟು ನಿಜ ಎಂಬುದನ್ನು ತೋರಿಸಿದೆ.

ಯುಪಿಎ ಸರಕಾರ ಸಂಸತ್ತಿನಲ್ಲಿ ಎರಡು ಮಸೂದೆಗಳನ್ನು ಮಂಡಿಸಿದೆ. ಅವನ್ನು ಬೆಂಬಲಿಸುವುದು ಸಿಪಿಐ(ಎಂ)ಗೆ ಮತ್ತು ಎಡಪಕ್ಷಗಳಿಗೆ ಸಾಧ್ಯವಿಲ್ಲ. ಮೊದಲನೆಯದು ಪೆನ್ಷನ್ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಮಸೂದೆ. ಇದು ಬಿಜೆಪಿ ನೇತೃತ್ವದ ಕಾಲಾವಧಿಯಲ್ಲಿ ತಯಾರಿಸಿದ್ದು. ಜನವರಿ 1,2005 ರಿಂದ ಕೇಂದ್ರ ಸರಕಾರ ನೌಕರರಿಗೆ ಆರಂಭಿಸಿದ ಹೊಸ ಪೆನ್ಷನ್ ಯೋಜನೆಗೆ ಕಾನೂನಿನ ಆಧಾರ ಒದಗಿಸುವ ಮಸೂದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಲೋಕಸಭೆಯಲ್ಲಿ ಇದರ ಮಂಡನೆಯನ್ನು ವಿರೋಧಿಸಿದವು. ಇದಕ್ಕೆ ಮೊದಲು ಈ ಬಗ್ಗೆ ಎಡಪಕ್ಷಗಳನ್ನು ಮತ್ತು ಕಾರ್ಮಿಕ ಸಂಘಟನೆಗಳೊಡನೆ ಸಮಾಲೋಚನೆ ನಡೆಸದೆ ಈ ಪ್ರಾಧಿಕಾರವನ್ನು ರಚಿಸುವ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿತ್ತು.

ಕೇಂದ್ರ ಸರ್ಕಾರಿ ನೌಕರರಿಗೆ ಇದುವರೆಗೆ ಪೆನ್ಷನ್ ಎಷ್ಟಿರಬೇಕು ಎಂಬುದನ್ನು ನಿಗದಿಗೊಳಿಸಿದ ಯೋಜನೆಯಿತ್ತು. ಇದರ ಬದಲಿಗೆ ಬಿಜೆಪಿ ನೇತೃತ್ವದ ಸರಕಾರ ನೌಕರರೂ ವಂತಿಗೆ ನೀಡುವ ಹೊಸ ಪೆನ್ಷನ್ ಯೋಜನೆಯನ್ನು ಆರಂಭಿಸಿತು. ಈ ಮಸೂದೆ ಶಾಸನವಾದರೆ ಈ ಯೋಜನೆಯನ್ನು ರಾಜ್ಯಸರಕಾರಿ ನೌಕರರಿಗೂ, ಪೆನ್ಷನ್ ಪಡೆಯುವ ಇತರ ಎಲ್ಲರಿಗೂ ವಿಸ್ತರಿಸಲು ಸಾಧ್ಯವಾಗುತ್ತದೆ.

ಕೇಂದ್ರ ಸರಕಾರಿ ನೌಕರರಿಗೆ ಆರಂಭಿಸಿದ ಹೊಸ ಯೋಜನೆಯಲ್ಲಿ ನೌಕರರು ಸಂಬಳ ಮತ್ತು ತುಟ್ಟಿಭತ್ಯೆಯ ಶೇ.10 ವಂತಿಗೆ ಕೊಡಬೇಕು. ಸರಕಾರ ಅಷ್ಟೇ ವಂತಿಗೆ ನೀಡುತ್ತದೆ. ಪೆನ್ಷನ್ ಫಂಡ್ ಪ್ರಾಧಿಕಾರ ಈ ಪೆನ್ಷನ್ ನಿಧಿಯ ನಿರ್ವಹಣೆಯನ್ನು ಯಾರು ಮಾಡಬೇಕು ಎಂದು ನಿರ್ಧರಿಸುತ್ತದೆ. ಮೂರು ರೀತಿಯಲ್ಲಿ ಈ ನಿಧಿಯ ನಿರ್ವಹಣೆಗೆ ಅವಕಾಶ ನೀಡಲಾಗಿದೆ. ಆದರೆ ಮೂರರಲ್ಲೂ ಬೇರೆ ಬೇರೆ ಪ್ರಮಾಣದಲ್ಲಿ ಶೇರು ಮಾರುಕಟ್ಟೆಯಲ್ಲಿ ಈ ನಿಧಿಯನ್ನು ತೊಡಗಿಸಲಾಗುತ್ತದೆ. ಅಂದರೆ ಶೇರುಮಾರುಕಟ್ಟೆಯಲ್ಲಿ ತಮ್ಮ ವಂತಿಗೆಯಲ್ಲಾಗುವ ಏರುಪೇರುಗಳನ್ನು ನೌಕರರೇ ಎದುರಿಸಬೇಕು. ಮೊದಲಿನಂತೆ ನಿಗದಿತ ಪ್ರಮಾಣದ ಪೆನ್ಷನ್ ನಿರೀಕ್ಷಿಸುವಂತಿಲ್ಲ.

ಇದು ಪೆನ್ಷನ್ ನಿಧಿಗಳ ಖಾಸಗೀಕರಣಕ್ಕೆ ಅನುವು ಮಾಡಿಕೊಡುವ ಮಸೂದೆ. ಅಂತರ್‌ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ನವಉದಾರೀಕರಣವಾದಿಗಳು ಇದನ್ನು ಮುಂದೊತ್ತುತ್ತಿದ್ದಾರೆ. ಇದನ್ನು ಸಂಸತ್ತಿನಲ್ಲಿ ಎಡಪಕ್ಷಗಳು ವಿರೋಧಿಸುವುದಾಗಿ ಈಗಾಗಲೇ ಪ್ರಧಾನ ಮಂತ್ರಿಗಳಿಗೆ ತಿಳಿಸಲಾಗಿದೆ. ಸದ್ಯ ಈ ಮಸೂದೆಯನ್ನು ಹಣಕಾಸು ಇಲಾಖೆಯ ಸ್ಥಾಯೀ ಸಮಿತಿಗೆ ಒಪ್ಪಿಸಲಾಗಿದೆ.

**ವಿದೇಶಿ ಕೈಗಳಿಗೆ ದೇಶದ ಬ್ಯಾಂಕುಗಳು**

ಇನ್ನೊಂದು ಮಸೂದೆಯೆಂದರೆ ಬ್ಯಾಂಕಿಂಗ್ ನಿಯಂತ್ರಣ ತಿದ್ದುಪಡಿ ಮಸೂದೆ ಈಗಿರುವ ಕಾನೂನು ಸೆಕ್ಷನ್ 12ರ ಪ್ರಕಾರ ಖಾಸಗೀ ವಲಯದ ಬ್ಯಾಂಕುಗಳಲ್ಲಿ ಹೊಂದಿರುವ ಶೇರುಗಳ ಮೇಲೆ ಮತದಾನ ಹಕ್ಕನ್ನು ಶೇ.10ಕ್ಕೆ ಮಿತಿಗೊಳಿಸಲಾಗಿದೆ. ಈ ಮಸೂದೆ ಸೆಕ್ಷನ್ 12ನ್ನು ತೆಗೆದು ಹಾಕಿದೆಯೆಂದು ಹೇಳುತ್ತದೆ. ಬ್ಯಾಂಕಿಂಗ್ ಉದ್ದಿಮೆಯಲ್ಲಿ ವಿದೇಶಿ ನೇರ ಹೂಡಿಕೆಯ ಮಿತಿಯನ್ನು ಶೇ.74ಕ್ಕೆ ಏರಿಸಲು ಅನುವು ಮಾಡಿಕೊಡುವ ಈ ತಿದ್ದುಪಡಿ ಬಿಜೆಪಿ ನೇತೃತ್ವದ ಸರಕಾರ ಲೋಕಸಭಾ ಚುನಾವಣೆಯ ಸ್ವಲ್ಪವೇ ಮೊದಲು ಮಾರ್ಚ್ 5, 2004 ಈ ಬಗ್ಗೆ ಅಧಿಸೂಚನೆ ಹೊರಡಿಸಿತು. ಈಗಿನ ಪ್ರಧಾನಿಗಳೂ ನ್ಯಾಯಾರ್ಕಿಗೆ ಭೇಟಿ ನೀಡಿದಾಗ ಈ ಬಗ್ಗೆ ಮಾತುಕೊಟ್ಟಿದ್ದಾರೆ. ಅದಕ್ಕಾಗಿ ಈ



ತಿದ್ದುಪಡಿ ಮಸೂದೆ.

ಎಡಪಕ್ಷಗಳು ತಾವು ಏಕೆ ಇದನ್ನು ವಿರೋಧಿಸುತ್ತಿದ್ದೇವೆ ಎಂಬುದನ್ನು ವಿವರಿಸುವ ಟಿಪ್ಪಣಿಯನ್ನು ಫೆಬ್ರುವರಿ 2005 ರಲ್ಲಿ ಯುಪಿಎ-ಎಡಪಕ್ಷಗಳ ಸಮನ್ವಯ ಸಮಿತಿಗೆ ಸಲ್ಲಿಸಿದೆ. ಇದು ಬ್ಯಾಂಕಿಂಗ್ ವಲಯದ ಮೇಲಿನ ನಿಯಂತ್ರಣಗಳನ್ನು ಮತ್ತಷ್ಟು ಸಡಿಲಿಸುವ ಕ್ರಮವಾಗಿದ್ದು ಹಲವಾರು ಕಾರಣಗಳಿಗಾಗಿ ಇದನ್ನು ವಿರೋಧಿಸುತ್ತದೆ. ಬ್ಯಾಂಕಿಂಗ್ ನಿಯಂತ್ರಣಗಳನ್ನು ಸಡಿಲಿಸಿದರೆ ಸಟ್ಟಾಕೋರತನ ಹೇಗೆ ಹೆಚ್ಚುತ್ತದೆ ಎಂಬುದರ ಉದಾಹರಣೆಯನ್ನು ಭಾರತದಲ್ಲೇ ನಾವು ಗ್ಲೋಬಲ್ ಟ್ರಸ್ಟ್ ಬ್ಯಾಂಕ್ ಮತ್ತು ನೆಡುಂಗಡಿ ಬ್ಯಾಂಕಿನ ಪ್ರಕರಣಗಳಲ್ಲಿ ನೋಡಿದ್ದೇವೆ. ರಿಸರ್ವ್ ಬ್ಯಾಂಕ್ ಕೂಡಾ ಬ್ಯಾಂಕಿಂಗ್ ವಲಯವನ್ನು ಮತ್ತಷ್ಟು ತೆರೆಯುವ ಬಗ್ಗೆ, ಯಾವುದೇ ಬ್ಯಾಂಕಿನಲ್ಲಿ ದೇಶೀ ಅಥವಾ ವಿದೇಶಿ ಹೂಡಿಕೆಗಳು ಹೆಚ್ಚಿನ ಪಾಲು ಪಡೆದು ಅದಕ್ಕನುಗುಣವಾಗಿ ಮತದಾನದ ಹಕ್ಕನ್ನು ಚಲಾಯಿಸುವುದರ ಅಪಾಯದ ಬಗ್ಗೆ ಎಚ್ಚರಿಕೆಯಿಂದ ವರ್ತಿಸುತ್ತದೆ.

ಎಫ್‌ಡಿಐ ಮಿತಿಯನ್ನು ಏರಿಸಿದರೆ ಹೊಸ ತಂತ್ರಜ್ಞಾನ, ಹೊಸ ನಿವಾಹಣಾ ಕ್ರಮಗಳು ಬರುತ್ತವೆ ಎಂಬ ಹಣಕಾಸು ಮಂತ್ರಿಗಳ ವಾದವನ್ನು ಸಿಪಿಐ(ಎಂ) ಸ್ವೀಕರಿಸುವುದಿಲ್ಲ. ವಾಸ್ತವವಾಗಿ ಈ ಮಸೂದೆಯ ಮೂಲಕ ಭಾರತೀಯ ಖಾಸಗಿ ಬ್ಯಾಂಕುಗಳನ್ನು ವಿದೇಶಿ ಬ್ಯಾಂಕುಗಳು ವಹಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ. ಸಿಪಿಐ(ಎಂ) ಇಂತಹ ಪ್ರಯತ್ನದ ಜತೆಗೂಡುವುದು ಸಾಧ್ಯವಿಲ್ಲ. ಆದ್ದರಿಂದ ಈ ಮಸೂದೆ ಸಂಸತ್ತಿನಲ್ಲಿ ಪರಿಶೀಲನೆಗೆ ಬಂದಾಗ ಅದನ್ನು ವಿರೋಧಿಸಲಾಗುವುದು.

**ಜನಪರ ಶಾಸನಗಳಲ್ಲಿ ಮಂದಗತಿ !**

ಬಜೆಟ್ ಅಧಿವೇಶನ ಮುಗಿಯುತ್ತಾ ಬಂದರೂ ಬಹುಪಾಲು ಜನಗಳಿಗೆ ಮಹತ್ವದ್ದಾದ ಮಸೂದೆಗಳನ್ನು ಕೈಗೆತ್ತಿಕೊಳ್ಳಲಾಗಲೀ, ಶಾಸನಗಳನ್ನು ಅಂಗೀಕರಿಸುವಲ್ಲಾಗಲೀ ಯುಪಿಎ ಸರಕಾರ ವಿಫಲವಾಗಿದೆ. ಗ್ರಾಮೀಣ ಉದ್ಯೋಗ ಭರವಸೆ ಮಸೂದೆ ಅಂಗೀಕಾರ ಈ ಅಧಿವೇಶನದಲ್ಲಿ ಸಾಧ್ಯವಾಗಿಲ್ಲ. ಏಕೆಂದರೆ ಅದನ್ನು ಸ್ಥಾಯೀಸಮಿತಿಗೆ ಒಪ್ಪಿಸಿದ್ದು ಎನ್‌ಡಿಎ ಸಂಸತ್ ಬಹಿಷ್ಕಾರದಿಂದಾಗಿ ಅದು ಅಲ್ಲೇ ನಿಂತಿದೆ. ಬಿಜೆಪಿ ಬಹಿಷ್ಕಾರದ ಮೊದಲೂ ಸರಕಾರ ಪ್ರತಿಯೊಂದು ಗ್ರಾಮೀಣ ಕುಟುಂಬದ ಒಬ್ಬ ವ್ಯಕ್ತಿಗೆ ಕನಿಷ್ಟ 100 ದಿನಗಳ ಕೆಲಸ ಒದಗಿಸುವ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಭರವಸೆಯನ್ನು ಈಡೇರಿಸುವ ಬಗ್ಗೆ ಗಂಭೀರ ಪ್ರಯತ್ನವನ್ನೇನೂ ಮಾಡಲಿಲ್ಲ. ಈ ಮಸೂದೆಯಲ್ಲಿ ಹಲವು ಅಂಶಗಳನ್ನು ದುರ್ಬಲಗೊಳಿಸಲಾಗಿದೆ.

ಇನ್ನೊಂದು ಮಸೂದೆ ಲಕ್ಷಾಂತರ ಬುಡಕಟ್ಟು ಜನಗಳಿಗೆ, ಅರಣ್ಯವಾಸಿಗಳಿಗೆ ಬಹಳ ಮುಖ್ಯವಾದದ್ದು. ಪರಿಶಿಷ್ಟ ಬುಡಕಟ್ಟುಗಳು ಮತ್ತು ಅರಣ್ಯವಾಸಿಗಳ (ಹಕ್ಕುಗಳ ನಿಯಂತ್ರಣ) ಮಸೂದೆಯನ್ನು ಕೇಂದ್ರ ಸರಕಾರ ನಿರ್ಧರಿಸಿದಂತೆ ಕೈಗೆತ್ತಿಕೊಳ್ಳಲಿಲ್ಲ. ಈ ಮಸೂದೆ ಆದಿವಾಸಿಗಳಿಗೆ ಮತ್ತು ಅರಣ್ಯವಾಸಿಗಳಿಗೆ ಬದುಕಿನ ಹಕ್ಕು ಹಾಗೂ ಹಳ್ಳಿಗಳಲ್ಲಿ ತಮ್ಮ ಜೀವನ ಸಾಗಿಸುವ ಹಕ್ಕು ನೀಡುವ ಮಸೂದೆ. ಇದೂ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ನೀಡಿದ ಭರವಸೆ. ಅದನ್ನು ಈಡೇರಿಸುವಲ್ಲಿಯೂ ವಿಫಲತೆ ಕಾಣುತ್ತಿದೆ.

ಯುಪಿಎ ಸರಕಾರ ನವಂಬರ್ 2004 ರಲ್ಲಿ ಪ್ರಕಟಿಸಿದ 'ಕೂಲಿಗಾಗಿ ಕಾಳು' ಕಾರ್ಯಕ್ರಮ ಈಗ 150 ಹಿಂದುಳಿದ ಜಿಲ್ಲೆಗಳಲ್ಲಿ ಜಾರಿಯಲ್ಲಿದೆ. ಜನಸಂಖ್ಯೆಯನ್ನು ಅನುಸರಿಸಿ ಪ್ರತಿ ಜಿಲ್ಲೆಗೆ 50ರಿಂದ 100 ಕೋಟಿ ರೂಗಳನ್ನು ನೀಡಲಾಗಿದೆ ಎಂದು ವರದಿಯಾಗಿದೆ. ಇದನ್ನು ಎಷ್ಟರಮಟ್ಟಿಗೆ ಜಾರಿಗೆ ತರಲಾಗಿದೆ, ಹಣ ಮತ್ತು ಆಹಾರ ದಾಸ್ತಾನಿನ ಸೂಕ್ತ ಬಳಕೆಯಾಗುತ್ತಿದೆಯೇ ಎಂದು ಪರಿಶೀಲಿಸಲು ಪಕ್ಷ ನಿರ್ಧರಿಸಿದೆ. ಹಿಂದಿನ ಅನುಭವಗಳ ಆಧಾರದ ಮೇಲೆ, ಈ ಕಾರ್ಯಕ್ರಮಗಳ ನಿಜವಾದ ಫಲ ವ್ಯವಸ್ಥಿತ ಭ್ರಷ್ಟಾಚಾರ, ಹಣ ದುರುಪಯೋಗದಿಂದಾಗಿ ಜನಗಳಿಗೆ ತಲುಪುತ್ತಿಲ್ಲ ಎಂಬ ನೈಜ ಆತಂಕವಿದೆ. ಉತ್ತರ ಪ್ರದೇಶದಲ್ಲಿ ಬಡತನದ ರೇಖೆಯ ಕೆಳಗಿನ ಆಹಾರ ದಾಸ್ತಾನನ್ನು ಮಾರಾಟ ಮಾಡಿದ ಬಹುಕೋಟಿ ಹಗರಣವಾಗಿದೆ. ಮತ್ತು ಬಿಹಾರದಲ್ಲಿ ಇತ್ತೀಚಿಗೆ ಬರಪರಿಹಾರ ನಿಧಿಯನ್ನು ಜೇಬಿಗಿಳಿಸಿದ ಹಗರಣ ವರದಿಯಾಗಿದೆ. ಇದನ್ನೇ ನೆರವಾಗಿ ಕೊಟ್ಟು ಗ್ರಾಮೀಣ ಬಡವರಿಗೆ ನೆರವಾಗುವ ಈ ಕಾರ್ಯಕ್ರಮದ ಪ್ರಮಾಣವನ್ನು ತಗ್ಗಿಸುವುದನ್ನು ಯುಪಿಎ ಸರಕಾರ ಸಮರ್ಥಿಸಿಕೊಳ್ಳಲು ಹೋಗಬಾರದು. ಅದರ ಬದಲು ಸರಕಾರ ರೇಶನ್ ವ್ಯವಸ್ಥೆಯ ಆಹಾರ ದಾಸ್ತಾನುಗಳನ್ನು ಬೇರೆಡೆಗೆ ಸಾಗಿಸುವುದು, ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗಾವಕಾಶ ನಿರ್ಮಾಣ ಯೋಜನೆಗಳ ಹಣದ ದುರುಪಯೋಗಗಳನ್ನು ತಡೆಯಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.


“ಯುಪಿಎ ಸರಕಾರ ದೊಡ್ಡ ಬಂಡವಾಳಿಗರು ಮತ್ತು ಅಂತರ್‌ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಅನುಕೂಲಕರವಾದ ನೀತಿಗಳನ್ನು ರೂಪಿಸುವಲ್ಲಿ ಬಹಳ ಆತುರ ತೋರಿದರೆ ಅತ್ತ ಕಾರ್ಮಿಕವರ್ಗ ಮತ್ತು ದುಡಿಯುವ ಜನಗಳ ಹಿತಾಸಕ್ತಿಗಳ ರಕ್ಷಣೆಯಲ್ಲಿ ವಿಳಂಬ ಮತ್ತು ನಿರ್ಲಕ್ಷ್ಯವನ್ನು ತೋರಿದೆ ಎಂದು 18ನೇ ಮಹಾಧಿವೇಶನ ರಾಜಕೀಯ ನಿರ್ಣಯದ ಮಾತಿನ ಸತ್ಯತೆಯನ್ನು ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಎತ್ತಿಕೊಂಡ ಶಾಸನಗಳ ದಾಖಲೆ ದೃಢಪಡಿಸಿದೆ.

ಯುಪಿಎ ಸರಕಾರ ಅಧಿಕಾರದಲ್ಲಿ ಒಂದು ವರ್ಷವನ್ನು ಪೂರೈಸುತ್ತಿರುವಾಗ ಅದರ ಮುಖಂಡತ್ವ ಈ ಪಕ್ಷಪಾತದ ಬಗ್ಗೆ ಯೋಚಿಸುವುದು ಸೂಕ್ತ.

# ಜೆಡಿ(ಎಸ್)-ಕಾಂಗ್ರೆಸ್ ನಡುವಿನ ಸಮರ: ಮುಂದೇನು?

**ಅಧಿಕಾರದಲ್ಲಿದ್ದು ವಿರೋಧ ಪಕ್ಷದ ಸ್ಥಾನ ಪಡೆವ ಹೋರಾಟ ಜೆಡಿ(ಎಸ್) ನದ್ದು. ಸ್ವತಂತ್ರ ಅಸ್ತಿತ್ವಕ್ಕೆ ವಾಗ್ಯುದ್ಧವೆಂದರೂ ಇದರಲ್ಲಿ ಜನರ ಜ್ವಲಂತ ಪ್ರಶ್ನೆಗಳ ಪ್ರಸ್ತಾಪವಿಲ್ಲ. ಸರ್ಕಾರದ ಜನವಿರೋಧಿ-ಆರ್ಥಿಕ ನೀತಿಗಳತ್ತ ಗುರಿಯಿಲ್ಲ. ಕೋಮುವಾದಿ ಶಕ್ತಿಗಳನ್ನು ಮೂಲೆ ಗುಂಪಾಗಿಸುವ ಗುರಿ ಮರೆತು ಹೋಗಿದೆಯೇ? ಅಥವಾ.....**

ಕಂತುಗಳಲ್ಲಿ ಕದನ ಸಾರಿದ್ದಾರೆ ದೇವೇಗೌಡರವರು. ಕರ್ನಾಟಕದ ಮೈತ್ರಿಕೂಟ ಸರ್ಕಾರದ ಭಾಗಿದಾರ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿ(ಎಸ್) ನ ನಡುವೆ ವಾಗ್ವಾದ, ಕದನ. ಹೊಸತೇನಲ್ಲವಾದರೂ, ಈ ಅವಧಿಯಲ್ಲಿ ಸಿಡಿದ ಕಿಡಿಗಳು ಹೊತ್ತಿಕೊಂಡು ಉರಿವ ಬೆಂಕಿಯಾಗುತ್ತಿದೆ. ಇಬ್ಬರೂ ಸೇರಿಯೇ ಸರ್ಕಾರ ರಚಿಸಲಾಗಿದೆಯಾದರೂ ಅವರವರ ಅಸ್ತಿತ್ವ ಕಾಪಾಡಿಕೊಳ್ಳಲೆಂದು ಭಿನ್ನರೆಂದು ತೋರಿಸಿಕೊಳ್ಳಲೆಂದೇ ವಾಗ್ವಾದಕ್ಕೆ ಎಳಸಲಾಗುತ್ತಿತ್ತು. ಬೀದರ್‌ನಂತಹ ಲೋಕಸಭೆ ಉಪಚುನಾವಣೆಯಲ್ಲಿ ಮತ್ತು ಗ್ರಾಮ ಪಂಚಾಯತ್ ಚುನಾವಣೆಗಳಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿ ಹೋರಾಡುವ ಮೂಲಕ ತೋರ್ಪಡಿಸಿಕೊಳ್ಳಲು ಯತ್ನಿಸಲಾಗುತ್ತಿದೆ ಎಂದು ಬಿಂಬಿಸಲಾಗಿತ್ತು. ಆದರೆ ಬಹುತೇಕ ಬಾರಿಯ ಈ 'ವರಸೆ' ಬಾಯ್ಮಾತಿನ - ವ್ಯಾಗ್ಯುದ್ಧಗಳ ಮಟ್ಟದಲ್ಲೇ ಹೆಚ್ಚು ವಿಜೃಂಭಿಸಿ, ಜನತೆಯ ಯಾವುದೇ ಪ್ರಶ್ನೆಗಳು ಮರೆಯಾಗಿ ವೈಯಕ್ತಿಕ ದೂಷಾರೋಪಣೆಯಾಗಿ ಸಾರಿದ ಹಿತವೇ ಸೊರಗಿ ಹೋಗುತ್ತಿದ್ದ ಹೆಚ್ಚು. ಕೋಮುವಾದಿಗಳನ್ನು ದೂರವಿರಿಸಲೆಂದೇ ಸರ್ಕಾರ ರಚಿಸಿದ್ದೇವೆ ಎಂದು ಇವರೆಷ್ಟೇ ಹೇಳಿಕೊಂಡರೂ ಕೋಮುವಾದವನ್ನು - ಕೋಮುವಾದಿ ಶಕ್ತಿಗಳ ಹುನ್ನಾರ - ಅಟ್ಟಹಾಸಗಳನ್ನು ಮಟ್ಟಹಾಕಿ, ಜನತೆಯನ್ನು ಎಚ್ಚರಿಸುವ ರಕ್ಷಿಸುವ 'ಕರ್ತವ್ಯ' ಎರಡೂ ಪಕ್ಷಗಳ ನಾಯಕರಲ್ಲಿ ಕಾಣೆಯಾಗಿರುತ್ತಿದ್ದ ಅಂಶ. ಹೀಗಾಗಿ ಇದು ಅಧಿಕಾರ - ಹಂಚಿಕೆಯ ಕಿತ್ತಾಟದ ಒಂದು ಬಹಿರಂಗ ಜಗಳದಂತೆ ಜನರಿಗೆ ಕಾಣುತ್ತಿತ್ತು.



ಎಚ್ಚರಿಕೆಯ ಹಿಂದೇನು? ಮುಂದೇನು?

ಜೆಡಿ(ಎಸ್) ನಿಂದ ಬೆಂಗಳೂರಿನಲ್ಲಿ ಗ್ರಾಮ ಪಂಚಾಯತ್ ಸದಸ್ಯರ ಸಮಾವೇಶ - ಇಲ್ಲಿ ಹಾರಿಸಲಾದ ಭೂಕಬಳಿಕೆಯ ಗುಂಡು ಹುಟ್ಟಿಸಿದ ಪರಸ್ಪರ ವಾಗ್ವಾದ-ಅದನ್ನು ಬೆನ್ನಟ್ಟಿ ಸಂಘಟಿಸಿದ ದರಿದ್ರ ನಾರಾಯಣರ ಸಮಾವೇಶ ಅರ್ಥಾತ್ ಹೈಟೆಕ್ ನಗರದ ಬಡವರ ಸಮಾವೇಶ ಕಾಂಗ್ರೆಸ್‌ನ ಮೇಲೆ ಜೆಡಿ(ಎಸ್) ನ ನಾಯಕರಾದ ದೇವೇಗೌಡರವರು ಸಾರಿದ ಯುದ್ಧವಾಗಿತ್ತು. ಈ ಸರ್ಕಾರದ ಅಧಿಕಾರದಲ್ಲಿನ ಪಾಲು ಇನ್ನೂ ಸಿಗಬೇಕು, ನಿಗಮ-ಮಂಡಳಿಗಳಿಗೆ ನೇಮಕವಾಗಬೇಕು ಎಂಬ ಅತೃಪ್ತಿ. ಈ ಸ್ಥಿತಿಗೆ ಕಾಂಗ್ರೆಸ್ಸೇ ಕಾರಣವೆಂದು ದೂರುವ - ತೋರುವ ಇರಾದೆಗಳಿದ್ದರೂ ಇನ್ನೊಂದೆಡೆ ಭೂಕಬಳಿಕೆಯಂತಹ ವಿಶಿಷ್ಟ ಪ್ರಶ್ನೆಯಲ್ಲಿ ಬಹುತೇಕವಾಗಿ ಕಾಂಗ್ರೆಸ್‌ನ ಒಂದು ಬಣದ ಮೇಲೆ ಎಸೆದ ಬಾಣವಾಗಿದೆಯೆಂದೇ ಕಾಂಗ್ರೆಸ್ ನಾಯಕರೂ ಭಾವಿಸಿದ್ದಾರೆ.

## ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಬೆಂಗಳೂರಿನ ಸುತ್ತಮುತ್ತ ಮತ್ತು ಬೆಂಗಳೂರು ನಗರದಲ್ಲಿಯೇ ಸರ್ಕಾರದ ಮತ್ತು ಖಾಸಗಿಯ ಜಮೀನನ್ನು ಮನಬಂದಂತೆ ಕಬಳಿಸುತ್ತಿರುವ, ಅದಕ್ಕಾಗಿ ಮಾಡಬಾರದ ಕೃತ್ಯಗಳೇ ಇಲ್ಲವೆನ್ನುವಂತಹ ಘೋರ ಪಾತಕಿ ಶಕ್ತಿಗಳ ಹರಿದಾಟ, ಸ್ಪಷ್ಟ ಗೋಚರ. ಭೂ ಮಾಫಿಯಾಗಳು ಬೆಳೆಯಲು ತಳವೂರಲು ತೊಡಗಿವೆ. ಇದಕ್ಕೆ ಕಡಿವಾಣ ಹಾಕಿ, ಬಗ್ಗುಬಡಿಯುವುದು ಅಗತ್ಯವಿದೆ.

ಈ ದೃಷ್ಟಿಯಲ್ಲಿ ಜೆಡಿ(ಎಸ್) ನಾಯಕರು ಎತ್ತಿರುವ ಪ್ರಶ್ನೆ ಸಹಜವಾದುದು. ಆದರೆ ಏಳುವ ಪ್ರಶ್ನೆಯೆಂದರೆ ಅಧಿಕಾರ-ಸರ್ಕಾರದ ಶಕ್ತಿ ಬಳಸಿ ಇದನ್ನು ಮಟ್ಟ ಹಾಕಲಾಗದೇ? ಸರ್ಕಾರವಾಗಿ ಮಾಡಬಹುದಾದನ್ನು ಬಿಟ್ಟು ಬೀದಿಯ ರಂಪಾಟ ಮಾಡಿದರೆ? ಇದು ನಿಜವಾದ ಒಳಗುಟ್ಟೇನು ಎಂದ ಕೇಳಲಾಗುತ್ತಿದೆ. ದೇವೇಗೌಡರು ಎತ್ತಿದ ಪ್ರಶ್ನೆಗಳಿಗೆ ಕಾಂಗ್ರೆಸ್ ಪಕ್ಷದ ನಾಯಕರು ಪ್ರತಿಕ್ರಿಯಿಸಿದ ರೀತಿ ಅವರು ದಿಗಿಲುಗೊಂಡಿದ್ದಾರೆ ಎಂಬುದನ್ನು ತೋರಿಸುತ್ತದೆ. ದರಿದ್ರ ನಾರಾಯಣ ಸಮಾವೇಶವನ್ನು ಎದುರಿಸಿದ್ದು 'ಒಕ್ಕಲಿಗ ನಾಯಕರ' ಸಭೆ ನಡೆಸುವ ಮೂಲಕ. ಇದು ವ್ಯರ್ಥ ಕಸರತ್ತು ಮಾತ್ರವಲ್ಲ ಜಾತಿಯ ರಾಜಕಾರಣದಲ್ಲಿ ಮುಖ ಉಳಿಸಿಕೊಳ್ಳುವ ತಂತ್ರವಾಗಿತ್ತು. ಇದು ಎದ್ದಿರುವ ಪ್ರಶ್ನೆಗೆ ಸಮಾಧಾನಕರವಾಗಿ ಉತ್ತರಿಸುವ ದೃಷ್ಟಿಯಲ್ಲಿ ಇರಲೇಇಲ್ಲ. ಹೇಗಾದರೂ ರಕ್ಷಿಸಿಕೊಳ್ಳುವ ಹೆಣಗಾಟದಂತೆ ಕಂಡಿತು.

ಇಲ್ಲಿ ಮುಖ್ಯ ರಾಜಕೀಯ ಪ್ರಶ್ನೆ : ಇವೆರಡೂ ಪಕ್ಷಗಳು ಹೀಗೆ ಇಳಿಯುತ್ತಿರುವುದರಿಂದಾಗಿ, ಅಸ್ತಿತ್ವ-ಅದರ ಉಳಿವಿನ ಬಗ್ಗೆಯೇ ಅನುಮಾನದ ಹುಟ್ಟಿಗೆ ಕಾರಣವಾಗಿ ಸರ್ಕಾರವೇ ಅತಂತ್ರವೆಂಬ ಭಾವನೆ ಹುಟ್ಟಿಸಿದೆ. ಇದರ ಪರಿಣಾಮವಾಗಿ ಆಡಳಿತದ ಮೇಲೆ ನಿಯಂತ್ರಣವೇ ಇಲ್ಲವಾಗಿ ಅಧಿಕಾರ ಶಾಹಿಗಳದ್ದೇ ಕಾರುಬಾರಾಗಿ ಜನತೆಯ ಸಮಸ್ಯೆಗಳಿಗೆ ಸ್ಪಂದಿಸದ, ಜನವಿರೋಧಿ ಆಡಳಿತವಾಗಿ ಮಾರ್ಪಡುತ್ತಿದೆ. ಅಧಿಕಾರಿಗಳ ಉನ್ನತ ಸಭೆಯಲ್ಲಿ ಮುಖ್ಯ ಮಂತ್ರಿ ಧರಂಸಿಂಗ್ ಹಾಗೂ ಉಪಮುಖ್ಯಮಂತ್ರಿ ಸಿದ್ದರಾಮಯ್ಯನವರು ಅದೆಷ್ಟೇ 'ಚಾಟಿ ಬೀಸಿ'ದರೂ ಅದು ತಗುಲದೇ ಹೋಗುತ್ತಿದೆ. ಜನರು ಬರದ ಬೇಗೆ, ಕೆಲಸವಿಲ್ಲದ ಹತಾಶ ಸ್ಥಿತಿ, ಕುಡಿವ ನೀರಿನ ಬವಣೆಯಂತಹ ಪ್ರಶ್ನೆಗಳು ಸಮಸ್ಯೆಗಳೆಂಬುದನ್ನೇ ಮರೆಸಿಬಿಟ್ಟಿರೆ ಇಂತಹ ಸನ್ನಿವೇಶದಲ್ಲಿ ಕೋಮುವಾದಿ ಸಂಘ ಪರಿವಾರ - ಬಿಜೆಪಿಯು ದುರ್ಲಾಭ ಹೊಡೆಯಲು ಸಕ್ರಿಯವಾಗಿದೆ. ಕಾಂಗ್ರೆಸ್ - ಜೆಡಿ(ಎಸ್) ಪಕ್ಷಗಳಿಗೆ ಬಿಜೆಪಿಯನ್ನು ಎದುರಿಸುವುದನ್ನು ಸಂಪೂರ್ಣ ನಿರ್ಲಕ್ಷಿಸಿದೆ. ದೇವೇಗೌಡರು ಸಾರಿರುವ ಸಮರದಲ್ಲಿ ಕಾಂಗ್ರೆಸ್‌ನ - ಸೆಕ್ಯುಲರ್ ಮತಗಳಿಗೆ ಕೈ ಹಾಕುವುದರತ್ತ ಗುರಿಯಾಗಿದೆ. ರಾಜ್ಯದಲ್ಲಿ ಬೆದರಿಕೆ ಒಡ್ಡಿ, ಅಧಿಕಾರ ಹಿಡಿವ ಅಪಾಯದ ಶಕ್ತಿಯನ್ನು ಹೊಂದಿರುವ ಕೋಮುವಾದಿಗಳನ್ನು-ಬಿಜೆಪಿಯನ್ನು ಎದುರಿಸುವುದು, ಅದನ್ನು ದುರ್ಬಲಗೊಳಿಸುವುದು ಜೆಡಿ(ಎಸ್) ಗೆ ಬೇಕಿಲ್ಲ. ಕಾಂಗ್ರೆಸ್‌ಗೂ. ಜನತೆಯ ಪ್ರಶ್ನೆಗಳನ್ನು ಇತ್ಯರ್ಥಪಡಿಸಬೇಕು. ಈಗಿನ ಉದಾರೀಕರಣ-ಖಾಸಗೀಕರಣದ ಹಾದಿ ತೊರೆಯಬೇಕು. ಅದಕ್ಕೆ ಸಿದ್ಧರಿಲ್ಲದೇ ಈ ದೊಂಬರಾಟ! ಅಂತಹ ಸಂದರ್ಭ ಬಂದರೆ ಬಿಜೆಪಿ ಬೆಂಬಲ ಪಡೆದು ಸರ್ಕಾರ ರಚಿಸಿ ಬಿಟ್ಟರೆ? ಯಾಕೆ ನೋಡಬಾರದು ಎಂಬ ಯೋಚನೆ ಜೆಡಿ(ಎಸ್) ನೊಳಗಿನಿಂದ ಕೆಲವರ ಲೆಕ್ಕಾಚಾರದ ಪ್ರಭಾವವೂ ಇರಬಹುದು.

ಆದ್ದರಿಂದ ಜೆಡಿ(ಎಸ್) - ಕಾಂಗ್ರೆಸ್ ಜನರ ಮೂಲಭೂತ ಪ್ರಶ್ನೆಗಳತ್ತ ಗಮನ ಹರಿಸಲಿ. ಕೋಮುವಾದ ಎದುರಿಸಲಿ.



ಇಷ್ಟೇ ನಡುವೆಯೇ ಜೆಡಿ(ಎಸ್) ಈ ಅವಧಿಯಲ್ಲಿ ಸುಮ್ಮನೇ ಮಾತು ವ್ಯಾಗ್ಯುದ್ಧಕ್ಕೆ ಸೀಮಿತಗೊಳಿಸಿಕೊಂಡು ಕುಳಿತಿಲ್ಲ. ಅದು ವಿರೋಧ ಸ್ಥಾನವನ್ನು ಆಕ್ರಮಿಸಲು ತೊಡಗಿರುವಾಗಲೇ ತನ್ನ ಸಂಘಟನಾ ರಾಜಕೀಯ ಶಕ್ತಿಯನ್ನು ವೃದ್ಧಿಸಿಕೊಳ್ಳುವ - ಕ್ರೋಢೀಕರಿಸಲು ಮುಂದಾಗಿರುವುದು ವಿಶೇಷ ಬೆಳವಣಿಗೆಯಾಗಿದೆ.

# ರಂಜನೆ, ಬೋಧನೆ, ಪ್ರಚೋದನೆ... ಪತ್ರಿಕೆಯ ಅಭಿವ್ಯಕ್ತಿ ಸ್ವಾತಂತ್ರ್ಯ ರಕ್ಷಣೆ ವೈಖರಿ

'ಕಳೆದವಾರ ಆಗಲಿಲ್ಲ, ಈ ವಾರಕ್ಕೆ ಪ್ರಕಟಿಸುತ್ತೇವೆ' ಎಂದರು ರಂಜನೆ, ಬೋಧನೆ, ಪ್ರಚೋದನೆ... ಪತ್ರಿಕೆಯ ಸಂಪಾದಕಿಯವರು. 'ಆಗಲಿ' ಎಂದೆ.

'ಇಡೀ ಹಾಕಿದರೆ ಕೇಸ್ ಹಾಕಿ ಬಿಟ್ಟಾರು ಮಾರಾಯ' ಎಂದೂ ಪ್ರತಿಕ್ರಿಯೆಗಾಗಿ ಪ್ರಚೋದಿಸಿದರು. 'ಹಾಕಲಿ ಬಿಡಿ.. ಅದಕ್ಕೆ ಸಿದ್ಧರಾಗಿದ್ದೇವೆ' ನಗುತ್ತಾ ಹೇಳಿದೆ. 'ಇರಲಿ.. ಲೇಖನ ನೋಡುತ್ತೇನೆ' ಎಂದಾಗ ಮತ್ತೆ ಮಾತಿಗೆ ಸದ್ಯ ಏನೂ ಇಲ್ಲವೆಂದು ಮೇಡಂಗೆ ಥ್ಯಾಂಕ್ಸ್ ಹೇಳಿ ಫೋನ್ ಡಿಸ್‌ಕನೆಕ್ಟ್ ಮಾಡಿದೆ.

ಅವತ್ತು ಮಂಗಳವಾರ. ರಂಜನೆ, ಭೋದನೆ ಮಾರುಕಟ್ಟೆಗೆ ಬರುವುದು ಸೋಮವಾರ. ಕಳೆದ ವಾರದ ಬಳಿದಾಳೆ ಈಶರವರ ಲೇಖನಕ್ಕೆ ಪ್ರತಿಕ್ರಿಯೆ ನೀಡಿದ್ದ ನಮ್ಮ ಲೇಖನ ಪ್ರಕಟಣೆಯಾಗಿರಲಿಲ್ಲ. ಭವಿಷ್ಯ ಏನೆಂದು ತಿಳಿಯಲು ಸಂಪಾದಕರಿಗೆ ಫೋನಾಯಿಸಿದಾಗ ಬಂದ ಮಾತುಗಳು ಮೇಲಿನವು.

• • •

ಶನಿವಾರ ರಾತ್ರಿ 8.30 ರ ಸುಮಾರು. ನಮ್ಮ ಪತ್ರಿಕೆ ಮುದ್ರಣಕ್ಕೆ ಅಂತಿಮಗೊಳ್ಳುತ್ತಿದ್ದು ಕೊನೆ ಸಮಯವದು. ಗೌರಿಯವರ ಫೋನ್ ಎಂದು ರಿಸಿವರ್ ಕೈಗೆ ನೀಡಿದರು ಸಂಗಾತಿ.

'ಗುರುಶಾಂತ್, ಲೇಖನ ಉದ್ದವಾಗಿದೆ. ಒಂದು ಕಾಲಂಗೆ ಬರೆದುಕೊಡಿ' ಎಂದು ಅವರುಸಲಹೆ ನೀಡಿದಾಗ 'ಒಂದೇ ಕಾಲಂ, ಅದು ಕಷ್ಟ ಮೇಡಂ' ಎಂದೆ. ಚಟುವಟಿಕೆಗಳು, ಹೋರಾಟಗಳ ವಿವರಗಳುಬೇಕಿಲ್ಲ' ಎಂದರು. ಈಶರವರು ಲೇಖನದಲ್ಲಿ ಎತ್ತಿದ ತಕರಾರುಗಳಿಗೆ ಉತ್ತರವಾಗಿ ಅವು ಅಗತ್ಯವಾಗಿವೆ. ಜಾಗತೀಕರಣ-ಕೋಮುವಾದದ ವಿರುದ್ಧ ಪೀಪಲ್ಸ್ ವಾರ್ ಗುಂಪು ಮಾತ್ರವೇ ಹೋರಾಡಿದ್ದು ಎಂಬ ಅವರ ಅಭಿಪ್ರಾಯ ಸರಿಯಲ್ಲ ಎಂಬುದಕ್ಕೆ ಅವು ಅಗತ್ಯ' ಎಂದೆ. 'ನಾನೇ ಕತ್ತರಿ ಆಡಿಸಬಹುದು ಅಥವಾ ಹಾಕದೇ ಅದನ್ನೂ....' ಎನ್ನುತ್ತಾ 'ಅಲ್ಲ ಸುಮ್ಮನೇ ನಮಗೂ-ನಿಮಗೂ ಯಾಕೆ...'. 'ಯಾಕೆ ತಗಾದೆ ಎಂಬುದೇನಿಲ್ಲ. ಬಹುತೇಕ ಪ್ರತಿವಾರವೂ ಅಥವಾ ಸಂದರ್ಭ ಇಲ್ಲದಿರುವಾಗಲೂ ನೆಪ ಮಾಡಿಕೊಂಡು ಸಿಪಿಐ(ಎಂ) ನ್ನು ತೆಗಳುವ - ಕುಕ್ಕುವ ಬರಹಗಳು ನಿಮ್ಮಲ್ಲಿ ಪ್ರಕಟವಾಗುತ್ತಿವೆ. ಹೀಗಾಗಿ' 'ನೋಡಿ ಸಿಪಿಐ(ಎಂ) ಕೋಮುವಾದಿಗಳೊಂದಿಗೆ ಅಪವಿತ್ರ ಮೈತ್ರಿ ಮಾಡಿಕೊಂಡಿದೆ ಎಂದು ಈಶ ಬರೆದಿದ್ದಾರೆ. ಅದ್ಹೇಗೆ? ಎನ್ನುತ್ತಿದ್ದಂತೆ' ಅದು ಹಾಗಲ್ಲ. ಇವರನ್ನು (..........) ವಿರೋಧಿಸುವುದರಿಂದ ಅವರಿಗೆ ಬಲ-ಬೆಂಬಲವಾದಂತಾಗುತ್ತದಲ್ಲ ಎಂದು...' ಎಂದರು. 'ನಮ್ಮ ಟೀಕೆಗಳಿಗೆ ಉತ್ತರಿಸಲಿ ಆದರೆ ಇಂತಹ ವಿಚಿತ್ರ ಸುಳ್ಳು ಸಮೀಕರಣಗಳು...' ಎಂದೆ. 'ಅಲ್ಲ, ನೀವು ಕೋಮುಸೌಹಾರ್ದ ವೇದಿಕೆಯನ್ನು ಚುನಾವಣೆಗೆ ಇಳಿಯಬೇಕೆಂದಿದ್ದೀರಿ. ಅದು ಎಲ್ಲಾ ಸಂಘಟನೆಗಳು ಅಂಬ್ರೆಲಾ ಸಂಘ' ಅದ್ಹೇಗೆ ಇಳಿಯಲು ಸಾಧ್ಯ' ಎಂದರು ಪ್ರಶ್ನಿಸಿದರು. 'ನಾವು ಹೇಳಿರುವುದು ಹಾಗಲ್ಲ. ಚುನಾವಣೆಗೆ ಸ್ಪರ್ಧಿಸಬೇಕಿಲ್ಲ. ಕೋಮುವಾದದ ವಿರುದ್ಧ ಹೋರಾಡಲೆಂದೇ ಇರುವ ಈ ವೇದಿಕೆ ಕೋಮುವಾದಿ ಬಿಜೆಪಿಯನ್ನು ಕೇಂದ್ರದ ಅಧಿಕಾರದಿಂದ ತೊಲಗಿಸುವಒಂದು ನಿರ್ಣಾಯಕ ಸಂದರ್ಭ ಬಂದಾಗ ಕೋಮುವಾದಿಗಳನ್ನು ಸೋಲಿಸುವಂತೆ ಕರೆ ನೀಡಬೇಕಿತ್ತು. ಕೆಲಸ ಮಾಡಬೇಕಿತ್ತು. ದೇಶದಲ್ಲಿ ಇಂತಹ ಅನೇಕ ಸಂಘಟನೆಗಳು, ಬುದ್ಧಿಜೀವಿಗಳು ಬೀದಿಗಳಿದರು. ಮುಖಾಮುಖಿಯಾದರು. ಇಲ್ಲಿ ಆಗದಿರಲು ವೇದಿಕೆಯ ನೇತೃತ್ವದಲ್ಲಿ ಇರುವ ಪೀಪಲ್ಸ್ ವಾರ್ ಗುಂಪಿನ ರಾಜಕೀಯ ನಿಲುವುಗಳೇ ಅಡ್ಡಿ ಎಂದೆ. ಅವರು ಅದನ್ನು ಒಪ್ಪಲಿಲ್ಲ. ಕಾರಿಡಾರ್, ಅಭಿವೃದ್ಧಿ ಪ್ರಶ್ನೆ, ಪಶ್ಚಿಮ ಘಟ್ಟದ ಬಗೆಗಿನ ವರದಿಗಳು, ನಕ್ಸಲೀಯರು ಮತ್ತು ಸಂಘ ಪರಿವಾರದ ನಡುವಿನ ಸಮೀಕರಣ ಇತ್ಯಾದಿ ಪ್ರಶ್ನೆಗಳು ಬಂದುಹೋದವು.

'ಅಲ್ಲಾ ನೀವು ನಮ್ಮ ಲೇಖನ ಪ್ರಕಟಿಸಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯ, ಪತ್ರಿಕಾಧರ್ಮ ಎಂದು ಮಾತನಾಡಿದ್ದೀರಂತೆ' ಎಂದಾಗ ಆಶ್ಚರ್ಯವಾಯಿತು. 'ನಾನು ಎಲ್ಲೂ ಹಾಗೇ ಹೇಳಿಯೇ ಇಲ್ಲ ಪತ್ರಿಕೆಗೆ ಲೇಖನ ಪ್ರಕಟಿಸುವ ಯೋಜನೆಗಳಿಗೆ ಪೂರ್ವಸಿದ್ಧತೆ ಇರುವಾಗ ಸ್ವಲ್ಪ ವಿಳಂಬವಾಗಬಹುದು ಎಂಬ ಅರಿವಿದೆ' ಎಂದೆ. 'ನೀವಲ್ಲ, ನಿಮ್ಮವರು ಕೆಲವರು' ಎಂದರು. ನಾವ ಪ್ರತಿಕ್ರಿಯೆ ಬರೆದಿದ್ದು ಯಾರಿಗೂ ಇನ್ನೂ ತಿಳಿದಿಲ್ಲ. ಹೇಳುವ ಪ್ರಸಂಗವೇ ಬರೋಲ್ಲ. ಹೇಳಿಲ್ಲ ಎಂದು ಖಚಿತವಾಗಿ ಹೇಳಿದೆ. 'ಸರಿ ನೋಡಿ ಒಂದು ಕಾಲಂಗೆ ಸಂಕ್ಷಿಪ್ತಗೊಳಿಸಲು ನಿರ್ಧರಿಸಿ ನಾಳೆ ಬೆಳಿಗ್ಗೆ ಏನೆಂದು ಹೇಳಿ' ಎಂದರು. ಭಾನುವಾರ ಬೆಳಿಗ್ಗೆ ನಾನು ಫೋನ್ ಮಾಡಿ, 'ಮೇಡಂ, ಒಂದು ಕಾಲಂಗೆ ಕಷ್ಟವಾಗ್ತದೆ. ಲೇಖನ ನಿಮ್ಮ ಕೈಯಲ್ಲಿದೆ. ನೀವೇ ನೋಡಿ' ಎಂದೆ. 'ಆಯ್ತು' ಎಂದರು.

ಸೋಮವಾರ ಬಜಾರಿಗೆ ಬಂದ ರಂಜನೆ, ಭೋದನೆ, ಪ್ರಚೋದನೆ.... ಯಲ್ಲಿ ನಮ್ಮ ಪ್ರತಿಕ್ರಿಯೆ ಇರಲಿಲ್ಲ.

ಪೂರ್ವ ನಿರ್ಧಾರ ಮಾಡಿ ಅಭಿವ್ಯಕ್ತಿ ಸ್ವಾತಂತ್ರ್ಯ ಬಗ್ಗೆ ಅವರು ನಿನ್ನೆ ಹೇಳಿದರೇ ಎಂದು ನನಗಾಗ ನೆನಪಾಯಿತು.

# ಮೈಕೋ ಕಾರ್ಮಿಕ ಸಂಘದ ಚುನಾವಣೆ: ಸಿಐಟಿಯುಗೆ ಅಭೂತಪೂರ್ವ ವಿಜಯ

ಬೆಂಗಳೂರಿನ ಪ್ರತಿಷ್ಠಿತ ಕಾರ್ಖಾನೆಗಳಲ್ಲಿ ಮೈಕೊ ಕಾರ್ಖಾನೆಗೆ ಒಂದು ಪ್ರಮುಖ ಸ್ಥಾನ. ಇಲ್ಲಿಯ ಸಾರ್ವಜನಿಕ ಉದ್ದಿಮೆಗಳು ಮುಚ್ಚಿವೆ. ಕೆಲವು ರೋಗಗ್ರಸ್ಥಗೊಂಡಿವೆ. ಇಲ್ಲಿಯ ಕಾರ್ಮಿಕರು ಅತಂತ್ರ ಸ್ಥಿತಿಯಲ್ಲಿದ್ದಾರೆ. ಆದರೆ ಜರ್ಮನಿ ಮೂಲದ ಮೈಕೊ ಕಾರ್ಖಾನೆ ಕಾರ್ಮಿಕರ ನಾಯಕತ್ವ 20 ವರ್ಷಗಳಿಗೂ ಅಧಿಕ ಸಿಐಟಿಯು ವಹಿಸಿಕೊಂಡಿದೆ. ಬದಲಾದ ಸಂದರ್ಭದಲ್ಲಿ ಕಳೆದ ಚುನಾವಣೆಯಲ್ಲಿ ಅದು ಪರಾಜಯಗೊಂಡಿತು. ಇದೇ ಮೇ 12ರಂದು ನಡೆದ ಸಂಘ ಚುನಾವಣೆಯಲ್ಲಿ ಸಿಐಟಿಯು ಬೆಂಬಲಿತ ಆನೆ ತಂಡ ಅಭೂತಪೂರ್ವ ಜಯಗಳಿಸಿದೆ. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರು ಹಾಗೂ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಮತ್ತು ಸಂಘದ ಪ್ರ.ಕಾರ್ಯದರ್ಶಿ ಟಿ.ಶಿವಶಂಕರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜೆಕೆ ನಾಯರ್ ಮತ್ತು ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅನಂತ ಸುಬ್ಬರಾವ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದರು. ಸಂಘದ ನಿಯಮದ ಪ್ರಕಾರ ಕಾಂ. ವಿ.ಜೆ.ಕೆ ಪರವಾಗಿ ರೇವಣಸಿದ್ದಯ್ಯ ಸ್ಪರ್ಧಿಸಿದ್ದರು. ರೇವಣಸಿದ್ದಯ್ಯ 1489 ಮತಗಳಿಸಿದರೆ ಅನಂತಸುಬ್ಬರಾವ್ 774 ಮತಗಳಿಸಿದ್ದಾರೆ. ಮೇ 12ರಂದು ನಡೆದ ಈ ಚುನಾವಣೆಯಲ್ಲಿ ಸಿಐಟಿಯು ಬೆಂಬಲಿತ ಆನೆತಂಡ ಎಲ್ಲಾ ಏಳು ಪದಾಧಿಕಾರಿ ಸ್ಥಾನಗಳಲ್ಲೂ ಜಯಗಳಿಸಿದೆ. ಕಮಿಟಿಯಲ್ಲಿ 20ರಲ್ಲಿ 18 ಸ್ಥಾನಗಳಲ್ಲಿಯೂ ಹಾಗೂ ಜನರಲ್ ಕೌನ್ಸಿಲ್‌ನ 60 ಸ್ಥಾನಗಳಲ್ಲಿ 53 ಸ್ಥಾನಗಳನ್ನು ಗೆಲ್ಲುವ ಮೂಲಕ ಪ್ರಚಂಡ ಜಯ ದಾಖಲಿಸಿದೆ. ಶೇ.63ಕ್ಕೂ ಅಧಿಕ ಮತಗಳಿಸಿದೆ. ಜಿಂಕೆ ತಂಡ ಗೆದ್ದ ಕೌನ್ಸಿಲ್‌ನ 7 ಸ್ಥಾನಗಳಲ್ಲಿ 3 ಸ್ಥಾನಗಳನ್ನು ಅನೀತಿ ಹಾಗೂ ಕಪಟತನದಿಂದ ಗೆದ್ದಿದೆ.

ಜುಲೈ 1,2002 ರಲ್ಲಿ ಮೈಕೊ ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದ ಕಾಂ.ಎಸ್.ಸೂರ್ಯನಾರಾಯಣರಾವ್ ನಿಧನದ ನಂತರ 2003ರ ಮಾರ್ಚ್ 19ರಂದು ನಡೆದ ಚುನಾವಣೆಯಲ್ಲಿ ಎಐಟಿಯುಸಿ ಬೆಂಬಲಿತ ಜಿಂಕೆ ತಂಡ ಗೆದ್ದು ಬಂದಿತು. ಕಾಂ.ಸೂರಿಯವರು 2000ರಿಂದ ಕಾರ್ಮಿಕರ ಸೌಲಭ್ಯಗಳಿಗಾಗಿ ಕಾರ್ಖಾನೆ ಆಡಳಿತ ಮಂಡಳಿ ಜೊತೆ ನಡೆಸುತ್ತಿದ್ದ ಮಾತುಕತೆಗೆ ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದ ಅನಂತಸುಬ್ಬರಾವ್ ನೇತೃತ್ವದ ಜಿಂಕೆ ತಂಡ ಬಾರಿ ಒತ್ತಡ ಮತ್ತು ಗೂಂಡಾಗಿರಿ ಮೂಲಕ ಮಾತುಕತೆ ಸರಿಯಾಗಿ ನಡೆಯದ ಹಾಗೆ, ಒಪ್ಪಂದವಾಗದ ಹಾಗೆ ವರ್ತಿಸಿತು. ಕಾರ್ಮಿಕರಿಗೆ ವಿಶೇಷ ಸೌಲಭ್ಯಗಳು ದೊರಕಿಸಿಕೊಡುವ ಭರವಸೆ ನೀಡಿ ಅನಂತಸುಬ್ಬರಾವ್ ನೇತೃತ್ವದ ಜಿಂಕೆ ತಂಡ ಗೆದ್ದುಬಂತು.

**ಪದಾಧಿಕಾರಿಗಳು**

ಅಧ್ಯಕ್ಷರು : ರೇವಣಸಿದ್ದಯ್ಯ,ಹೆಚ್.ಎಂ (ವಿ.ಜೆ.ಕೆ.ನಾಯರ್ ಪರವಾಗಿ)
ಮೊ.ಉಪಾಧ್ಯಕ್ಷರು : ಬಾಲಸುಬ್ರಮಣಿ.ಆರ್
ಎರಡನೆ ಉಪಾಧ್ಯಕ್ಷರು : ಪುಷ್ಪರಾಜ್.ಆರ್
ಪ್ರಧಾನ ಕಾರ್ಯದರ್ಶಿ : ಶಿವಶಂಕರ್.ಟಿ
ಸಂ. ಕಾರ್ಯದರ್ಶಿ: ಸುರೇಶ್ ಹೆಚ್.ಎಸ್
ಸಹಕಾರ್ಯದರ್ಶಿ: ಮಂಜುನಾಥ್.ಜಿ.ಎಸ್
ಖಜಾಂಚಿ: ಮೋಹನಕುಮಾರ್.ಆರ್.ಎಲ್


ಕಾರ್ಮಿಕರಿಗೆ ತಾನು ನೀಡಿದ ಭರವಸೆಯಂತೆ ಸೌಲಭ್ಯಕ್ಕಾಗಿ ಮಾತುಕತೆ ನಡೆಸದೆ, ಹಿಂದಿನ ಆನೆತಂಡ ನಡೆಸುತ್ತಿದ್ದ ಮಾತುಕತೆಯನ್ನು ಮುಂದುವರಿಸಿತು. ಜಿಂಕೆತಂಡ ಐದು ದಿನಗಳ ಮುಷ್ಕರದ ನಾಟಕದ ಮೂಲಕ ಕೇವಲ 300 ರೂಗಳ ಸೌಲಭ್ಯಕ್ಕಾಗಿ ಆನ್ ಜಾಬ್ ಟ್ರೈನಿ (OJT) ಒಪ್ಪಂದ ಒಪ್ಪಿ ಒಪ್ಪಂದ ಮಾಡಿಕೊಂಡಿತು. ಇದನ್ನು ಕಾರ್ಮಿಕರು ತೀವ್ರವಾಗಿ ವಿರೋಧಿಸಿದಾಗ ಈ ಒಪ್ಪಂದದ ಆರೋಪ ಸಿಐಟಿಯು ಬೆಂಬಲಿತ ಆನೆ ತಂಡದ ಮೇಲೆ ಹೊರಿಸಿತು.

ಹೆಚ್ಚು ಇನ್ಸೆಂಟಿವ್ ದರ ಮತ್ತು ಸೌಲಭ್ಯಗಳಿಗಾಗಿ ತಂದ ಒತ್ತಡವನ್ನು ವಿಫಲಗೊಳಿಸಿದ ಎಐಟಿಯುಸಿ ನೇತೃತ್ವದ ಜಿಂಕೆ ತಂಡ ಮುಂದೆ 2 ವರ್ಷಗಳ ಕಾಲ ಕಾರ್ಮಿಕ ಸಂಘವನ್ನು ಪೂರ್ಣ ನಿಷ್ಕ್ರಿಯಗೊಳಿಸುವ, ಕಾರ್ಮಿಕರನ್ನು ಬಲಿ ಪಶು ಮಾಡುವ ಮತ್ತು ಮಾಲಿಕರಿಗೆ ಹಿಂದೆಂದಿಗಿಂತಲೂ ಹೆಚ್ಚು ಅನುಕೂಲ ಮಾಡಿಕೊಡುವ ವರ್ಗ ಸಹಕಾರದ ದಾರಿ ಹಿಡಿಯಿತು. ಮಾರ್ಚ್ 19 2003ರ ಚುನಾವಣೆಯಲ್ಲಿ ಆನೆ ತಂಡ ಸೋಲಲ್ಪಟ್ಟರೂ ಎದೆಗುಂದದೆ ಸಿಐಟಿಯು ಬೆಂಬಲಿತ ಆನೆತಂಡ ಕಾರ್ಮಿಕರಿಗಾಗಿನ ಅದರ ಉದ್ದೇಶ ಮತ್ತು ಕಾರ್ಯಕ್ರಮವನ್ನು ನಡೆಸುತ್ತಾ ಬಂದಿತು. ಎಐಟಿಯುಸಿ ನಾಯಕತ್ವ ಕಾರ್ಮಿಕರಿಗೆ ಮಾಡಿದ ವಂಚನೆಯನ್ನು ಬಯಲಿಗೆಳೆಯುತ್ತಾ, ಆಗಿಂದಾಗ್ಗೆ ಕಾರ್ಮಿಕರಿಗೆ ವಿವರಿಸುತ್ತಿತ್ತು. ಎಐಟಿಯುಸಿ ನಾಯಕತ್ವದ ಭರವಸೆಯ ಮಹಾಪೂರ ನಂಬಿ ಇವರಿಂದ ಕಾರ್ಮಿಕ ವೃಂದಕ್ಕೆ ಸಕಲ ಸೌಲಭ್ಯಗಳು ಹರಿದುಬರುತ್ತದೆಂದು ನಂಬಿದ ಯುವ ಕಾರ್ಮಿಕರು ಜಿಂಕೆ ತಂಡ ಬೆಂಬಲಿಸತೊಡಗಿದರು. ಈ ಯುವ ಕಾರ್ಮಿಕರನ್ನು ಕೇವಲ ಆನೆತಂಡದ ಮೇಲೆ ದೈಹಿಕ ದಾಳಿ ಮಾಡಲು ಉಪಯೋಗಿಸತೊಡಗಿತು ಜಿಂಕೆ ತಂಡದ ನಾಯಕತ್ವ. ಆದರೆ, ಯಾವಾಗ ಕಾರ್ಮಿಕ ವಿರೋಧಿಯಾದ OJT ಒಪ್ಪಂದ ಮಾಡಿಕೊಂಡಿತ್ತು ಅದನ್ನು ಪ್ರಶ್ನಿಸತೊಡಗಿತು, ಈ ಯುವಕಾರ್ಮಿಕ ಪಡೆ. ಮತ್ತು ಅದರ ಕಾರ್ಮಿಕ ವಿರೋಧಿ ನೀತಿಯನ್ನು ಅರಿಯತೊಡಗಿತು. ನಂತರ ಜಿಂಕೆ ತಂಡ ತೊರೆದು ಆನೆತಂಡದ ಕಾರ್ಮಿಕ ಪರನೀತಿ ಮತ್ತು ಕಾರ್ಯಾಚರಣೆ ಒಪ್ಪಿ ಅದರ ಜೊತೆ ಸೇರಿ ಕಾರ್ಮಿಕರ ಪರವಾಗಿ ಕಾರ್ಯಪ್ರವೃತ್ತರಾದರು. ನಂತರ ನಿರಂತರವಾಗಿ ನಡೆಸಿದ ಪ್ರಚಾರ ಪ್ರಕ್ಷೋಭೆಗಳು ಮತ್ತು ಎಲ್ಲರೂ ಒಳಗೊಂಡ ಕಾರ್ಯಾಚರಣೆಯಿಂದ ಸಿಐಟಿಯು ನಾಯಕತ್ವವೇ ಸರಿಯಾದದ್ದು ಎಂಬ ಮನವರಿಕೆ ಉಂಟಾಯಿತು.

ಕಾಂ.ಸೂರಿಯವರ ಜೊತೆ ಪದಾಧಿಕಾರಿಯಾಗಿದ್ದ, ಅಸಲಿ ಎಐಟಿಯುಸಿ ಕಾರ್ಯಕರ್ತನಾಗಿದ್ದ ವಿಜಯ ಭಾಸ್ಕರ್ ಎಂಬುವರು ನಂತರ ಆನೆತಂಡ ತೊರೆದು ತಕ್ಕಡಿ ತಂಡ ಕಟ್ಟಿ ನಂತರ ಎಐಟಿಯುಸಿ ಬೆಂಬಲಿತ ಜಿಂಕೆ ತಂಡದಿಂದ ಸಂಘಟನಾ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದರು. ಇವರ ವಂಚನೆ ಮತ್ತು ಮೋಸವನ್ನು ಕಾರ್ಮಿಕರು ಬಹಿರಂಗವಾಗಿಯೇ ಪ್ರತಿಭಟಿಸಿದರು. ಜಿಂಕೆ ತಂಡ ಮಾಡಿಕೊಂಡಿದ್ದ OJT ಒಪ್ಪಂದವನ್ನು ಸಿಐಟಿಯು ತಂಡ ಸತತ ವಿರೋಧಿಸುತ್ತಲೇ ಬಂದಿತ್ತು. ಆದರೆ ಅದು ನಿರಾಕರಿಸುತ್ತಿತ್ತು. ಆದರೆ ಚುನಾವಣೆ ಸಂದರ್ಭದಲ್ಲಿ ಅದೇ ಎಐಟಿಯುಸಿ ತಂಡ 'ಒಜೆಟಿ ಒಪ್ಪಂದ' ಕಂಪನಿ ಉಳಿವಿಗಾಗಿ ಮಾಡಿಕೊಂಡ ಒಪ್ಪಂದವೆಂದು ತನ್ನ ಕರಪತ್ರದಲ್ಲಿ ಮುದ್ರಿಸಿಕೊಂಡಿತು. ಆಡಳಿತ ಮಂಡಳಿ ದಬ್ಬಾಳಿಕೆ, ಸಂಘದ ನಾಯಕತ್ವದ ಅಪ್ರಜಾಸತ್ತಾತ್ಮಕ ನೀತಿ ಹಾಗೂ ಕಾರ್ಮಿಕರ ಸಂಕಷ್ಟಗಳಿಗೆ ಸ್ಪಂದಿಸದ ನಾಯಕತ್ವಇದರ ಆಧಾರದಲ್ಲಿ ಜಿಂಕೆ ತಂಡದ ಮೋಸ ವಂಚನೆ ಸುಳ್ಳುಗಳನ್ನು ಅರ್ಥ ಮಾಡಿಕೊಂಡ ಕಾರ್ಮಿಕರು ಸಿಐಟಿಯು ತಂಡದ ನಿಲುವು, ನಾಯಕತ್ವ ಒಪ್ಪಿ ಜಯ ನೀಡಿದ್ದಾರೆ. ಅವರಿಗೆ ಅಭಿನಂದನೆ ಎಂದು ಸಂಘಟಕರು ತಿಳಿಸಿದ್ದಾರೆ.

# ಶೇ 33 ಮೀಸಲಾತಿ ಒತ್ತಾಯಿಸಿ ಮಹಿಳೆಯರ ಪಾರ್ಲಿಮೆಂಟ್ ಚಲೋ!

ಶೇ 33 ಮಹಿಳಾ ಮೀಸಲಾತಿ ಈ ಅಧಿವೇಶನದಲ್ಲೇ ಜಾರಿಗೆ ತರಬೇಕೆಂದು ಯುಪಿಎ ಸರ್ಕಾರವನ್ನು ಒತ್ತಾಯಿಸಲು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ದೆಹಲಿಯಲ್ಲಿ 'ಅಣಕು ಸಂಸತ್' ಕಾರ್ಯಕ್ರಮವನ್ನು ಮೇ 4ರಂದು ಹಮ್ಮಿಕೊಂಡಿತ್ತು. ಸಂಘಟನೆಯ ಸಾವಿರಾರು ಕಾರ್ಯಕರ್ತೆಯರು ಭಾಗ ವಹಿಸಿದ್ದು ಒಂದು ಅವಿಸ್ಮರಣೀಯ ಘಟನೆ. ಸಂಸತ್ ಎಂದರೇನು ಅದು ಹೇಗೆ ನಡೆಯುತ್ತದೆ ಎಂಬ ಸೂಕ್ಷ್ಮತೆಯನ್ನು ತಿಳಿಯದ ಅನೇಕ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸ್ಫೂರ್ತಿ ಪಡೆದದ್ದು ಒಂದು ವಿಶಿಷ್ಟತೆ.



ಈ ಕಾರ್ಯಕ್ರಮಕ್ಕೆ ಕರ್ನಾಟಕದಿಂದ ಸುಮಾರು 200 ಜನ ಮಹಿಳೆಯರು ಭಾಗವಹಿಸಿದ್ದರು. ಜಂತರ್ ಮಂತರ್‌ನಿಂದ ಪ್ರಾರಂಭವಾದ ವರ್ಣರಂಜಿತ ರ‍್ಯಾಲಿ ಪಾರ್ಲಿಮೆಂಟಿಗೆ ಹೋಗುವ ಮಧ್ಯದಲ್ಲೇ ತಡೆಯಲ್ಪಟ್ಟು ಅಲ್ಲೇ 'ಅಣಕು ಸಂಸತ್'ನ ನಾಟಕ ಪ್ರದರ್ಶನಗೊಂಡಿತು. ಈ ನಾಟಕದಲ್ಲಿನ ಪಾತ್ರ ದಾರಿಗಳೆಲ್ಲರೂ ಸಂಘಟನೆಯ ಕೇಂದ್ರಸಮಿತಿಯ ಸದಸ್ಯರು, ನಾಟಕದ ಉದ್ದೇಶ ಸಂಘಟನೆಯ ಕಾರ್ಯಕರ್ತೆಯರಿಗೆ ಸಂಸತ್ ಹೇಗೆ ಕಾರ್ಯ ನಿರ್ವಹಿಸುತ್ತದೆ, ಮೀಸಲಾತಿ ಮಸೂದೆ ಏಕೆ ಜಾರಿಗೆ ಬಂದಿಲ್ಲ, ವಿವಿಧ ರಾಜಕೀಯ ಪಕ್ಷಗಳ ಮೀಸಲಾತಿಯ ಬಗೆಗಿನ ನಿಲುವು, ಹಿಂದಿನ ಎನ್‌ಡಿಎ ಸರ್ಕಾರದ ಗೊಸುಂಬೆತನ, ಈಗಿನ ಸರ್ಕಾರದ, ರಾಜಕೀಯ ಪಕ್ಷಗಳ ನಾಟಕವನ್ನು ತಿಳಿಸುವುದಾಗಿತ್ತು. ಮಹಿಳೆ ಸಂಘಟಿತರಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡದ ಹೊರತು ಈ ಯಾವುದೇ ರಾಜಕೀಯ ಪಕ್ಷಗಳು ಮಹಿಳೆಗೆ ಸಿಗಬೇಕಾದ ಹಕ್ಕುಗಳನ್ನು ದೊರಕಿಸಿಕೊಡಬೇಕೆಂದು ಎಂಬ ಕರೆ ನೀಡಿತು.

'ಅಣಕು ಸಂಸತ್' ನಂತರ ರಾಷ್ಟ್ರೀಯ ಅಧ್ಯಕ್ಷೆ ಸುಭಾಷಿಣಿ ಅಲಿ, ಪ್ರ.ಕಾರ್ಯದರ್ಶಿ ಸುಧಾ ರಾಮನ್ ಹಾಗು ಇನ್ನಿತರ ಕೇಂದ್ರಸಮಿತಿ ಸದಸ್ಯರು ಪ್ರಧಾನ ಮಂತ್ರಿಗಳನ್ನು ಬೇಟಿ ಮಾಡಿ ಮನವಿ ನೀಡಿ ಬಂದರು. ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಮೀಸಲಾತಿ ಮಸೂದೆ ಬಗ್ಗೆ ಪರಿಶೀಲಿಸು ವುದಾಗಿ ಭರವಸೆ ನೀಡಿದರು.

ಪಾರ್ಲಿಮೆಂಟ್ ಚಲೋಗೆ ಬೆಂಗಳೂರಿನಿಂದ ದೆಹಲಿಗೆ ತೆರಳಿದ ಮಹಿಳಾಮಣಿಗಳು ಶೇ38 ಮೀಸಲಾತಿಗಾಗಿ 6 ವರ್ಷದಿಂದ ಹರಸಾಹಸ ಮಾಡುತ್ತಿರುವಂತೆ ದೆಹಲಿಗೆ ತೆರಳಲು ಹರಸಾಹಸ ಮಾಡಿ ಪೋಲಿಸರೊಂದಿಗೆ, ಪುರುಷ ಪ್ರಯಾಣಿಕರೊಂದಿಗೆ ಸೆಣಸಿ ಚಲೋ ಹೋಗಿ ಬಂದದ್ದು ಹೊಚ್ಚ ಹೊಸದಾಗಿ ಸಂಘಟನೆಗೆ ಕಾಲಿಡುತ್ತಿರುವ ಮಹಿಳೆಯರಿಗೆ ಹೆಮ್ಮೆಕೊಟ್ಟಿದೆ. ಈ ಚಲೋ ಕೇವಲ ಚಲೋ ಆಗಿರದೆ ಸಮರಧೀರ ಚಳುವಳಿಗೆ ನಾಂದಿ ಆಗಲಿದೆ.

ಶಾರದಾ ಕೆ.ಎಸ್

**ಮಹಿಳೆಯರ ಕುರಿತು - ಅಂಕಿಅಂಶ**

ಜಗತ್ತಿನಲ್ಲಿರುವ 875 ಮಿಲಿಯ (87.5 ಕೋಟಿ) ವಯಸ್ಕ ಅಶಿಕ್ಷಿತರ ಪೈಕಿ 2/3 ಭಾಗದಷ್ಟು ಮಹಿಳೆಯರು. ಶೇಕಡಾ 50ರಷ್ಟು ಆಹಾರ ಬೆಳೆಯುವ ಮಹಿಳೆಯರು ಹೊಂದಿರುವ ಆಸ್ತಿಯ ಪಾಲು ಕೇವಲ ಶೇ.2ರಷ್ಟು

ಮಗು ಹುಟ್ಟುವ ಅಥವಾ ಗರ್ಭಿಣಿಯಾಗಿರುವ ಸಂದರ್ಭದಲ್ಲಿ ಉಂಟಾಗುವ ತೊಂದರೆಗಳಿಂದಾಗಿ, ಜಗತ್ತಿನಲ್ಲಿ ಪ್ರತಿ ಒಂದು ನಿಮಿಷಕ್ಕೆ ಒಬ್ಬ ಮಹಿಳೆಯಂತೆ ವರ್ಷಕ್ಕೆ 5,29,000 ಮಂದಿ ಮಹಿಳೆಯರು ಸಾಯುತ್ತಾರೆ. ಇದರಲ್ಲಿ ಶೇ 99 ಭಾಗ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ.

ಭಾರತದಲ್ಲಿ ಕೇವಲ ನೀರು ತರಲು ಮಹಿಳೆ ವ್ಯಯ ಮಾಡುತ್ತಿರುವ ಕೆಲಸದ ದಿನಗಳು - ವರ್ಷಕ್ಕೆ 150 ಮಿಲಿಯ (15 ಕೋಟಿ ದಿನಗಳು)

# ಬೀಜ ಕಾಯ್ದೆ ವಿರೋಧಿಸಿ ರೈತರಿಂದ ತಹಶೀಲ್ದಾರ್ ಕಚೇರಿಗೆ ಮುತ್ತಿಗೆ

ಬೀಜಕಾಯ್ದೆ ಜಾರಿ ಮಾಡುವುದನ್ನು ವಿರೋಧಿಸಿ ಮೇ 6ರಂದು ನೂರಾರು ರೈತರು ಮಂಗಳೂರು ತಹಶೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕಿದರಲ್ಲದೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿ ಮಾಡುತ್ತಿರುವ ರೈತ ವಿರೋಧಿ ನೀತಿಗಳನ್ನು ತಕ್ಷಣ ವಾಪಸ್ ಪಡೆಯುವಂತೆ ತೀವ್ರವಾಗಿ ಒತ್ತಾಯಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ (ಕೆಪಿಆರ್‌ಎಸ್) ನೇತೃತ್ವದಲ್ಲಿ ರಾಜ್ಯದಾದ್ಯಂತ ಈ ಹೋರಾಟ ನಡೆಯುತ್ತಿದ್ದು, ಈ ಭಾಗವಾಗಿ ಮಂಗಳೂರಿನಲ್ಲಿ ರೈತರು ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರ ಜಾರಿ ಮಾಡಿರುವ ಎಪಿಎಂಸಿ ಮಾದರಿ ಕಾನೂನು ಹಾಗೂ ವಿದ್ಯುತ್ ಖಾಸಗೀಕರಣ ವಿರೋಧಿಸಿದ ಪ್ರತಿಭಟನಾಕಾರರು, ರಾಜ್ಯದ ಪ್ರತಿಯೊಬ್ಬ ಬಡವನಿಗೂ ರೇಷನ್ ಕಾರ್ಡ್, ಮನೆ ನಿವೇಶನ, ರೈತ ಕೂಲಿಕಾರರಿಗೆ ಸುಲಭ ದರದಲ್ಲಿ ಬ್ಯಾಂಕ್ ಸಾಲ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯ ಪರಿಣಾಮಕಾರಿ ಜಾರಿಗೆ ಒತ್ತಾಯಿಸಿದರು.

ರಾಜ್ಯ ಸರ್ಕಾರ ಪಡಿತರಚೀಟಿ ನೀಡಲು ಹೊರಡಿಸಿರುವ ಸುತ್ತೋಲೆ ಅವೈಜ್ಞಾನಿಕವಾಗಿದೆ. ಇದರ ಪ್ರಕಾರ ಬಡವರಿಗೆ ರೇಷನ್ ಕಾರ್ಡ್ ಸಿಗುವುದಿಲ್ಲ. ರೇಷನ್ ಕಾರ್ಡ್ ಕಡಿತಗೊಳಿಸುವ ಉದ್ದೇಶದಿಂದಲೇ ಈ ರೀತಿಯ ಸುತ್ತೋಲೆ ಹೊರಡಿಸಲಾಗಿದೆ ಎಂದು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ ಆರೋಪಿಸಿದರು.

ಸಿಪಿಎಂ ಪಕ್ಷದ ಕಾರ್ಯದರ್ಶಿ ಮಂಡಳಿ ಸದಸ್ಯ ಬಾಲಕೃಷ್ಣ ಶೆಟ್ಟಿ, ಗಂಗಯ್ಯ ಅಮೀನ್, ಗೋವಿಂದನ್ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಮಂಜನಾಡಿ ಪಂಚಾಯತ್ ಉಪಾಧ್ಯಕ್ಷ ಎಸ್.ಎಂ.ಮಹಮ್ಮದ್, ಜಿ.ಪಂನ ಮಾಜಿ ಸದಸ್ಯೆ ಪದ್ಮಾವತಿ ಶೆಟ್ಟಿ, ಕೆ.ಮಂಜಪ್ಪ, ಲೋಕಯ್ಯ, ವಿಶ್ವನಾಥ, ನೋಣಯ್ಯ ಮಿಜಾರು, ರೈತ ಮುಖಂಡ ಕೃಷ್ಣ ಮೂಲ್ಯ ವಹಿಸಿದ್ದರು.

ಇದೇ ಸಂದರ್ಭದಲ್ಲಿ ರೈತರು ಪಡಿತರ ಚೀಟಿಗೆ ಸಂಬಂಧಿಸಿದಂತೆ ಸರ್ಕಾರ ಹೊರಡಿಸಿರುವ ಸುತ್ತೋಲೆಗೆ ಬೆಂಕಿ ಇಟ್ಟು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಹೋಟೆಲು ಕಾರ್ಪೊರೇಷನ್ ಆಫ್ ಇಂಡಿಯಾದ ಒಡೆತನದಲ್ಲಿದ್ದ ಮುಂಬೈನ ಎರಡು ಸೆಂಟಾರ್ ಹೋಟೆಲುಗಳನ್ನು ಮೂರುಕಾಸಿನ ಬೆಲೆಗೆ ಮಾರಿ 140 ಕೋಟಿ ರೂ.ಗಳಿಗೂ ಅಧಿಕ ಹಾನಿಯನ್ನು ಉಂಟು ಮಾಡಿದ ಅರುಣ್ ಶೌರಿಯ ಕ್ರಮವನ್ನು ಲೆಕ್ಕ ಮಹಾಶೋಧಕರು ಗುರುತಿಸಿ ಛೀಮಾರಿ ಹಾಕಿದ್ದಾರೆ. ದೇಶನದ ಜನತೆಗೆ ಹಿಂದುತ್ವದ ಅಮಲು ಹಿಡಿಸಿ ದೇಶದ ಕೊಳ್ಳೆಹೊಡೆವ ಕಲೆಗಾರಿಕೆ ರಾಷ್ಟ್ರೀಯ ಸ್ವಾಹಾ ಸಂಘದ ಕಲಾಗಾರಿಕೆಯ ಕರಾಮತ್ತಿಗೆ ಇದೊಂದು ಕುಖ್ಯಾತಉದಾಹರಣೆ. ಎನ್‌ಡಿಎ ಸರ್ಕಾರದ ದುಷ್ಟ-ಭ್ರಷ್ಟ ನೀತಿಯ ದಿನ್‌ದರ್ಶನ



# ಸೆಂಟಾರ್ ಹೋಟೆಲ್ : ರಾಷ್ಟ್ರೀಯ ಸ್ವಾಹ ಸಂಘದ ಕಲೆಗಾರಿಕೆ

## ಎನ್‌ಡಿಎಗೆ ಸಿಎಜಿ ಛೀಮಾರಿ

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರ ಕಳೆದುಕೊಂಡ ಮೇಲೆ ತನ್ನ ಅಧಿಕಾರಾವಧಿಯಲ್ಲಿ ತಾನು ಮಾಡಿದ್ದ ಅನಾಚಾರಗಳೆಲ್ಲ ಒಂದೊಂದಾಗಿ ಅನಾವರಣಗೊಳ್ಳುತ್ತಿರಬೇಕಾದರೆ ಆ ಪಕ್ಷದಿಂದ ತುಂಬಾ ಹೊಸತನ್ನು ನಿರೀಕ್ಷಿಸುತ್ತಿದ್ದವರಿಗೆಲ್ಲ ಬಿಜೆಪಿಯು ಭ್ರಷ್ಟಾಚಾರದ ಹೊಸ ಮಜಲುಗಳನ್ನೂ ಮತ್ತು ಅದರಲ್ಲಿ ತನಗಿರುವ 'ಅತ್ಯಾಧುನಿಕ ಬೌದ್ಧಿಕ ಕಲೆಯ' ದರ್ಶನವನ್ನೂ ನೀಡುತ್ತಿದೆ. ಮಹಾಲೇಖಪಾಲರ (ಕಂಟ್ರೋಲರ್ ಅಂಡ್ ಆಡಿಟರ್ ಜನರಲ್-ಸಿಎಜಿ) ಇತ್ತೀಚಿನ ವರದಿಯು ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಷೇರು ವಿಕ್ರಯ ಸಚಿವಾಲಯವು ಹಲವಾರು ಪ್ರಕರಣಗಳಲ್ಲಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡಿದೆ ಎಂದು ಛೀಮಾರಿ ಹಾಕಿದೆ. ಅದರಲ್ಲಿ ಮುಖ್ಯವಾದುದೆಂದರೆ ಏರ್ ಇಂಡಿಯಾ ಅಂಗಸಂಸ್ಥೆಯಾದ ಹೋಟೆಲ್ ಕಾರ್ಪೋರೇಷನ್ ಆಫ್ ಇಂಡಿಯಾ (ಹೆಚ್‌ಸಿಐ) ಒಡೆತನದಲ್ಲಿದ್ದ ಮುಂಬೈ ಮೂಲದ ಎರಡು ಸೆಂಟಾರ್ ಹೋಟೆಲ್‌ಗಳನ್ನು (ಜೂಹು ಸೆಂಟಾರ್ ಮತ್ತು ಏರ್‌ಪೋರ್ಟ್ ಸೆಂಟಾರ್) ಮಾಜಿ ಷೇರು ವಿಕ್ರಯ ಸಚಿವ ಅರುಣ್ ಶೌರಿ ನಾಯಕತ್ವದಲ್ಲಿ ಆರ್‌ಎಸ್‌ಎಸ್ ಕುಲಬಾಂಧವರಿಗೆ ಮೂರುಕಾಸಿನ ಬೆಲೆಗೆ ಮಾರಿರುವುದು. ಸ್ಪರ್ಧೆ ಹಾಗೂ ಮೌಲ್ಯ ನಿರ್ಣಯದ ಲಾಭ ಪಡೆಯದೆ, ಷೇರು ವಿಕ್ರಯ ಸಚಿವಾಲಯದ ವಿಧಿ ವಿಧಾನಗಳನ್ನು ಅನುಸರಿಸದೆ ಒಂದೇ ಹರಾಜಿನ ಆಧಾರದ ಮೇಲೆ ಮಾರಲಾಗಿದೆ ಎಂದು ಮಹಾಲೇಖಕರ ವರದಿಯಲ್ಲಿ ಆಕ್ಷೇಪಿಸಲಾಗಿದೆ. ಷೇರು ವಿಕ್ರಯ ವಿಧಾನದ ಪ್ರತಿಹಂತದಲ್ಲೂ ಪಾರದರ್ಶಕತೆಯನ್ನು ಗಾಳಿಗೆ ತೂರಿ ಸಂಪೂರ್ಣ ದಾಖಲಾತಿಗಳನ್ನೇ ಕೈಬಿಡಲಾಗಿದೆ.

ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳನ್ನಷ್ಟೇ ವಿಕ್ರಯ ಮಾಡುವುದಾಗಿ ಬೊಗಳೆ ಬಿಡುತ್ತಿದ್ದ ಚೋರ ಶೌರಿ. ಷೇರು ವಿಕ್ರಯ ಮಾಡಲಾಗುವುದೆಂದು ಘೋಷಿಸುವವರೆಗೂ ಜೂಹು ಸೆಂಟಾರ್ ಹೋಟೆಲ್ ಸಂಪೂರ್ಣ ಲಾಭದಲ್ಲಿದ್ದದ್ದನ್ನು ಮರೆಮಾಚುತ್ತಾನೆ. ಜೂಹು ಸೆಂಟಾರ್ ಹೋಟೆಲ್‌ನ್ನು ರೂ.153 ಕೋಟಿಗೆ ಮತ್ತು ಏರ್‌ಪೋರ್ಟ್ ಸೆಂಟಾರ್ ಹೋಟೆಲ್‌ನ್ನು ರೂ.83 ಕೋಟಿಗೆ ಮಾರಾಟ ಮಾಡಿದ್ದರಿಂದಾಗಿ ರೂ.150 ಕೋಟಿ ಹಣ ಬೊಕ್ಕಸಕ್ಕೆ ನಷ್ಟವಾಗಿದೆಯೆಂದು ಅದು ವರದಿಯಲ್ಲಿ ತಿಳಿಸಿದೆ. ಜೂಹು ಸೆಂಟಾರ್‌ಗಾಗಿ 20 ಮಂದಿ ಆಸಕ್ತರು ಅರ್ಜಿ ಸಲ್ಲಿಸಿದರೆ, ಮೂರು ಮಂದಿಯನ್ನು



ಅನರ್ಹಗೊಳಿಸಿ ಮತ್ತು 16 ಮಂದಿಯು ವಾಪಾಸು ಅರ್ಜಿ ಹಿಂಪಡೆದುಕೊಂಡಿದ್ದರಿಂದ ಸ್ಪರ್ಧೆಯಲ್ಲಿ ಒಬ್ಬನೇ ವ್ಯಕ್ತಿ ಉಳಿಯುವಂತಹ ತಂತ್ರ ಅನುಸರಿಸಲಾಗಿತ್ತು. ಏರ್‌ಪೋರ್ಟ್ ಸೆಂಟರ್‌ಗಾಗಿ 21 ಅರ್ಜಿಗಳು ಬಂದಿದ್ದರೆ, 4 ಮಂದಿ ಅನರ್ಹರಾಗಿ ಮತ್ತು 13 ಮಂದಿ ಸ್ಪರ್ಧೆಯಿಂದ ಹಿನ್ನಡೆದಿದ್ದರಿಂದ ಒಂದೇ ವ್ಯಕ್ತಿ ಸ್ಪರ್ಧೆಯ ಕಣದಲ್ಲಿ ಉಳಿಯುವಂತಾಯ್ತು. ರೂ.83 ಕೋಟಿಗೆ ಸೆಂಟಾರ್ ಹೋಟೆಲ್‌ನ್ನು ಖರೀದಿ ಮಾಡಲು ಹಣವಿಲ್ಲದೇ ಒದ್ದಾಡುತ್ತಿದ್ದ ಸಂಘ-ಬಾಂಧವ ಕಂಪನಿಯಾದ ಎ.ಎಲ್.ಬಾತ್ರಾ ಹಾಸ್ಪಿಟಾಲಿಟಿ ಪ್ರೈ.ಲಿ (ಬಿ.ಎಚ್.ಪಿ.ಎಲ್)ಗಾಗಿ ಬ್ಯಾಂಕುಗಳೊಂದಿಗೆ ಸಭೆ ನಡೆಸಿ ಹಣಕಾಸು ವ್ಯವಸ್ಥೆ ಮಾಡಿಸಿಕೊಟ್ಟದ್ದಲ್ಲದೆ, ವಿಕ್ರಯ ದಿನಾಂಕವನ್ನು ಹಲವಾರು ಬಾರಿ ಅನವಶ್ಯಕ ವಿಸ್ತರಣೆ ಮಾಡಿದ ಅದ್ಭುತ ಕಲೆಯನ್ನು ಅರುಣ್‌ಶೌರಿ ಕರತಲಾಮಲಕ ಮಾಡಿಕೊಂಡಿದ್ದಾರೆ. ರೂ.83 ಕೋಟಿಗೆ ಹೋಟೆಲ್ ಖರೀದಿಸಿದ ಆ ಸಂಸ್ಥೆ ಕೇವಲ 6 ತಿಂಗಳೊಳಗೆ ಪುನರ್-ಮಾರಾಟ ಮಾಡಿದ್ದು ರೂ.115 ಕೋಟಿ ಹಣಕ್ಕೆ ಎಂದರೆ ರಾಷ್ಟ್ರೀಯ ಸ್ವಾಹಾ ಸೇವಕ ಸಂಘದ ಅತ್ಯಾಧುನಿಕ ಕಲಾತ್ಮಕತೆಗೆ ಇದೊಂದು ಸಣ್ಣ ಉದಾಹರಣೆಯಷ್ಟೆ. ಎಡಪಕ್ಷಗಳು ಈ ವ್ಯವಹಾರದ ಹುನ್ನಾರವನ್ನು ಅಂದೇ ಬಯಲಿಗೆಳೆದಿದ್ದು, ಮಹಾಲೇಖಪಾಲರ ವರದಿಯಿಂದ ಇದು ಅಧಿಕೃತವಾಗಿ ಹೊರಬಿದ್ದಿದೆಯಷ್ಟೆ.

ಸ್ವಯಂ ಸೇವಕರೆಂದರೆ ದೇಶಭಕ್ತರೆಂದು ಹಸಿಹಸಿ ಸುಳ್ಳಿನ ಸರಮಾಲೆಗಳನ್ನೇ ಪೋಣಿಸಿ 'ಭಾರತ ಪ್ರಕಾಶಿಸುತ್ತಿದೆ' ಎಂದು ಮಾರುವ ಆರ್.ಎಸ್.ಎಸ್ ದೇಶಭಕ್ತಿ ಎಂತಹ ದೇಶಭ್ರಷ್ಟತೆಯದ್ದು ಎಂದು ಹುಟ್ಟಿದಾರಭ್ಯ ಸಾಬೀತಾಗುತ್ತಾ ಸಾಗಿದೆ. ಶೋಷಿತರ ಶಸ್ತ್ರದಂತಿದ್ದ ಅಂಬೇಡ್ಕರ್‌ರವರ ಕೀರ್ತಿಗೆ ಮಸಿಬಳಿಯಲು ಅಡ್ವಾನಿ ಮತ್ತು ಕಂಪನಿಯು ಮಿಲಿಯನ್‌ಗಟ್ಟಲೆ ಹಣವನ್ನು 'ವರ್ಷಿಪಿಂಗ್ ಫಾಲ್ಸ್ ಗಾಡ್' ಎಂಬ ಶೋಷಿತ-ವಿರೋಧಿ ಕೃತಿಯನ್ನು ಬರೆಯಲು ಅರುಣ್‌ಶೌರಿಗೆ ಸುರಿದರು. ಸಂಘಪರಿವಾರಸ್ನೇಹಿ ಮಾಧ್ಯಮದಿಂದಾಗಿ ಅನಗತ್ಯ ಪ್ರಚಾರ ಪಡೆದ ಶೌರಿಗೆ ಪ್ರಗತಿ-ವಿರೋಧಿ ಕೆಲಸಕ್ಕಾಗಿ ಸಿಕ್ಕ ಬಹುಮಾನವೇ ರಾಜ್ಯಸಭಾಸ್ಥಾನ ಮತ್ತು ಷೇರು ವಿಕ್ರಯ ಖಾತೆ. ಇತಿಹಾಸವನ್ನು ಸಂಘಪರಿವಾರದ ಮೈಗೆ ಹೊಂದುವಂತೆ ಕತ್ತರಿಸಿ ಅಂಟಿಸಬಲ್ಲ, ಈ ಅರಳೆಕಾಯಿಪಂಡಿತ ಶೌರಿ ಎಂತಹ ವಿಷಯವನ್ನೂ ತಿರುಚುವುದರಲ್ಲಿ ಸಿದ್ಧಹಸ್ತ. ಸಂಘಪರಿವಾರ ಹಾಲೆರೆದು ತನ್ನ ಹುತ್ತದಲ್ಲಿ ಪೋಷಿಸುತ್ತಿರುವ ಅನೇಕ ವಿಷಪೂರಿತ ಹಾವುಗಳಲ್ಲಿ ಶೌರಿ ಒಂದು ಸಣ್ಣ ಕ್ಯಾರೆ ಹಾವಷ್ಟೆ ಎಂದು ಪ್ರಗತಿಪರರೊಬ್ಬರು ಉದ್ಗರಿಸಿರುವುದು ದಿಗ್ಭ್ರಮೆ ಮೂಡಿಸುತ್ತದೆ.

ದೇಶದ ಜನತೆಯನ್ನು ಹಿಂದುತ್ವದ ಭ್ರಮಾಲೋಕಕ್ಕೆ ತಳ್ಳಿ ಭ್ರಷ್ಟಲೋಕದಲ್ಲಿ ಪಯಣಿಸುತ್ತಿರುವ ದೇಶಭ್ರಷ್ಟ ಸಂಘಪರಿವಾರದ ಮೇಲೆ ಸದಾ ಹದ್ದಿನ ಕಣ್ಣಿನಲ್ಲಿ ನೋಡಬೇಕಿದೆ.

**'ಜಯ'**

# ಬುಡಕಟ್ಟು ಜನರ ಹಕ್ಕುಗಳ ರಕ್ಷಣೆಗಾಗಿ

### ಬುಡಕಟ್ಟು ಜನರ ಹಕ್ಕುಗಳ ರಕ್ಷಣೆಗಾಗಿ ತರಲು ಉದ್ದೇಶಿಸುವ ಮಸೂದೆ ಸ್ವಾಗತಾರ್ಹ. ಆದರೆ ಈ ಮಸೂದೆಯಲ್ಲಿನ ನ್ಯೂನತೆಗಳೇನು? ಒಂದು ವಿಮರ್ಶೆ

2001ರ ಜನಗಣತಿಯ ಪ್ರಕಾರ ನಮ್ಮ ದೇಶದಲ್ಲಿ ವಿವಿಧ ಬುಡಕಟ್ಟುಗಳಿಗೆ ಸೇರಿದ ಜನರ ಸಂಖ್ಯೆ ಒಟ್ಟು ಜನ ಸಂಖ್ಯೆಯ ಶೇಕಡಾ 8.16ರಷ್ಟಿದೆ. ಅಂದರೆ 9 ಕೋಟಿ ಜನರು. ಇದು ಜಗತ್ತಿನ ಹಲವಾರು ಚಿಕ್ಕದೇಶಗಳಲ್ಲಿ ಅಲ್ಲಿರುವ ಒಟ್ಟು ಜನಸಂಖ್ಯೆಗಿಂತ ಜಾಸ್ತಿ. ಅರಣ್ಯ ಪ್ರದೇಶದ ತಪ್ಪಲಲ್ಲಿ ಈ ಜನರ ಜೀವನ ಪದ್ಧತಿ ವಿಶಿಷ್ಟವಾದುದು. ಅರಣ್ಯವೇ ಇವರ ಜೀವನಾಧಾರ ಮತ್ತು ಅದಕ್ಕೆ ಹೊಂದಿಕೊಂಡೇ ಇವರ ಸಂಸತಿ ಬೆಳೆದುಬಂದಿದೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಹಲವಾರು ವರ್ಷಗಳಿಂದ ಬುಡಕಟ್ಟು ಜನರ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತ ಬಂದಿದೆ. ಸಿಪಿಐ(ಎಂ) ಆಡಳಿತ ನಡೆಸುವ ರಾಜ್ಯಗಳಲ್ಲಿ ಇವರ ಹಕ್ಕುಗಳ ರಕ್ಷಣೆಗಾಗಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿತ್ತು. ತ್ರಿಪುರಾದಲ್ಲಿರುವ ಸ್ವಾಯತ್ತ ಜಿಲ್ಲಾ ಮಂಡಳಿ (ಎಡಿಎಸ್) ಇದಕ್ಕೆ ಜ್ವಲಂತ ಉದಾಹರಣೆಯಾಗಿದ್ದು ಇದು ಬುಡಕಟ್ಟು ಜನರ ಆರ್ಥಿಕ ಮತ್ತು ರಾಜಕೀಯ ಹಕ್ಕುಗಳನ್ನು ರಕ್ಷಿಸಿ, ವಿಸ್ತರಿಸಲು ಸಹಾಯ ಮಾಡಿದುದು ಮಾತ್ರವಲ್ಲದೇ ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ಸಾಮಾಜಿಕ ಬಾಂಧವ್ಯಗಳನ್ನು ಹೆಚ್ಚಿಸಲು ಸಹಾಯವಾಗಿದೆ.

ಅರಣ್ಯ ಪ್ರದೇಶಗಳನ್ನು ಕೊಳ್ಳೆ ಹೊಡೆಯುವ ಶ್ರೀಮಂತರಿಂದಾಗಿ ಹಾಗೂ ಇತ್ತೀಚಿನ ವರ್ಷಗಳ ಉದಾರೀಕರಣ ನೀತಿಗಳಿಂದಾಗಿ ಹೆಚ್ಚಾಗಿ ಬಡವರೇ ಆಗಿರುವ ಬುಡಕಟ್ಟು ಜನರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಭೂಮಿ ಕಳೆದುಕೊಂಡಿರುವುದು ಒಂದೆಡೆಯಾದರೆ, ಹಲವಾರು ವರ್ಷಗಳಿಂದ ಅನುಭವಿಸಿಕೊಂಡು ಬಂದ ಕಾಡು ಉತ್ಪನ್ನಗಳು ಅವರಿಗೆ ಎಟುಕದಂತಾಗಿದೆ. ಅದರಲ್ಲೂ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರದ ಅವಧಿಯಲ್ಲಿ ಹೊರಡಿಸಲಾದ ಸುತ್ತೋಲೆಯಿಂದಾಗಿ, ಲಕ್ಷಾಂತರ ಕುಟುಂಬಗಳು ಆಶ್ರಯವನ್ನೇ ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಜನರ, ಸಾಮೂಹಿಕ ಸಂಘಟನೆಗಳ ತೀವ್ರ ಪ್ರತಿಭಟನೆಯ ನಂತರ



ಅದನ್ನು ತಡೆಹಿಡಿಯಲಾಗಿದೆ.

**ಅರಣ್ಯ ಹಕ್ಕಿನ ಕುರಿತು ಮಸೂದೆ :**

ಈ ಹಿನ್ನೆಲೆಯಲ್ಲಿ ಬುಡಕಟ್ಟು ಜನರ (ಅರಣ್ಯ ಹಕ್ಕಿಗಾಗಿ) ಮಸೂದೆ- 2005ನ್ನು ತರಲು ಯುಪಿಎ ಸರಕಾರ ಉದ್ದೇಶಿಸಿದೆ. ಇದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಇದು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ (ಸಿಎಂಪಿ) ತಿಳುವಳಿಕೆಯ ಭಾಗವೂ ಹೌದು. ಇದಕ್ಕಾಗಿ ಕರಡು ಮಸೂದೆ ಈಗಾಗಲೇ ಸಿದ್ಧವಾಗಿದೆ.

ಆದರೆ ಕರಡು ಮಸೂದೆಯಲ್ಲಿ ಹಲವಾರು ನ್ಯೂನ್ಯತೆಗಳಿವೆ. ಅದನ್ನು ಸರಿಪಡಿಸದೇ ಹೋದಲ್ಲಿ ಬಹುದೊಡ್ಡ ಸಂಖ್ಯೆಯ ಬುಡಕಟ್ಟು ಜನರಿಗೆ ಅನ್ಯಾಯವಾಗುತ್ತದೆ. ಮಸೂದೆಯು ಬುಡಕಟ್ಟು ಜನರ ಹಿತವನ್ನು ಕಾಪಾಡುವ ಕಾನೂನು ಆಗಬೇಕೇ ಹೊರತು, ಅವರನ್ನು ನಿರಾಶ್ರಿತರನ್ನಾಗಿ ಮಾಡಿ ಶ್ರೀಮಂತರಿಗೆ ಭೂಮಿ ನೀಡುವಂತಾಗಬಾರದು.

ಮೊದಲನೆಯದಾಗಿ, ಕರಡು ಮಸೂದೆಯ ವಿಭಾಗ 3(12)ರ ಪ್ರಕಾರ 'ಬುಡಕಟ್ಟು ಜನರನ್ನು ಗುರುತಿಸಿ "ಎರಡು ವರ್ಷಗಳೊಳಗೆ 'ಸೆಟ್ಲ್‌ಮೆಂಟ್' ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು" ಎಂದಿದೆ. ಆದರೆ 25.10.1980ರ ನಂತರ ಅರಣ್ಯ ಭೂಮಿಯಲ್ಲಿ ವಾಸಿಸುತ್ತಿದ್ದವರನ್ನು ಒಕ್ಕಲೆಬ್ಬಿಸಲಾಗುವುದು. ಇದು ತೀರಾ ಗಂಭೀರವಾದ ವಿಷಯ. ಇದನ್ನು ಒಪ್ಪತಕ್ಕದ್ದಲ್ಲ. 2001ರ ಜನಗಣತಿಯ ಪ್ರಕಾರ ಅವರು ವಾಸಿಸಿದ ಪ್ರದೇಶಗಳ ಆಧಾರದಲ್ಲಿ ಬುಡಕಟ್ಟು ಜನರ 'ಸೆಟ್ಲ್‌ಮೆಂಟ್' ಹಕ್ಕನ್ನು ನಿರ್ಧರಿಸಬೇಕೆಂದು

ಪುಟ 8 ಕ್ಕೆ

# ಫ್ಯಾಸಿಸಂ-ವಿರೋಧಿ ಹೋರ

**ಮೇ 9, 2005 ರಂದು ವಿಶ್ವದೆಲ್ಲೆಡೆ ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸಂ ಮತ್ತು ಫ್ಯಾಸಿಸ್ಟ್ ಕೂಟದ ಸೋಲಿನ 60ನೇ ವಾರ್ಷಿಕೋತ್ಸವವನ್ನು ಆಚರಿಸಲಾಗಿದೆ. ಸೋವಿಯತ್ ಒಕ್ಕೂಟದಲ್ಲಿ ಮತ್ತು ಪೂರ್ವಯುರೋಪಿನ ದೇಶಗಳಲ್ಲಿ ಸಮಾಜವಾದದ ಪತನದ ಸಂದರ್ಭದಲ್ಲಿ ಹಾಗೂ ನವ ಸಾಮ್ರಾಜ್ಯಶಾಹಿಯ ಉದಯ ಹಿನ್ನೆಲೆಯಲ್ಲಿ ಈ ವಿಜಯದ ಮಹತ್ವದ ಕುರಿತ ಕಣ್ನೋಟ ಹೆಚ್ಚಿನ ಮಹತ್ವ ಪಡೆದಿದೆ. ಮಾರ್ಕ್ಸ್‌ವಾದಿ - ಲೆನಿನ್ ವಾದಿಗಳು ಫ್ಯಾಸಿಸಂ ವಿರುದ್ಧ ರಾಜಕೀಯ - ಸೈದ್ಧಾಂತಿಕ ಹೋರಾಟವನ್ನು ಸ್ವತಃ ವರ್ಗ ಹೋರಾಟವನ್ನು ಸ್ವತಃ ವರ್ಗ ಹೋರಾಟದ ಭಾಗವಾಗಿ ಪರಿಗಣಿಸುತ್ತಾರೆ ಎಂಬುದನ್ನು ಬಲವಾಗಿ ಪುನರುಚ್ಛರಿಸಿದ್ದಾರೆ ಲೇಖಕರು. ಫ್ಯಾಸಿಸಂ ಹೇಗೆ ಬೆಳೆಯಿತು, ಬೆಳೆಯುತ್ತಿದೆ ಎಂಬುದರ ಮಹತ್ವದ ವಿಶ್ಲೇಷಣೆ.**

ಅನಿಲ್ ಬಿಸ್ವಾಸ್

ಮೇ 9, 2005 ರಂದು ವಿಶ್ವದೆಲ್ಲೆಡೆ ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸಂ ಮತ್ತು ಫ್ಯಾಸಿಸ್ಟ್ ಕೂಟದ ಸೋಲಿನ 60ನೇ ವಾರ್ಷಿಕೋತ್ಸವವನ್ನು ಆಚರಿಸಲಾಗಿದೆ. ಸೋವಿಯತ್ ಒಕ್ಕೂಟದಲ್ಲಿ ಮತ್ತು ಪೂರ್ವಯುರೋಪಿನ ದೇಶಗಳಲ್ಲಿ ಸಮಾಜವಾದದ ಪತನದ ಸಂದರ್ಭದಲ್ಲಿ ಹಾಗೂ ನವ ಸಾಮ್ರಾಜ್ಯಶಾಹಿಯ ಉದಯ ಹಿನ್ನೆಲೆಯಲ್ಲಿ ಈ ವಿಜಯದ ಮಹತ್ವದ ಕುರಿತ ಕಣ್ಣೋಟ ಹೆಚ್ಚಿನ ಮಹತ್ವ ಪಡೆದಿದೆ. ಮಾರ್ಕ್ಸ್‌ವಾದಿ - ಲೆನಿನ್ ವಾದಿಗಳು ಫ್ಯಾಸಿಸಂ ವಿರುದ್ಧ ರಾಜಕೀಯ - ಸೈದ್ಧಾಂತಿಕ ಹೋರಾಟವನ್ನು ಸ್ವತಃ ವರ್ಗ ಹೋರಾಟದ ಭಾಗವಾಗಿ ಪರಿಗಣಿಸುತ್ತಾರೆ ಎಂಬುದನ್ನು ಬಲವಾಗಿ ಪುನರುಚ್ಛರಿಸಲು ಕೂಡಾ ಈ ಸಂದರ್ಭವನ್ನು ಬಳಸಬೇಕಾಗಿದೆ.

**ಫ್ಯಾಸಿಸಂ ಎಂದರೇನು?**

ಕಮ್ಯುನಿಸ್ಟ್ ಅಂತರ‍್ರಾಷ್ಟ್ರೀಯ (ಕೋಮಿಂಟನ್) ಫ್ಯಾಸಿಸಂ ಎಂಬುದು ಅತಿ ರಾಷ್ಟ್ರೀಯವಾದದ ಮತ್ತು ಸಾಮ್ರಾಜ್ಯಶಾಹಿಯ ಅತ್ಯಂತ ಪ್ರತಿಗಾಮಿ ಹಾಗೂ ಅತ್ಯಂತ ದುಷ್ಟ ಬಹಿರಂಗ ಭಯೋತ್ಪಾದಕ ಸರ್ವಾಧಿಕಾರಶಾಹಿ ಎಂದು ನಿರ್ವಚಿಸಿದೆ. ದಿಮಿತ್ರೋವ್‌ರವರು ಫ್ಯಾಸಿಸಂನ್ನು ಹಣಕಾಸು ಬಂಡವಾಳದ ಅಧಿಕಾರ, ಕಾರ್ಮಿಕವರ್ಗದ, ರೈತಾಪಿ ಜನಗಳ ಹಾಗೂ ಬುದ್ಧಿಜೀವಿಗಳ ಕ್ರಾಂತಿಕಾರಿ ಪಕ್ಷದ ವಿರುದ್ಧ ಭಯೋತ್ಪಾದಕ ಸೇಡಿನ ಸಾಧನ ಎಂದು ನಿರ್ವಚಿಸಿದ್ದಾರೆ.



ಕೆಂಪು ಸೇನೆಗೆ ಸೋತು ಶರಣಾದ ಜರ್ಮನಿ ನಾಝಿಗಳು

ಫ್ಯಾಸಿಸಂ ಬಂಡವಾಳಶಾಹಿಯೊಳಗೆ ಅಡಕವಾಗಿರುವ ಬಿಕ್ಕಟ್ಟಿನಿಂದ ವಿಕಾಸಗೊಳ್ಳುತ್ತದೆ. ಫ್ಯಾಸಿಸಂ ನ ಬೆಳವಣಿಗೆಯನ್ನು ತ್ವರಿತಗೊಳಿಸಲು ನೆರವಾಗುವ ನಾಲ್ಕು ಅಂಶಗಳೆದರೆ, ಬಂಡವಾಳಶಾಹಿ ವ್ಯವಸ್ಥೆಯ ಆರ್ಥಿಕ ಬಿಕ್ಕಟ್ಟು ಮತ್ತು ವರ್ಗ ಹೋರಾಟ ತೀಕ್ಷ್ಣಗೊಳ್ಳುವುದು; ಸಂಸದೀಯ ವ್ಯವಸ್ಥೆಯ ಬಗ್ಗೆ ಬೃಹತ್ ಪ್ರಮಾಣದ ಭ್ರಮನಿರಸನ(ಸ್ಟಾಲಿನ್ ಹೇಳಿದಂತೆ ಬೂರ್ಜ್ವಾ ಪ್ರಜಾಪ್ರಭುತ್ವದ ಒಂದು ದೌರ್ಬಲ್ಯ); ಪುಟ್ಟ ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗವೂ ಸೇರಿದಂತೆ ಶ್ರಮಜೀವಿ ವಿಭಾಗಗಳ ಒಂದು ವಿಶಾಲ ವಿಭಾಗದ ಮೇಲೆ ಬಂಡವಾಳಶಾಹಿಯ ವ್ಯಾಪಕ ಪ್ರಭಾವ; ಮತ್ತು ಕಾರ್ಮಿಕ ವರ್ಗದ ವರ್ಗ ಪ್ರಜ್ಞೆಯುಳ್ಳ ಕ್ರಾಂತಿಕಾರಿ ನೇತೃತ್ವದ ಅಭಾವ.

ಬಂಡವಾಳಶಾಹೀ ಬಿಕ್ಕಟ್ಟಿನ ಪ್ರಮುಖ ಅವಧಿಗಳೆಂದರೆ 1922-23; 1924-29(ಬಂಡವಾಳಶಾಹಿ ಭಾಗಶಃ ಚೇತರಿಸಿಕೊಂಡಿತು) ಹಾಗೂ ಬಂಡವಾಳಶಾಹಿಯ ಆಳವಾದ ಬಿಕಟ್ಟು ಜಗತ್ತನ್ನು ತಟ್ಟಿದ 1929-33 ರ ಅವಧಿ. ಈ ಅಂತಿಮ ಘಟ್ಟದಲ್ಲಿ ಉದ್ಯೋಗಾವಕಾಶ ಬಿದ್ದಿತು; ಆಂತರಿಕ ಮಾರುಕಟ್ಟೆಗಳು ಮುದುಡುತ್ತಾ ಹೋದವು, ಸಂಬಳಗಳು ಇಳಿಯುತ್ತಾ ಹೋದವು. ಹಣದುಬ್ಬರ ಕಾರ್ಮಿಕ ವರ್ಗವನ್ನು ದಾರಿದ್ರ್ಯಕ್ಕಿಳಿಸಿತು. ರಫ್ತು ಮಾರುಕಟ್ಟೆಗಳು ಹೊಡೆತಕ್ಕೊಳಗಾಗಿ ಸಂಕುಚಿತಗೊಳ್ಳಲಾರಂಭಿಸಿದವು. ಮತ್ತು ಅಂತಿಮವಾಗಿ ಬಂಡವಾಳಶಾಹಿಯ ಬಿಕ್ಕಟ್ಟನ್ನು ಸಾಮ್ರಾಜ್ಯಶಾಹಿ ಮಾದರಿಯ ಮತ್ತು ಫ್ಯಾಸಿಸ್ಟ್ ಯುದ್ಧದ ಮೂಲಕ ಎದುರಿಸಲು ಯತ್ನಿಸಲಾಯಿತು.

ಈ ಸನ್ನಿವೇಶದಲ್ಲಿ ಬಂಡವಾಳಶಾಹೀ ಶಕ್ತಿಗಳು ಅಮೆರಿಕಾ ಸಂಯುಕ್ತ ಸಂಸ್ಥಾನಗಳು ಅಲ್ಲಿ ಹೆಚ್ಚುತ್ತಿದ್ದ ಲಾಭಕೋರತನ ಜೀವನ ಮಟ್ಟವನ್ನು ದೊಡ್ಡ ಪ್ರಮಾಣದಲ್ಲಿ ಎತ್ತರಿಸಿದ ಹೊಸ ಬಿಕ್ಕಟ್ಟುರಹಿತ ಬಂಡವಾಳಶಾಹಿ ಮಾದರಿ ಎಂದು ಎತ್ತಿ ಹಿಡಿಯಲಾರಂಭಿಸಿದ್ದರು. ಆದರೆ 1929 ರ ನ್ಯೂಯಾರ್ಕ್ ಶೇರು ವಿನಿಮಯ ಕೇಂದ್ರದ ಕುಸಿತ ಈ ಮಾತಿನ ಟೊಳ್ಳುತನವನ್ನು ಬಯಲಿಗೆಳೆಯಿತು.

**ಫ್ಯಾಸಿಸಂ ಮತ್ತು ಬಂಡವಾಳಶಾಹಿ ಬಿಕ್ಕಟ್ಟು**

ಬಂಡವಾಳಶಾಹಿ ಬಿಕ್ಕಟ್ಟನ್ನು ಒಂದು ನವೀನ ರೀತಿಯಲ್ಲಿ ಎದುರಿಸಿ ಪರಿಹರಿಸಲು ಫ್ಯಾಸಿಸಂ ರಂಗಪ್ರವೇಶ ಮಾಡಿತು. ವಿಪರೀತ ಉತ್ಪಾದನೆಯಿಂದಾದ ಬಿಕ್ಕಟ್ಟನ್ನು ಎದುರಿಸಲು ಉತ್ಪಾದಿತ ಸರಕುಗಳನ್ನು ಸಿಕ್ಕಾಪಟ್ಟೆ ನಾಶ ಮಾಡುವ ಕೆಲಸಕ್ಕಿಳಿಯಲಾಯಿತು. ಅದೇ ವೇಳೆಗೆ ಅತಿ ರಾಷ್ಟ್ರೀಯವಾದದ ಭಾವನೆಗಳನ್ನು ಬಡಿದೆಬ್ಬಿಸಲು ಹಣಕಾಸು ಬಂಡವಾಳ ಹಲವಾರು ಪ್ರಚಾರಗಳನ್ನು ಕೈಗೆತ್ತಿಕೊಂಡಿತು. ಸಾಮ್ರಾಜ್ಯಶಾಹಿ ಯೊಳಗಿನ ಪ್ರತಿಸ್ಪರ್ಧೆಗಳು ಹೆಚ್ಚಿದವು. ಹಾಗೂ ಅರಾಜಕತೆ, ರಾಷ್ಟ್ರೀಯ ಸಾರ್ವಭೌಮತೆ ಮತ್ತು ರಾಷ್ಟ್ರೀಯ ರಕ್ಷಣೆಯ ಬಾವುಟಗಳಡಿ ವಿಶ್ವ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳುವ ಪ್ರಕ್ರಿಯೆ ಆರಂಭವಾಯಿತು.

ಅದೇ ವೇಳೆಗೆ ಯುದ್ಧ ಪ್ರಯತ್ನಗಳು ಹೆಚ್ಚುತ್ತಲೇ ಹೋದವು. 1934 ರ ವೇಳೆಗೆ ವಿಶ್ವಾದ್ಯಂತ ಒಟ್ಟು ಶಸ್ತ್ರಾಸ್ತ್ರಗಳ ಪ್ರಮಾಣದ ಮೌಲ್ಯ 250 ಪೌಂಡ್‌ಗಳು. ನಂತರದ ದಿನಗಳಲ್ಲಿ ಅದು ಹೆಚ್ಚುತ್ತಾ ಹೋಯಿತು. ಹಲವಾರು ದೇಶಗಳಲ್ಲಿ ಬಂಡವಾಳಶಾಹಿಯ ಬಿಕ್ಕಟ್ಟು ಬಂಡವಾಳ ಮತ್ತು ಶ್ರಮಶಕ್ತಿಯ ನಡುವಿನ ವೈರುಧ್ಯವನ್ನು ಹೆಚ್ಚಿಸಿತು. 1929 ರಿಂದ 1935 ರ ನಡುವೆ 15 ಬಂಡವಾಳಶಾಹಿ ದೇಶಗಳಲ್ಲಿ 18,794 ಮುಷ್ಕರಗಳು ನಡೆದವು. ಮುಷ್ಕರ ಕಾರ್ಯಾಚರಣೆಗಳಲ್ಲಿ 86 ಲಕ್ಷ ಕಾರ್ಮಿಕರು ಭಾಗವಹಿಸಿದರು.

ಕಾರ್ಮಿಕ ವರ್ಗದ ಹೋರಾಟಗಳ ಮಹಾಪೂರವನ್ನು ತಡೆಹಿಡಿಯಲು ಫ್ಯಾಸಿಸ್ಟರು ಒಂದು 'ಕಾರ್ಪೋರೇಟ್ ಪ್ರಭುತ್ವ'ವನ್ನು ಮುಂದಿಡುತ್ತಾರೆ. ಅಲ್ಲಿ ಕಾರ್ಮಿಕರಿಗೆ ಏನೂ ಹಕ್ಕುಗಳೇ ಇರುವವುದಿಲ್ಲ. ತಾವು ಬಂಡವಾಳಶಾಹಿ ಮತ್ತು ಕಮ್ಯುನಿಸಂ ಎರಡಕ್ಕೂ ಪರ್ಯಾಯ ಕೊಡುತ್ತೇವೆ ಎನ್ನುತ್ತಾ 'ರಾಷ್ಟ್ರೀಯ ಸಮತಾವಾದ'ದ ಮಾತನಾಡುತ್ತಾರೆ. ಅವರು ಹಣಕಾಸುಬಂಡವಾಳದೆದುರು ಕಮ್ಯುನಿಸ್ಟ್ ವಿರೋಧಿಗಳೆಂದು ಹೇಳಿಕೊಳ್ಳುತ್ತಾರೆ, ಕಾರ್ಮಿಕರ ಎದುರು ಬಂಡವಾಳಶಾಹಿ-ವಿರೋಧಿಗಳೆಂದು ಹೇಳಿಕೊಳ್ಳುತ್ತಾರೆ.

ಭಯೋತ್ಪಾದಕ ಸರ್ವಾಧಿಕಾರ ಶಾಹಿಯ ಸಾಮಾಜಿಕ, ಆರ್ಥಿಕ ಆಧಾರವನ್ನು ಮತ್ತು ಲಕ್ಷಣಗಳನ್ನು ಅರ್ಥಮಾಡಿಕೊಳ್ಳಲು ನಾವು ಹಣಕಾಸು ಬಂಡವಾಳಕ್ಕೆ ಬಂಡವಾಳಶಾಹಿಯ ಬಿಕ್ಕಟ್ಟಿನ ಸಮಯದಲ್ಲಿ ಆರ್ಥಿಕವಾಗಿ ನೊಂದ, ಹತಾಶ ಮಧ್ಯಮವರ್ಗವನ್ನು, ಉದ್ಯೋಗಹೀನರನ್ನು ರಿಟ್ರೆಂಚ್ ಆದ ಕಾರ್ಮಿಕರನ್ನು ಮತ್ತು ಕೆಲಸವಿಲ್ಲದ ವೃತ್ತಿಪರರನ್ನು ಅಣಿನೆರೆಸಿ ಫ್ಯಾಸಿಸಂನ ಒಂದು ಮೀಸಲು ಪಡೆಯನ್ನು ನಿರ್ಮಿಸಲು ಸಾಧ್ಯವಾಗಿದೆ ಎಂಬುದನ್ನು ಅರಿಯಬೇಕು - ಈ ಹಿನ್ನೆಲೆಯಲ್ಲಿ ಹಣಕಾಸು ಬಂಡವಾಳ ಶಕ್ತಿಗಳು ಫ್ಯಾಸಿಸಂನ ಶಕ್ತಿಗಳನ್ನು ಬಲಪಡಿಸುತ್ತಾ ಸಂಸದೀಯ ಪ್ರಜಾಪ್ರಭುತ್ವದ ರಚನೆಗಳನ್ನು ಧ್ವಂಸ ಮಾಡುತ್ತಾ ಸಾಗಿದರು. ನಾಝಿಗಳು ಅಧಿಕಾರದಲ್ಲಿದ್ದಾಗಿನ 'ಸರ್ವೋಚ್ಛ ಆರ್ಥಿಕ ಮಂಡಳಿ'ಯಲ್ಲಿ ಯಾರ‍್ಯಾರು ಇದ್ದರು ಎಂಬುದನ್ನು ನೋಡಿ : ಶಸ್ತ್ರಾಸ್ತ್ರ ದೊರೆಗಳಾದ ಕ್ರೋಫ್ಸ್ ಮತ್ತು ಫಾನ್ ಬೋಯಿಹಲೆನ್, ಉಕ್ಕು ದೊರೆ ಫ್ರಿಟ್ಸ್ ಥೈಸೆನ್ ಮತ್ತು ವಿದ್ಯುತ್ ಉತ್ಪಾದನೆಯ ಮೇಲೆ ನಿಯಂತ್ರಣ ಹೊಂದಿದ್ದ ಸೀಮೆನ್ಸ್. ಇವರಲ್ಲಿ ಪ್ರತಿಯೊಬ್ಬರೂ ನಾಝೀ ನಿಧಿಗಳಿಗೆ ಲಕ್ಷಾಂತರ ಡಾಟ್ಸ್ ಮಾರ್ಕ್‌ಗಳನ್ನು (ಜರ್ಮನಿ ನಾಣ್ಯ) ಕಾಣಿಕೆಯಿತ್ತರು.

ಬಂಡವಾಳಶಾಹೀ ಬಿಕ್ಕಟ್ಟಿನಿಂದಾಗಿ ಜನಗಳ ಆದಾಯ ಮೇಲ್ನೋಟಕ್ಕೆ ಇಳಿಯುತ್ತಾ ಹೋದಂತೆ 'ಶತ್ರು'ವನ್ನು ಗುರುತಿಸಿ ಆತನನ್ನು ಇಲ್ಲವಾಗಿಸುವ ಆಕ್ರಾಮಕ ತತ್ವಶಾಸ್ತ್ರದ ಸುತ್ತ ಹೆಣೆದ ಫ್ಯಾಸಿಸಂನ ತತ್ವಗಳಿಗೆ ಬಡವರ ನಡುವೆ ಮಾತ್ರವಲ್ಲ ಹಣಕಾಸಿನ ದೃಷ್ಟಿಯಿಂದ ನೊಂದವರ ನಡುವೆಯೂ ತಕ್ಷಣ ಸ್ಪಂದನ ದೊರೆಯಿತು. ಫ್ಯಾಸಿಸಂ ವರ್ಧನೆ ಕಂಡದ್ದು ಜನಗಳ ಉಳಿತಾಯ ಕ್ಷಯಗೊಂಡ ಹಾಗೂ ಜೀವನವೆಚ್ಚ ಏರಿದ ಬೆಳವಣಿಗೆಗಳ ಮೇಲೆ.

**ಇಟೆಲಿ, ಜರ್ಮನಿಗಳಲ್ಲಿ**

ಫಿನ್‌ಲ್ಯಾಂಡ್, ಹಂಗೇರಿ, ಪೋಲಂಡ್ ಮತ್ತು ನಂತರ ಜರ್ಮನಿಯಲ್ಲಿ ಫ್ಯಾಸಿಸಂ ಭ್ರೂಣರೂಪದಲ್ಲಿ ಪ್ರಕಟಗೊಂಡ ಬೆನ್ನ ಹಿಂದೆಯೇ ಇಟೆಲಿಯಲ್ಲಿ ಅದರ ಆದಿರೂಪ ತಲೆಯೆತ್ತಿತು. ಮೊದಲ ಮಹಾಯುದ್ಧ ಸಿಡಿದ ಹಿನ್ನೆಲೆಯಲ್ಲಿ ಒಂದು ಕ್ರಾಂತಿಕಾರಿ ಬಂಡಾಯ ನಡೆದಿತ್ತು. ಅದು ಶ್ರಮಜೀವಿಗಳ ಕ್ರಾಂತಿಯತ್ತ ಸಾಗದಂತೆ ತಡೆಯಬೇಕು ಎಂಬುದು ಬೂರ್ಜ್ವಾ ಆಶಯವಾಗಿತ್ತು. ಅವರು ಕಾರ್ಮಿಕವರ್ಗವನ್ನು ಪುಡಿಗಟ್ಟಲು ಫ್ಯಾಸಿಸಂನ್ನು ಬಳಸಿದರು. ಒಳಗಣ 'ಸುಧಾರಣಾ ವಾದಿಗಳು ಕ್ರಾಂತಿಕಾರಿ ಬಂಡಾಯವನ್ನು ಹತ್ತಿಕ್ಕಲು ಬೂರ್ಜ್ವಾಗಳಿಗೆ ಮತ್ತು ಫ್ಯಾಸಿಸ್ಟರಿಗೆ ನೆರವಾದರು. ಅಕ್ಟೋಬರ್ 1922 ರಲ್ಲಿ ಅಧಿಕಾರಕ್ಕೇರಿದ ಮುಸಲೋನಿ ಫ್ಯಾಸಿಸಂನ ಶಕ್ತಿಗಳ ನೇತೃತ್ವವಹಿಸಿದ್ದ. ಅಲ್ಲಿ ಫ್ಯಾಸಿಸಂ ಬೂರ್ಜ್ವಾ ಪರಂಪರೆಯ ಮುಂದುವರಿಕೆಯಾಗಿ, ಆದರೆ ಒಂದು ಹೊಸ ರೂಪದಲ್ಲಿ ಬಂತು.

ವರ್ಸೆನ್ಸ್ ಸಂಧಿಯನ್ನು ಬಹಳಷ್ಟು ಜರ್ಮನರು ತಮ್ಮ ಮೇಲೆ ಹೇರಿದ ಆದೇಶ ಅಥವಾ ಬಲವಂತದ ಶಾಂತಿ ಎಂದು ಭಾವಿಸಿದ್ದರು. ಈ ಸಂಧಿಯ ಪ್ರಕಾರ ಜರ್ಮನಿ ಮೊದಲ ಮಹಾಯುದ್ಧದ ಹಾನಿಗಳನ್ನು ತುಂಬಿಕೊಡಬೇಕೆಂಬ ಅಂಶ ಜರ್ಮನರ ಮೇಲಿನ ಹೊರೆ ಸಂಕಟಗಳನ್ನು ಅಪಾರವಾಗಿ ಹೆಚ್ಚಿಸಿತು. ಅದು ಜರ್ಮನಿಯ ಆರ್ಥಿಕ ಜೀವನವನ್ನು ತಟ್ಟಿತು. ಅಲ್ಲದೆ ಕೈಗಾರಿಕಾ ಪ್ರಾಂತಗಳು ಫ್ರಾನ್ಸ್‌ನ ಪಾಲಾದವು. ಅದೇ ವೇಳೆಗೆ ಕ್ರಾಂತಿಯ ಒಂದು ಪಡೆ ಎದ್ದುಬಂತು. ಬೂರ್ಜ್ವಾಗಳು ಸೋಶಲ್ ಡೆಮೋಕ್ರೆಟ್‌ರ ನಿಕಟ ಸಹಕಾರದೊಂದಿಗೆ ಜರ್ಮನಿಯಲ್ಲಿ ಶ್ವೇತ ಭಯೋತ್ಪಾದನೆ ತಂದರು, ಕಾರ್ಮಿಕ ವರ್ಗದ ಪಕ್ಷ ಮತ್ತು ಅದರ ಮುಖಂಡತ್ವವನ್ನು ಆ ಭಯೋತ್ಪಾದನೆಗೆ ಗುರಿ ಮಾಡಲಾಯಿತು. ಅವರ ಮಾರಣಹೋಮ ನಡೆಸಲಾಯಿತು. ಕಾರ್ಲ್ ಲೈಬ್‌ನೆಕ್ಟ್ ಮತ್ತು ರೋಝಾ ಲಕ್ಸೆಂಬರ್ಗ್‌ರಂತಹ




ಮುಖಂಡರ ಕೊಲೆಯಾಯಿತು. ಆಗ ಫ್ಯಾಸಿಸಂನ ಬೀಜಗಳನ್ನು 'ಬಂಡವಾಳಶಾಹಿ ವ್ಯವಸ್ಥೆ ಕಮ್ಯುನಿಸಂಗೆ ಪರ್ಯಾಯ' ವೆಂದು ಬಿತ್ತಲಾಯಿತು. ಕಾರ್ಮಿಕ ವರ್ಗವನ್ನೇ ಕತ್ತರಿಸಿ ಬಿಡಲಾಯಿತು.

ನಂತರ ಸಂಸತ್ತಿನ ಎರಡೂ ಸದನಗಳಿಗೆ ನಡೆದ ಚುನಾವಣೆಗಳನ್ನು ನಾಝಿಗಳು (ರಾಷ್ಟ್ರೀಯ ಸಮಾಜವಾದಿಗಳು ಎಂದು ಜರ್ಮನ್ ಭಾಷೆಯಲ್ಲಿ ಅದರರ್ಥ) ಕ್ರಮೇಣ ಸೋಶಲ್ ಡೆಮಾಕ್ರಟರು ಮತ್ತು ಕಮ್ಯುನಿಸ್ಟರನ್ನು ಹಿಂದೆ ಹಾಕಿ ಮುಂದೆ ಹೋದರು. ಆದರೂ ನಾಝಿಗಳಿಗೆ ಅಧಿಕಾರ ವಶಪಡಿಸಿಕೊಳ್ಳಲು ಸಾಧ್ಯವಾದದ್ದು ಒಂದು ನಿರ್ದಿಷ್ಟ ರೀತಿಯ ಬೆಳವಣಿಗೆಯಿಂದಾಗಿ. ಹಿಟ್ಲರ್ ಜರ್ಮನ್ ಕೈಗಾರಿಕೋದ್ಯಮಿಗಳ ಒಂದು ಸಭೆ ಏರ್ಪಡಿಸಿದ. 'ದರೋಡೆಕೋರ ದೊರೆ'ಗಳು ಕಮ್ಯುನಿಸ್ಟರ ಮತ್ತು ಸಂಘಟಿತ ಕಾರ್ಮಿಕ ಆಂದೋಲನದ ಶಕ್ತಿಯನ್ನು ಧ್ವಂಸಮಾಡಲು ನಾಝಿ ಪಕ್ಷಕ್ಕೆ ಬಿಡಬೇಕು, ಅದಕ್ಕೆ ಪ್ರತಿಯಾಗಿ ರಾಜಕೀಯ ಮತ್ತು ಹಣಕಾಸು ಬೆಂಬಲ ನೀಡಬೇಕು ಎಂದು ಮನವಿ ಮಾಡಿಕೊಂಡ. ಕೈಗಾರಿಕೋದ್ಯಮಿಗಳು ತಟ್ಟನೆ ಒಪ್ಪಿಕೊಂಡರು. ಜರ್ಮನಿಯ ಸಂಸತ್ ಭವನ ರೈಬ್‌ಸ್ಟಾಗ್‌ನಲ್ಲಿ ಬೆಂಕಿ ಹೊತ್ತಿಕೊಂಡ

# ಟ: ಅಂದು-ಇಂದು

ಪ್ರಕರಣ ನಡೆಯಿತು. ಅದು ಸನ್ನಿವೇಶಕ್ಕೆ ಫ್ಯಾಸಿಸ್ಟರ ಪರವಾದ ನಿರ್ಣಾಯಕ ತಿರುವು ನೀಡಿತು. ಹಿಟ್ಲರ್ ಮತ್ತು ನಾಝೀ ಪಕ್ಷವನ್ನು ಮಿಲಟರಿ, ಗುತ್ತೇದಾರಿ ಬಂಡವಾಳಶಾಹಿ ಮತ್ತು ಅತಿ ರಾಷ್ಟ್ರೀಯವಾದಿ ಶಕ್ತಿಗಳು ಅಧಿಕಾರ ಗದ್ದುಗೆಯವರೆಗೆ ಒಯ್ದವು.

ಫ್ಯಾಸಿಸಂನ ಉದಯದಲ್ಲಿ ಸೋಶಲ್ ಡೆಮಾಕ್ರಟರ ಪಾತ್ರವನ್ನು ಗಮನಿಸಬೇಕು. ಅವರು ಸಾಮ್ರಾಜ್ಯಶಾಹಿ ಶಕ್ತಿಗಳ ಜತೆ ಕೈಮಿಲಾಯಿಸಿದರು. ಅಂತರ್‍ರಾಷ್ಟ್ರೀಯತೆಯನ್ನು ತಿರಸ್ಕರಿಸಿದರು. ಅವರು ವ್ಯಾಪಕವಾಗಿ ವರ್ಗ ಸಹಕಾರದ ಆಧಾರದಲ್ಲಿ ರಾಜಿ ಮಾಡಿಕೊಂಡು, ಬಂಡವಾಳಶಾಹಿಯ ಹಿತಾಸಕ್ತಿಗಳನ್ನು ಈಡೇರಿಸಿದರು. ಅವರು ಶ್ರಮಜೀವಿಗಳ ಕ್ರಾಂತಿಯ ಸೋಲಿಗಾಗಿ ಕೆಲಸ ಮಾಡಿದರು. ಅವರು ಬಿಕ್ಕಟ್ಟುಗ್ರಸ್ತ ಬಂಡವಾಳಶಾಹಿ ಮತ್ತೆ ಒಂದಾಗಿ, ಚೇತರಿಸಿಕೊಂಡು ಬೆಳೆಯಲು ನೆರವಾದರು. ಫ್ಯಾಸಿಸಂನ ಮುಖ್ಯ ಪ್ರತಿಪಾದಕರಾದ ಮುಸಲೋನಿ, ಪಿಲ್ಸುದಿ ಮತ್ತು ಒಸ್ವಾಲ್ಡ್ ಮೊಸ್ಲೆ ಇವರೆಲ್ಲರೂ ಸೋಶಲ್ ಡೆಮಾಕ್ರಟರೊಂದಿಗೆ ಮೈತ್ರಿ ಹೊಂದಿದ್ದರು.

## ಎರಡನೇ ಮಹಾಯುದ್ಧ

ಸಮಾಜವಾದಿ ಸೋವಿಯತ್ ಒಕ್ಕೂಟವನ್ನು ಧ್ವಂಸ ಮಾಡಬೇಕೆಂಬ ಫ್ಯಾಸಿಸ್ಟ್ ಜರ್ಮನಿ ಮತ್ತು ಇಟಲಿಗಳ ಬಯಕೆಯಂತೆ ಉಂಟಾದ ಎರಡನೇ ಮಹಾಯುದ್ಧ. ಬೇಗನೆ ಹಣಕಾಸು ಬಂಡವಾಳದ ಶಕ್ತಿಗಳು ನಿರೀಕ್ಷಿಸಿರದ ತಿರುವು ಪಡೆಯಿತು. ಹಿಟ್ಲರ್



ಇಡೀ ಯುರೋಪು ಖಂಡವನ್ನು ವಶಪಡಿಸಿಕೊಳ್ಳಬಯಸಿದ. ಇದರಿಂದ ಹಿಟ್ಲರನ ಜರ್ಮನಿ ಮತ್ತು ಅಮೆರಿಕಾ, ಬ್ರಿಟನ್ ಮತ್ತು ಫ್ರಾನ್ಸ್‌ನ 'ಪ್ರಜಾಸತ್ತಾತ್ಮಕ' ಬಣದ ನಡುವೆ ವೈರುಧ್ಯಗಳುಂಟಾದವು. ಆದರೆ ಎರಡೂ ಬಣಗಳು ಸಮಾಜವಾದಿ ಸೋವಿಯತ್ ಒಕ್ಕೂಟವನ್ನು ತಮ್ಮ ನಿಜವಾದ ಶತ್ರು ಎಂದು ಬಗೆದಿದ್ದವು.

ಹಿಟ್ಲರ್ ಪಾಶ್ಚಿಮಾತ್ಯ ಬಂಡವಾಳಶಾಹಿ ಶಕ್ತಿಗಳ ಪರೋಕ್ಷ ಬೆಂಬಲದಿಂದ ಸೋವಿಯತ್ ಒಕ್ಕೂಟದ ಮೇಲೆ ಆಕ್ರಣ ನಡೆಸಲು ಮುಂದಾಗಿ ಜರ್ಮನಿ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುವಂತೆ ಮಾಡಿದ. ಕಮ್ಯುನಿಸ್ಟ್ ಶ್ರದ್ಧೆ ಮತ್ತು ಸ್ಫೂರ್ತಿಯುತ ದೇಶಪ್ರೇಮವನ್ನು ಎದುರಿಸಲಾಗದ ನಾಝಿ ಮಿಲಿಟರಿ ಯಂತ್ರ ಧ್ವಂಸಗೊಂಡಿತು. ನಿಜ, ಸೋವಿಯತ್ ಒಕ್ಕೂಟವೂ ಅಪಾರ ಹಾನಿ ಅನುಭವಿಸಿತು. 1941 ರಿಂದ 1945 ರ ನಡುವೆ ಜರ್ಮನ್ ಪಡೆಗಳು ಮತ್ತೆ-ಮತ್ತೆ ಕೆಂಪು ಸೇನೆಯಿಂದ ಪರಾಭವ ಅನುಭವಿಸಿದವು. ಅಂತಿಮವಾಗಿ ಕೆಂಪು ಸೇನೆ ಬರ್ಲಿನ್ ಪ್ರವೇಶಿಸಿ ರೈಷ್‌ಸ್ಟಾಗ್ (ಜರ್ಮನಿಯ ಸಂಸತ್ ಭವನ) ಮೇಲೆ ಕೆಂಬಾವುಟ ಹಾರಿಸಿತು.

ಜರ್ಮನಿ ಮೇ 9, 1945 ರಂದು ಶರಣಾಗತವಾಯಿತು. ಅದು ಐತಿಹಾಸಿಕವಾಗಿ ಅಪಾರ ಮಹತ್ವದ ದಿನ. ಬರ್ಲಿನ್ ಪ್ರವೇಶಿಸಿದ ಕೆಂಪು ಸೇನೆಯಿಂದ ಫ್ಯಾಸಿಸ್ಟ್ ಜರ್ಮನಿಯ ಸಂಹಾರವಾಗಿ ಮೇ 9, 1945 ರಂದು ಫ್ಯಾಸಿಸಂ ಪರಾಭವಗೊಂಡದ್ದು ಒಂದು ಮಹತ್ವದ ಘಟನೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ 'ಫ್ಯಾಸಿಸಂನ ಸೋಲು 20ನೇ ಶತಮಾನದ ಇತಿಹಾಸದಲ್ಲಿ ಒಂದು ಮಹತ್ವದ ತಿರುಗುಬಿಂದು, ಅದು ಪ್ರಗತಿಪರ ಮತ್ತು ಕ್ರಾಂತಿಕಾರಿ ಶಕ್ತಿಗಳ ಮುನ್ನಡೆಗೆ ದಾರಿ ತೆರೆದುಕೊಟ್ಟಿತು' ಎಂದು ಟಿಪ್ಪಣಿ ಮಾಡಿದೆ.

## ಫ್ಯಾಸಿಸಂ - ವಿರೋಧಿ ಹೋರಾಟ ಮತ್ತು ಸ್ಟಾಲಿನ್

ಫ್ಯಾಸಿಸಂ ಮೇಲಿನ ವಿಜಯ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಶಕ್ತಿಗಳ ಒಂದು ವಿಜಯ. ಕಾಮ್ರೇಡ್ ಜೆ.ವಿ.ಸ್ಟಾಲಿನ್ ಈ ವಿಜಯದ ಪ್ರಮುಖ ಶಿಲ್ಪಿಗಳಲ್ಲಿ ಒಬ್ಬರು. ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ, ಸೋವಿಯತ್ ಒಕ್ಕೂಟದ ಅಧ್ಯಕ್ಷರಾಗಿ ಹಾಗೂ ಮಿಲಿಟರಿ ಆಯೋಗದ ಮುಖ್ಯಸ್ಥರಾಗಿ ಕಾಮ್ರೇಡ್ ಸ್ಟಾಲಿನ್ ತನ್ನ ರಾಜಕೀಯ ನೈಪುಣ್ಯ, ರಾಜತಾಂತ್ರಿಕ ವ್ಯೂಹ ಮತ್ತು ಮಿಲಿಟರಿ ತಂತ್ರಗಳನ್ನು ಬಳಸಿ ಫ್ಯಾಸಿಸಂ ವಿರುದ್ಧ ಒಂದು ಸ್ಮರಣೀಯ ವಿಜಯವನ್ನು ತಂದರು.

ಫ್ಯಾಸಿಸ್ಟ್ ಶಕ್ತಿಗಳು ಸೋವಿಯತ್ ಒಕ್ಕೂಟದ ಮೇಲೆ ಆಕ್ರಮಣ ನಡೆಸಿದ ಕೂಡಲೇ ಕಾಮ್ರೇಡ್ ಸ್ಟಾಲಿನ್ ಆಕ್ರಮಣಕೋರರ ವಿರುದ್ಧಪ್ರತಿಯೊಂದು ಸ್ವರೂಪದಲ್ಲಿ ಸರ್ವವ್ಯಾಪಿ ಪ್ರತಿರೋಧಕ್ಕೆ ಕರೆ ನೀಡಿದರು ಮತ್ತು ಹಿಂದೆ ಸರಿದು ಮತ್ತೆ ಒಗ್ಗೂಡಿ ಹೊಸ ಹುರುಪಿನಿಂದ ಧಾಳಿ ಮಾಡುವ ಒಂದುಕಾರ್ಯತಂತ್ರವನ್ನು ಬಳಸಿದರು. ಶತ್ರುಗಳಿಗೆ ಸತತವಾಗಿ ಕಿರುಕುಳ ನೀಡುತ್ತಾ ಇಡೀ ಜನತೆಯನ್ನು ಒಂದಿಲ್ಲ ಒಂದು ರೀತಿಯಲ್ಲಿ ರಕ್ಷಣೆಯಲ್ಲಿತೊಡಗಿಸಿ ಕಾಮ್ರೇಡ್ ಸ್ಟಾಲಿನ್ ದೇಶವನ್ನು ಫ್ಯಾಸಿಸ್ಟರ ವಿರುದ್ಧ ಅಣಿನೆರೆಸಿದರು. ಈ ಕಾರ್ಯತಂತ್ರವನ್ನು ನಂತರ ಅಮೆರಿಕ ಸಾಮ್ರಾಜ್ಯಶಾಹಿ ವಿರುದ್ಧ ವಿಯೆಟ್ನಾಂ ಮತ್ತು ಕೊರಿಯಾದಲ್ಲಿ ಬಳಸಲಾಯಿತು.

ಫ್ಯಾಸಿಸಂ ವಿರುದ್ಧ ಸಮರಕೇವಲ ಸೋವಿಯತ್ ಒಕ್ಕೂಟದ ರಕ್ಷಣೆಗಷ್ಟೇ ಸೀಮಿತಗೊಂಡ ಸಮರವಲ್ಲ ಎಂದು ಸದಾ ಯೋಚಿಸುತ್ತಿದ್ದವರು ಸ್ಟಾಲಿನ್. ಅದು ಎಲ್ಲೆಡೆಯೂ ಫ್ಯಾಸಿಸಂ ವಿರುದ್ಧದ ಹೋರಾಟ. ಪಾಶ್ಚಿಮಾತ್ಯ ಶಕ್ತಿಗಳೊಂದಿಗೆ ಮಿಲಿಟರಿ ಪ್ರಯತ್ನಗಳೊಂದಿಗೆ ಸಹಕರಿಸುವಾಗ ಅವರು ಎಂದೂ ಸಮಾಜವಾದ ಮತ್ತು ಬಂಡವಾಳಶಾಹಿಯ ನಡುವಿನ ವರ್ಗವೈರುಧ್ಯದ ಪರಿಕಲ್ಪನೆಯನ್ನು ಕೈಬಿಡುವ ಯೋಚನೆಯನ್ನು ಮಾಡಲಿಲ್ಲ. ವರ್ಗ ಸಹಕಾರದ ಪ್ರಶ್ನೆಯೇ ಇರಲಿಲ್ಲ.

ಕಾಮ್ರೇಡ್ ಸ್ಟಾಲಿನ್ ಮೂರು ಪ್ರಶ್ನೆಗಳ ಮೇಲೆ ಫ್ಯಾಸಿಸ್ಟ್ - ವಿರೋಧಿ ಕಾರ್ಯತಂತ್ರವನ್ನು ಕಟ್ಟಿದರು

- ಫ್ಯಾಸಿಸಂಗೆ ವಿರೋಧ ಮತ್ತು ಅದರ ಮೇಲೆ ಧಾಳಿಯಲ್ಲಿ ಸೋವಿಯತ್ ಒಕ್ಕೂಟದ ಜನತೆಯನ್ನು ಒಳಗೊಳ್ಳಬೇಕು.
- ಕೆಂಪು ಸೇನೆಯನ್ನು ನಿರ್ಣಾಯಕವಾಗಿ ಬಲಿಷ್ಠಗೊಳಿಸಬೇಕು ಹಾಗೂ
- ಒಂದು ಅಂತರ್‍ರಾಷ್ಟ್ರೀಯ ಫ್ಯಾಸಿಸ್ಟ್ - ವಿರೋಧಿ ಸೌಹಾರ್ದವನ್ನು ಕಟ್ಟಬೇಕು.

ಎರಡನೇ ರಣರಂಗದ ಬಗ್ಗೆ ಕಾಮ್ರೇಡ್ ಸ್ಟಾಲಿನ್ ಪಾಶ್ಚಿಮಾತ್ಯ ಶಕ್ತಿಗಳ ಬಗ್ಗೆ ದೃಢವಾಗಿದ್ದರು. ಅಮೆರಿಕಾ, ಬ್ರಿಟನ್ ಮತ್ತು ಫ್ರಾನ್ಸ್, ಫ್ಯಾಸಿಸ್ಟ್‌ಗಳ ಮೇಲೆ ಪಶ್ಚಿಮದಿಂದ ಪ್ರಹಾರ ನಡೆಸಬೇಕು ಎಂದು ಅವರು ಆಗ್ರಹಿಸಿದರು. ನೋರ್ಮಾಂಡಿಯಲ್ಲಿ ಎರಡನೇ ರಣರಂಗ ತೆರೆಯುವವರೆಗೆ ಸೋವಿಯತ್ ಒಕ್ಕೂಟ ಏಕಾಂಗಿಯಾಗಿ ಫ್ಯಾಸಿಸ್ಟ್‌ಗಳ ಅತಿ ಕ್ರೂರ ಧಾಳಿಗಳನ್ನು ಎದುರಿಸಬೇಕಾಗಿತ್ತು. ಶತ್ರುಗಳಲ್ಲಿ 45 ಲಕ್ಷ ಸೈನಿಕರು ಸತ್ತರು ಅಥವಾ ಗಾಯಗೊಂಡರು. ಸೋವಿಯತ್ ಒಕ್ಕೂಟಕ್ಕೂ ಭಾರಿ ಹಾನಿಯಾಯಿತು. ಸುಮಾರು 20 ಲಕ್ಷ ಸೈನಿಕರು ಸತ್ತರು, ಗಾಯಗೊಂಡರು ಅಥವಾ ಕಳೆದುಹೋದರು.

ಫ್ಯಾಸಿಸಂ ವಿರುದ್ಧ ಸೋವಿಯತ್ ಒಕ್ಕೂಟದ ಹೋರಾಟ ವಿಶ್ವದ ಸುತ್ತಲೂ ಫ್ಯಾಸಿಸ್ಟ್ - ವಿರೋಧಿ ಆಂದೋಲನಗಳ ಒಂದು ಮಹಾ ಅಲೆಯನ್ನೇ ಎಬ್ಬಿಸಿತು. ವಿಶ್ವದ ಶಾಂತಿಪ್ರಿಯರು ಮತ್ತು ಪ್ರಜಾಪ್ರಭುತ್ವವಾದೀ ಜನಗಳು ಫ್ಯಾಸಿಸಂ ವಿರುದ್ಧ ಹೋರಾಟದಲ್ಲಿ ಸ್ಫೂರ್ತಿಯಾಗಿ ಕಾಮ್ರೇಡ್ ಸ್ಟಾಲಿನ್ ಮತ್ತು ಸೋವಿಯತ್ ಒಕ್ಕೂಟದತ್ತ ನೋಡಲಾರಂಭಿಸಿದರು. ಕಾಮ್ರೇಡ್ ಸ್ಟಾಲಿನ್ ಯುದ್ಧಪೀಡಿತ ಸೋವಿಯತ್ ಒಕ್ಕೂಟದ ಪುನರ್‍ರಚನೆಯ ಕೆಲಸದ ನೇತೃತ್ವವನ್ನು ವಹಿಸಿದರು.

ಫ್ಯಾಸಿಸಂ ಪರಾಭವದ ನಂತರ ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ಶಕ್ತಿಗಳು ಹಿಂದೆ ಸರಿಯಬೇಕಾಯಿತು. ಮೂರನೇ ಜಗತ್ತಿನ ದೇಶಗಳು ಒಂದಾದ ಮೇಲೊಂದರಂತೆ ವಸಾಹತುಶಾಹಿ ಆಳ್ವಿಕೆಯ ಸಂಕೋಲೆಗಳನ್ನು ಮುರಿದುಹಾಕಿದರು. ಸ್ವಾತಂತ್ರ್ಯ ಆಂದೋಲನಕ್ಕೆ ಬಲವಾದ ಒತ್ತಾಸೆ ದೊರೆಯಿತು. ಕಾಮ್ರೇಡ್ ಲೆನಿನ್ ನೇತೃತ್ವದ ನವೆಂಬರ್ ಕ್ರಾಂತಿ ಸಮಾಜವಾದ ಮತ್ತು ಸ್ವಾತಂತ್ರ್ಯ ಶಕ್ತಿಗಳು ಜಗತ್ತಿನಲ್ಲಿ ಬೆಳೆಯಲು ಸ್ಫೂರ್ತಿ ನೀಡಿದಂತೆ ಕಾಮ್ರೇಡ್ ಸ್ಟಾಲಿನ್ ನೇತೃತ್ವದಲ್ಲಿ ಸೋವಿಯತ್ ಒಕ್ಕೂಟದ ಜಯಭೇರಿ ಅಭಿವೃದ್ಧಿಶೀಲ ದೇಶಗಳಿಗೆ ವಸಾಹತುಶಾಹಿ-ವಿರೋಧಿ ಸ್ವಾತಂತ್ರ್ಯ ಆಂದೋಲನವನ್ನು ತ್ವರಿತಗೊಳಿಸಲು ಸ್ಫೂರ್ತಿ ನೀಡಿತು.

## ಭಾರತ ಕಮ್ಯುನಿಸ್ಟರ ಪಾತ್ರ

ಭಾರತ ಕಮ್ಯುನಿಸ್ಟ್ ಪಕ್ಷ ಫ್ಯಾಸಿಸಂನ್ನು ಖಂಡಿಸುವಲ್ಲಿ ಮುಂದಿತ್ತು. ಕಮ್ಯುನಿಸ್ಟ್ ಅಂತರ್‍ರಾಷ್ಟ್ರೀಯ ನೇತೃತ್ವದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ಸ್ಪೇನಿನಲ್ಲಿ ಫ್ರಾಂಕೋನ ಬಳಿ ಹಾಗೂ ಅಬಿಸೀನಿಯಾದೊಳಗೆ ಫ್ಯಾಸಿಸ್ಟ್ ಇಟಲಿಯ ಪ್ರವೇಶದ ವಿರುದ್ಧ ಆಂದೋಲನಗಳನ್ನು ಸಂಘಟಿಸಿತು. ಕಮ್ಯುನಿಸ್ಟ್ ಪಥಪ್ರದರ್ಶಕ ಕಾಮ್ರೇಡ್ ಅಬ್ದುಲ್ ಹಲೀಂ ಆದಾಗಲೇ 1920 ರ ದಶಕದಲ್ಲಿ ಫ್ಯಾಸಿಸಂ ವಿರುದ್ಧ ಒಂದು ಪ್ರಬಂಧ ತಯಾರಿಸಿದ್ದರು. ಕಮ್ಯುನಿಸ್ಟ್ ಅಂತರ್‍ರಾಷ್ಟ್ರೀಯ ಏಳನೇ ಮಹಾಧಿವೇಶನದ ನಂತರ ಭಾರತ ಕಮ್ಯುನಿಸ್ಟ್ ಪಕ್ಷ ಸಾಮ್ರಾಜ್ಯಶಾಹಿಗಳು ಮತ್ತು ಫ್ಯಾಸಿಸಂ ವಿರುದ್ಧ ಒಂದು ಸಂಯುಕ್ತರಂಗವನ್ನು ರಚಿಸಿತು.

ಎರಡನೇ ಮಹಾಯುದ್ಧ ಸಿಡಿಯುತ್ತಿದ್ದಂತೆ ಭಾರತ ಕಮ್ಯುನಿಸ್ಟ್ ಪಕ್ಷ ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿ ಸರ್ಕಾರದ ಯುದ್ಧ ಪ್ರಯತ್ನಗಳನ್ನು ವಿರೋಧಿಸಿತು. ಹಿಟ್ಲರ್ ಸೋವಿಯತ್ ಒಕ್ಕೂಟದ ಮೇಲೆ ಧಾಳಿ ಮಾಡುತ್ತಿದ್ದಂತೆ ಕಮ್ಯುನಿಸ್ಟ್ ಅಂತರ್‍ರಾಷ್ಟ್ರೀಯದ ನೇತೃತ್ವದಲ್ಲಿ 1942 ರಲ್ಲಿ 'ಜನತಾ ಯುದ್ಧ'ದ ಘೋಷಣೆಯನ್ನು ಅಂಗೀಕರಿಸಿತು.

ಭಾರತ ಕಮ್ಯುನಿಸ್ಟ್ ಪಕ್ಷ 'ಫ್ರೆಂಡ್ಸ್ ಆಫ್ ಸೋವಿಯತ್ ಯೂನಿಯನ್' ರಚಿಸಿತು, ನೇತೃತ್ವ ನೀಡಿತು. ಅದು ಶ್ರಮಜೀವಿಗಳ ಅಂತರ್‍ರಾಷ್ಟ್ರೀಯತೆಗೆ ಸೌಹಾರ್ದ ವ್ಯಕ್ತಪಡಿಸುವಲ್ಲಿ ದೃಢವಾಗಿ ನಿಂತಿತು. ಹೀಗೆ ಭಾರತದಲ್ಲಿ ಕಮ್ಯುನಿಸ್ಟರು ಫ್ಯಾಸಿಸ್ಟ್ - ವಿರೋಧಿ ಹೋರಾಟಗಳಲ್ಲಿ ಮುಂಚೂಣಿಯಲ್ಲಿ ಇದ್ದರು ಹಾಗೂ ಕಾರ್ಮಿಕ ವರ್ಗ ಚಾರಿತ್ರಿಕ ಮುಷ್ಕರ ಕಾರ್ಯಾಚರಣೆಗಳ ಮೂಲಕ ಭವ್ಯ ಪಾತ್ರ ವಹಿಸಿತು.

## ಇಂಡೋನೇಶ್ಯಾ ಮತ್ತು ಚಿಲಿಯಲ್ಲಿ



ಅಜೇಯ ವಿಜಯದ ರೂವಾರಿ ಕಾಮ್ರೇಡ್ ಸ್ಟಾಲಿನ್

ಎರಡನೇ ಮಹಾಯುದ್ಧದ ನಂತರ ಫ್ಯಾಸಿಸಂ ಹಲವುದೇಶಗಳಲ್ಲಿ ಸಕ್ರಿಯವಾಗಿ ಉಳಿಯಿತು. ಈ ಅವಧಿಯಲ್ಲಿ ಫ್ಯಾಸಿಸಂಗೆ ಕಾರ್ಮಿಕ ವರ್ಗದ ವಿರುದ್ಧ ಪ್ರಚಾರ ನಡೆಸಲು ಸಾಮ್ರಾಜ್ಯಶಾಹಿಯಿಂದ ನೆರವು ದೊರೆಯಿತು. ಈ ಸಂಬಂಧದಲ್ಲಿ ಇಂಡೋನೇಶ್ಯಾ ಮತ್ತು ಚಿಲಿಯ ಮೇಲೆ ಫ್ಯಾಸಿಸ್ಟ್ ಪ್ರಹಾರಗಳ ಉದಾರಣೆಗಳನ್ನು ನೋಡಬೇಕು.

ಇಂಡೋನೇಶ್ಯದಲ್ಲಿ 1965 ರಲ್ಲಿ ಕಮ್ಯುನಿಸ್ಟ್ ಪಕ್ಷ ಅಧಿಕಾರವನ್ನು ವಶಪಡಿಸಿಕೊಳ್ಳಲು ಯತ್ನಿಸಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಆ ಪಕ್ಷದ ವಿರುದ್ಧ ಹಾಗೂ ದುಡಿಯುವ ಜನಗಳ ವಿರುದ್ಧ ಹಲವಾರು ಫ್ಯಾಸಿಸ್ಟ್ ದಾಳಿಗಳ ಒಂದು ಸರಣಿಯೇ ನಡೆಯಿತು.

ಈ ಹಿಂದೆ ಇಂಡೋನೇಶ್ಯಾ ಕಮ್ಯುನಿಸ್ಟ್ ಪಕ್ಷವೇ 'ರಾಷ್ಟ್ರೀಯವಾದಿ' ಮುಖಂಡ ಸುಕಾರ್ನೋರ ಬಲೆಗೆ ಬಿದ್ದಿತ್ತು. 30 ಲಕ್ಷ ಸದಸ್ಯರಿದ್ದಾರೆ. ದೇಶದಲ್ಲಿ 2 ಕೋಟಿ ಬೆಂಬಲಿಗರಿದ್ದಾರೆ ಎಂದು ಅದು ಹೇಳಿಕೊಂಡಿತ್ತು. ಸುಕಾರ್ನೋ ಸರ್ಕಾರಕ್ಕೆ ಪಕ್ಷದ ಬೆಂಬಲದ ಮೂಲಕ ಇಂಡೋನೇಶ್ಯಾದ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಲ್ಲಿ ಹತಾಶೆ ಉಂಟಾಗಿದ್ದು ಅವರಿಂದ ಒಬ್ಬ ಉನ್ನತ ಸೈನ್ಯಾಧಿಕಾರಿಯ ಹತ್ಯೆಯಾಯಿತು. ಈ ಘಟನೆಯ ಆಧಾರದಲ್ಲಿ ಇಂಡೋನೇಶ್ಯಾದ ಸರ್ಕಾರ ಕಮ್ಯುನಿಸ್ಟ್ ಪಕ್ಷವನ್ನು ಪುಡಿಗಟ್ಟಲಾರಂಭಿಸಿತು. ಹಾಗೂ ಪಕ್ಷದ ಕಾರ್ಯಕರ್ತರನ್ನು ನಿರ್ನಾಮ ಮಾಡಲಾರಂಭಿಸಿತು.

ಹಲವು ವಾರಗಳು, ತಿಂಗಳುಗಳ ಕಾಲ ನಡೆದ ಸೇನಾ ಕಾರ್ಯಾಚರಣೆಗಳಲ್ಲಿ ಕನಿಷ್ಠ 5 ಲಕ್ಷ ಕಮ್ಯುನಿಸ್ಟರನ್ನು ಕೊಲ್ಲಲಾಯಿತು. ಹೀಗೆ ಸತ್ತವರಲ್ಲಿ ಪೊಲಿಟ್‌ಬ್ಯೂರೋದ ಹೆಚ್ಚಿನ ಸದಸ್ಯರೂ ಇದ್ದರು. ಈ ಮಾರಣಹೋಮದ ಕೊನೆಯಲ್ಲಿ ಜನರಲ್ ಸುಹಾರ್ತೊ ಒಂದು ಕ್ಷಿಪ್ರ ಕ್ರಾಂತಿಯ ಮೂಲಕ

ಪುಟ 8 ಕ್ಕೆ



ಕುಖ್ಯಾತ ಗೋಬೆಲ್ಸ್

# ಫ್ಯಾಸಿಸಂ-ವಿರೋಧಿ ಹೋರಾಟ...

ಪುಟ 8 ರಿಂದ

ಅಧಿಕಾರ ವಹಿಸಿಕೊಂಡ.

ಚಿಲಿಯಲ್ಲಿ 1973 ರಲ್ಲಿ ಒಂದು 'ಪ್ಯಾಪುಲರ್ ಯುನಿಟ್' (ಜನಪ್ರಿಯ ಐಕ್ಯತೆ ಎಂಬ ಮಿತ್ರಕೂಟ) ಸರ್ಕಾರ ಅಧಿಕಾರ ಪಡೆಯಿತು. ಆದುಚುನಾಯಿತ ಸರ್ಕಾರ. ಸಮಾಜವಾದಿ ಮುಖಂಡ ಸಾಲ್ವೆಡೋರ್ ಅಲೆಂದೆಯ ನೇತೃತ್ವದ ಜನಪ್ರಿಯ ಸರ್ಕಾರದ ವಿರುದ್ಧ ಅಮೆರಿಕನ್ ಸಾಮ್ರಾಜ್ಯಶಾಹಿ ಚಿಲಿ ಸೇನೆಗೆ ಹಣ, ಶಸ್ತ್ರಾಸ್ತ್ರಗಳು ಹಾಗೂ ಪರಿಣತ ಸಲಹೆಗಳನ್ನು ನೀಡುತ್ತಾಬಂತು. ಸೆಪ್ಟೆಂಬರ್ 11, 1973 ರಂದು ಒಂದು ಕ್ಷಿಪ್ರಕ್ರಾಂತಿ ನಡೆಯಿತು. ಅಲೆಂದೆಯವರ ಕೊಲೆಯಾಯಿತು. ಸಾವಿರಾರು ಕಾರ್ಮಿಕವರ್ಗದ ಕುಟುಂಬಗಳನ್ನು ಸಾಯಿಸಲಾಯಿತು. ಇದರ ಮುಖಂಡ ಅಗಸ್ತೊ ಪಿನೋಚೆ ಹೀಗೆ ತನ್ನ ಪಡೆಗಳು ಐದು ಸಾವಿರ ಕಮ್ಯುನಿಸ್ಟರನ್ನು ಕೊಂದಿತು ಎಂದು ಸಾರಿದ. ಸಾವಿರಾರು ಜನಸಾಮಾನ್ಯರು ಕೊಲ್ಲಲ್ಪಟ್ಟರು. ಕೆಲವೊಮ್ಮೆ ಫುಟ್‌ಬಾಲ್ ಸ್ಟೇಡಿಯಂನಲ್ಲಿ ನೆರೆದ ಜನಗಳನ್ನು ಗುಂಡಿಟ್ಟು ಕೊಲ್ಲಲಾಯಿತು.

ಅಲೆಂದೆ ಸರ್ಕಾರ ಈ ಹಿಂದೆ ಅಮೆರಿಕಾ ನೆಲೆಯ ಬಹುರಾಷ್ಟ್ರೀಯ ಕಂಪನಿಗಳ ನಿಯಂತ್ರಣದಲ್ಲಿದ್ದ ತಾಮ್ರದ ಗಣಿಗಳ ಮತ್ತು ಇತರ ಆಸ್ತಿಗಳ ರಾಷ್ಟ್ರೀಕರಣ ಮಾಡಿ ಚಿಲಿಯನ್ ಬಂಡವಾಳಶಾಹಿಗಳು ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಯನ್ನು ಕುಪಿತಗೊಳಿಸಿತ್ತು. ಭೂಹೀನರಿಗೆ ಭೂಮಿಯ ಮರುಹಂಚಿಕೆ ಕೂಡಾ ಆಳುವ ವರ್ಗಗಳಲ್ಲಿ ಸಿಟ್ಟು ಉಂಟು ಮಾಡಿತ್ತು. ಚಿಲಿಯ ಆಳುವ ವರ್ಗಗಳು ಕ್ಷಿಪ್ರಕ್ರಾಂತಿಯ ಬೆಂಬಲಕ್ಕೆ ನಿಂತವು. ಅಮೆರಿಕಾ ಸಂಯುಕ್ತ ಸಂಸ್ಥಾನವೂ ಅವರ ಬೆನ್ನ ಹಿಂದೆ ನಿಂತು ಅಲೆಂದೆ ಸರ್ಕಾರದ ಧೀರ ಪ್ರತಿರೋಧ ಎಂದೂ ಸ'ಫ'ಲವಾಗ'ದ'ಂತ' ನೋಡಿಕೊಂಡಿತು.

**ನವ-ಫ್ಯಾಸಿಸಂ**

ಇತ್ತೀಚೆಗೆ ಯುರೋಪಿನ ಹಲವು ದೇಶಗಳಲ್ಲಿ ಫ್ಯಾಸಿಸಂನ ಈ ನಾಚಿಕೆಗೇಡಿ ಪರಂಪರೆಯನ್ನು ಪ್ರತಿನಿಧಿಸುತ್ತಿದ್ದೇವೆ ಎಂದು ಹೇಳಿಕೊಳ್ಳುವ ಶಕ್ತಿಗಳು ತಲೆಯೆತ್ತಿವೆ. ಅವರು ತಾವು ನವ-ಫ್ಯಾಸಿಸ್ಟರು ಅಥವಾ ಫ್ಯಾಸಿಸ್ಟೋತ್ತರರು ಎಂದು ಹೇಳಿಕೊಳ್ಳುತ್ತಾರೆ. ಯುರೋಪಿನಲ್ಲಿ ಕೆಲಸ ಮಾಡುತ್ತಿರುವ ಈ ವಿಧದ ರಾಜಕೀಯ ಪಕ್ಷಗಳೆಂದರೆ : ಆಸ್ಟ್ರೀಯಾದ ಫ್ರೀಡಂ ಪಾರ್ಟಿ; ಡೆನ್ಮಾರ್ಕಿನ 'ಪ್ರೋಗ್ರೆಸ್ ಪಾರ್ಟಿ; ನಾರ್ವೆಯ 'ಪ್ರೋಗ್ರೆಸ್ ಪಾರ್ಟಿ'; ಇಟೆಲಿಯ 'ಇಟಾಲಿಯನ್ ಲೀಗ್'; ಸೋವಿಯತ್ ಮೂವ್‌ಮೆಂಟ್ ಫಾರ್ ನ್ಯಾಶನಲ್ ರೈಟ್' ಮತ್ತು 'ಲೋಂಬಾರ್ಡಿ ಲೀಗ್ ಆಫ್ ಇಟಲಿ'; ಜರ್ಮನಿಯ 'ರಿಪಬ್ಲಿಕನ್ಸ್', ನ್ಯಾಶನಲ್ ಫ್ರಂಟ್, ನ್ಯಾಶನಲ್ ಡೆಮಾಕ್ರಟಿಕ್ ಪಾರ್ಟಿ ಮತ್ತು 'ಪೀಪಲ್ಸ್ ಯೂನಿಯನ್ ಆಫ್ ಜರ್ಮನಿ'; ಫ್ರಾನ್ಸಿನ 'ನ್ಯಾಶನಲ್ ಫ್ರಂಟ್'; ಹಾಲೆಂಡಿನ 'ಸೆಂಟರ್ ಡೆಮಾಕ್ರಟ್ಸ್' ಮತ್ತು 'ಸೆಂಟರ್ ಪಾರ್ಟಿ-86', ಸ್ವಿಜರ್‌ಲ್ಯಾಂಡಿನ 'ಸ್ವಿಸ್ ಡೆಮಾಕ್ರಟ್ಸ್' ಮತ್ತು 'ನ್ಯಾಶನಲ್ ಆ್ಯಕ್ಷನ್', ಇಂಗ್ಲೆಂಡಿನ 'ಬ್ರಿಟಿಶ್ ನ್ಯಾಶನಲ್ ಪಾರ್ಟಿ' ಮತ್ತು 'ಪ್ರೊ-ಫ್ಯಾಸಿಸ್ಟ್ ಆಕ್ಷನ'; ಯುರೋಪಿನ ದೇಶಗಳ 'ಕ್ರಿಶ್ಚಿಯನ್ ಯುರೋಪಿಯನ್ ಯೂನಿಯನ್' ಮತ್ತು ರಶ್ಯಾದ 'ರಶ್ಯನ್ ಬಾಯ್ಸ್'.

ಈ ಪಕ್ಷಗಳು ವೇಷಭೂಷಣಗಳಲ್ಲಿ ಮತ್ತು ಭಾಷೆಯಲ್ಲಿ, ಅದೇ ರೀತಿ ರಾಜಕೀಯ ಮತ್ತು ಆರ್ಥಿಕ ತತ್ವಗಳಲ್ಲಿ ಫ್ಯಾಸಿಸ್ಟ್ ಪರಂಪರೆಗಳನ್ನು ಅನುಸರಿಸುತ್ತಾರೆ. ಅವರು ಫ್ಯಾಸಿಸಂರಂತೆ 'ಸ್ವಸ್ತಿಕ' ಚಿಹ್ನೆಯನ್ನು ಬಳಸುತ್ತಾರೆ. ವಿದೇಶಿಯರ'ನ್ನು ಪ್ರತ್ಯೇಕಗೊಳಿಸುವುದು, ಜನಾಂಗವಾದ, ಕಮ್ಯುನಿಸ್ಟ್ - ವಿರೋಧ, ಸೆಮಿಟಿಕ್ ಜನಾಂಗಕ್ಕೆ ವಿರೋಧ ಮತ್ತು ಧಾರ್ಮಿಕ ಮೂಲಭೂತವಾದ ಅವರ ಅಜೆಂಡಾ. ವ್ಯಾಟಿಕನ್‌ನಲ್ಲಿ ಪೋಪರುಗಳ ಉತ್ತರಾಧಿಕಾರಿಗಳ ಆಯ್ಕೆಯ ಕೃತ್ಯಗಳು ಈ ನವ- ಫ್ಯಾಸಿಸ್ಟರಿಗೆ ಅವುಗಳಲ್ಲಿರುವ ಕ್ರಿಶ್ಚಿಯನ್ ಮ'ೂಲಭ'ೂತ'ವಾದಿ ಅಂಶದಿಂದಾಗಿ ಹುರುಪು ನೀಡಿದೆ. ನವ ಫ್ಯಾಸಿಸ್ಟರು ಯುರೋಪಿನಲ್ಲಿ ಏಶ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾದಿಂದ ಬಂದ ಜನಗಳ ಮೇಲೆ ಜನಾಂಗ ದ್ವೇಷಿ ಧಾಳಿಗಳನ್ನು ಸಂಘಟಿಸುವಲ್ಲಿ ಹೆಚ್ಚೆಚ್ಚು ಸಕ್ರಿಯರಾಗುತ್ತಿದ್ದಾರೆ. ಈ ಜನಾಂಗದ್ವೇಷಿಗಳಿಗೆ ಸಾಮ್ರಾಜ್ಯಶಾಹಿಯ ಮತ್ತು ಅದರ ಅನುಯಾಯಿಗಳ ಬೆಂಬಲವಿದೆ.

> **ಬಿಕ್ಕಟ್ಟಿನಲ್ಲಿರುವ ಬಂಡವಾಳಶಾಹಿ ನವ ಫ್ಯಾಸಿಸಂ, ಜನಾಂಗದ್ವೇಷ, ಅತಿ ರಾಷ್ಟ್ರೀಯವಾದ, ಧಾರ್ಮಿಕ ಮೂಲಭೂತವಾದ ಮತ್ತು ಕಮ್ಯುನಿಸಂ-ವಿರೋಧ ಎದ್ದು ಬರಲು ಅವಕಾಶ ನೀಡುತ್ತದೆ**

ನವ ಫ್ಯಾಸಿಸ್ಟರ ಉದಯಕ್ಕೆ ಕಾರಣವನ್ನು 1970 ರ ದಶಕದ ಆರಂಭದಲ್ಲಿ ಬಂಡವಾಳಶಾಹಿ ಬಿಕ್ಕಟ್ಟು ವಿಸ್ತಾರಗೊಂಡ ಹಿನ್ನೆಲೆಯಲ್ಲಿ ಗುರುತಿಸಬಹುದು. ನಿರುದ್ಯೋಗ ಹೆಚ್ಚಿತು, ಉತ್ಪಾದನೆ ಇಳಿಯಿತು. ಯುರೋಪಿಯನ್ ಆರ್ಥಿಕ ಬೆಳೆಯಲಾರಂಭಿಸಿದಾಗ 1960 ರ ದಶಕದಲ್ಲಿ




ಮಹಾನ್ ಹೋರಾಟದಲ್ಲಿ ಮಡಿದ ಸೈನಿಕರಿಗೆ ಅಭಿನಂದನೆಯ ಪೋಸ್ಟರ್

ಅಭಿವೃದ್ಧಿಶೀಲ ದೇಶಗಳಿಂದ ಬಂದ ಭಾರೀ ಸಂಖ್ಯೆಯ ಕಾರ್ಮಿಕರನ್ನು ಈಗ ಶತ್ರುಗಳೆಂದು ಕಾಣಲಾರಂಭವಾಯಿತು. ಈ ನಿಲುವಿಗೆ ಪ್ರತಿಯಾಗಿ ಜನಾಂಗವಾದಕ್ಕೆ ವಿರೋಧವು ರೂಪುಗೊಂಡಿತು. ಫ್ಯಾಸಿಸ್ಟರು ಈ ಸನ್ನಿವೇಶದ ಲಾಭ ಪಡೆದು ವಿದೇಶಿಯರನ್ನು ದೂರವಿಡುವ ತಮ್ಮ ಜನಾಂಗೀಯ ಶ್ರೇಷ್ಠತೆಯನ್ನು ಸಾರುವ ಘೋಷಣೆಗಳನ್ನು ಉಪದೇಶಿಸಲಾರಂಭಿಸಿದರು.

ಆಳುವ ವರ್ಗಗಳು ಫ್ಯಾಸಿಸ್ಟರನ್ನು ಬೆಂಬಲಿಸಿದವು. ಏಕೆಂದರೆ ಇಂತಹ ಆಂದೋಲನಗಳು ಜನಗಳ ಗಮನವನ್ನು ಬಂಡವಾಳಶಾಹಿಯನ್ನು ಆವರಿಸುತ್ತಿರುವ ಬಿಕ್ಕಟ್ಟಿನಿಂದ ಬೇರೆಗೆಡೆ ತಿರುಗಿಸುತ್ತವೆ. ಇಂತಹ ಸನ್ನಿವೇಶದಲ್ಲಿ ಇಟಲಿಯಂತಹ ದೇಶಗಳಲ್ಲಿ ನವ-ಫ್ಯಾಸಿಸ್ಟರು ಅಧಿಕಾರ ವಹಿಸಿಕೊಂಡಿದ್ದಾರೆ. ಅಮೆರಿಕಾ ಸಂಯುಕ್ತ ಸಂಸ್ಥಾನ ಈ ನವ ಫ್ಯಾಸಿಸ್ಟರಿಗೆ ಅವರು ಅಧಿಕಾರದಲ್ಲಿರಲಿ, ಅಥವಾ ಹೋಗಿರಲಿ ಸತತ ನೆರವು ನೀಡುತ್ತಿದೆ. ಸೋವಿಯತ್ ಒಕ್ಕೂಟದಲ್ಲಿ ಮತ್ತು ಪೂರ್ವ ಯುರೋಪಿನ ದೇಶಗಳಲ್ಲಿ ಸಮಾಜವಾದದ ಕುಸಿತ ಹಾಗೂ ನಂತರ ಸೋವಿಯತ್ ಒಕ್ಕೂಟದ ಪತನವೂ ಅಸ್ಥಿರತೆಯನ್ನು ಉಂಟು ಮಾಡಿದ್ದು ಅದೂ ನವ ಫ್ಯಾಸಿಸ್ಟರಿಗೆ ನೆರವಾಗಿದೆ. ನವ ಫ್ಯಾಸಿಸ್ಟರು ಕಮ್ಯುನಿಸ್ಟರು ಮತ್ತು ಸಮಾಜವಾದಗಳ ವಿರುದ್ಧದ ವಿಧೇಯ ಸೈನಿಕರಾಗಿಯೇ ಉಳಿದಿದ್ದಾರೆ.

ನವ ಫ್ಯಾಸಿಸ್ಟ್ ಶಕ್ತಿಗಳಿಗೆ ಅಮೆರಿಕಾ ಸಂಯುಕ್ತ ಸಂಸ್ಥಾನದ ಸ್ವರೂಪದಲ್ಲಿ ಸದಾ ಆಶ್ರಯ ಮತ್ತು ಪೋಷಣೆ ಸಿಗುತ್ತಲೇ ಇದೆ. ಸಿಐಎ ಹಲವಾರು ನಾಝಿ ಮುಖಂಡರಿಗೆ ಆಶ್ರಯ ನೀಡಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಅಮೆರಿಕಾ ದಲ್ಲಿ ನವ ಫ್ಯಾಸಿಸಂ ಹಿಂಸಾತ್ಮಕ ಜನಾಂಗ ದ್ವೇಷವನ್ನು ಹರಡಿದೆ. ಕುಕ್ಲುಕ್ಸ್ ಕ್ಲಾನ್ ಮತ್ತು ಜಾನ್ ಬಿರ್ಚ್ ಸೊಸೈಟಿಯಂತಹ ಸಂಘಟನೆಗಳು ಇದನ್ನು ಮಾಡುತ್ತಿವೆ.

ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದದ ಪತನದ ನಂತರದ ಅವಧಿಯಲ್ಲಿ ಧಾರ್ಮಿಕ ಮೂಲಭೂತವಾದಿ ಶಕ್ತಿಗಳು ನವಫ್ಯಾಸಿಸ್ಟರೊಡನೆ ಜತೆಗೂಡಿ ಹಲ್ಲು ಮಸೆಯುತ್ತಿದ್ದಾರೆ. ಫ್ಯಾಸಿಸಂ - ವಿರೋಧ ಹಾಗೂ ಸಾಮ್ರಾಜ್ಯಶಾಹಿ-ವಿರೋಧದ ದೀರ್ಘ ಪರಂಪರೆಯಿರುವ ದೇಶಗಳಲ್ಲೂ ಅವರು ಸಕ್ರಿಯರಾಗಿದ್ದಾರೆ. ಧಾರ್ಮಿಕ ಮೂಲಭೂತವಾದ ಮತ್ತು ನವ ಫ್ಯಾಸಿಸಂ ಪ್ರಜಾಪ್ರಭುತ್ವಕ್ಕೆ ನಿಜವಾದ ಬೆದರಿಕೆಯೊಡ್ಡಿವೆ - ವಿಶೇಷವಾಗಿ ಅಸ್ಥಿರತೆ, ಬಂಡವಾಳಶಾಹಿಯ ಬಿಕ್ಕಟ್ಟನ್ನು ಬಳಸಿ ಸಂಸದೀಯ ವ್ಯವಸ್ಥೆಯನ್ನು ಪ್ರವೇಶಿಸಲು ಅದಕ್ಕೆ ಸಾಧ್ಯವಾಗಿರುವ ಸಂದರ್ಭಗಳಲ್ಲಿ.

ನವ ಫ್ಯಾಸಿಸಂ ಮತ್ತು ಧಾರ್ಮಿಕ ಮೂಲಭೂತವಾದಿ ಶಕ್ತಿಗಳು ಕಾರ್ಮಿಕ ವರ್ಗದ ಆಂದೋಲನವನ್ನು ಒಡೆಯಲು ಸದಾ ಕಾರ್ಯನಿರತವಾಗಿರುತ್ತವೆ. ಬೂರ್ಜ್ವಾ ಪ್ರಜಾಪ್ರಭುತ್ವ ರಚನೆಯಲ್ಲಿ ಯಾವುದೇ ದೌರ್ಬಲ್ಯ ಕಂಡುಬಂದಾಗ ಈ ಶಕ್ತಿಗಳು ಅದರ ಪ್ರಯೋಜನ ಪಡೆಯುತ್ತವೆ. ವಿಶ್ವಾದ್ಯಂತ ಸಾಮ್ರಾಜ್ಯಶಾಹಿ ತನ್ನ ಹಿಡಿತವನ್ನು ಉಳಿಸಿಕೊಳ್ಳಲು ಹೆಚ್ಚೆಚ್ಚು ಆಕ್ರಮಣಶೀಲವಾಗುತ್ತಿದೆ. ಬಿಕ್ಕಟ್ಟಿನಲ್ಲಿರುವ ಬಂಡವಾಳಶಾಹಿ ನವ ಫ್ಯಾಸಿಸಂ, ಜನಾಂಗದ್ವೇಷ, ಅತಿ ರಾಷ್ಟ್ರೀಯವಾದ, ಧಾರ್ಮಿಕ ಮೂಲಭೂತವಾದ ಮತ್ತು ಕಮ್ಯುನಿಸಂ-ವಿರೋಧ ಎದ್ದು ಬರಲು ಅವಕಾಶ ನೀಡುತ್ತದೆ. ಜನಸಮೂಹಗಳು ಇದನ್ನರಿತು ವರ್ಗ-ಆಧಾರಿತ ಹೋರಾಟಗಳಲ್ಲಿ ಮತ್ತು ಆಂದೋಲನಗಳಲ್ಲಿ ಸಂಘಟಿತರಾಗಬೇಕು. ಅದು ಪ್ರಜಾಪ್ರಭುತ್ವ ಆಂದೋಲನವನ್ನು ಕ್ರೋಢೀಕರಿಸಲು ಹಾಗೂ ವಿಸ್ತರಿಸಲು ದಾರಿ ಮಾಡಿಕೊಡುತ್ತದೆ. ಈ ಸಂದರ್ಭದಲ್ಲಿ ಫ್ಯಾಸಿಸ್ಟ್ ವಿರೋಧಿ ಹೋರಾಟ ಬಹಳ ಮಹತ್ವ ಪಡೆಯುತ್ತದೆ.

# ಬುಡಕಟ್ಟು ಜನರ ಹಕ್ಕುಗಳು.....

ಪುಟ 5 ರಿಂದ

ಸಿಪಿಐ(ಎಂ) ವಾದಿಸಿದೆ.

ಎರಡನೆಯದಾಗಿ, ವಿಭಾಗ 2(1) ಪ್ರಕಾರ, 'ಅರಣ್ಯ ಇಲಾಖೆಯು ಅನುಮತಿ ನೀಡಿದ, ವ್ಯವಸಾಯ ಭೂಮಿಗಳಿಗೆ ಮಾತ್ರ ಭೂಮಿಹಕ್ಕನ್ನು ನೀಡಲಾಗುವುದು'. ಇದರಿಂದ ವ್ಯವಸಾಯ ಭೂಮಿ ಹೊಂದಿಲ್ಲದೆ ವಾಸ ಮಾಡಿಕೊಂಡಿರುವ ಬುಡಕಟ್ಟು ಜನರಿಗೆ ತೀವ್ರ ತೊಂದರೆಯಾಗುತ್ತದೆ. ಬುಡಕಟ್ಟು ಜನರು ಹೆಚ್ಚಾಗಿ ವ್ಯವಸಾಯ ಇದ್ದರೂ, ಇಲ್ಲದಿದ್ದರೂ ಅರಣ್ಯ ಉತ್ಪನ್ನಗಳ ಮೇಲೆಯೇ ಹೆಚ್ಚು ಅವಲಂಬಿತರಾಗಿದ್ದಾರೆ ಹಾಗೂ ಅರಣ್ಯದ ತಪ್ಪಲಲ್ಲಿಯೇ ವಾಸ ಮಾಡಿಕೊಂಡಿರುತ್ತಾರೆ. ಆದ್ದರಿಂದ ವ್ಯವಸಾಯ ಭೂಮಿ ಹೊಂದಿದ್ದು ಹಾಗೂ ಆದಕ್ಕೆ ಅರಣ್ಯ ಇಲಾಖೆಯಿಂದ ಅನುಮತಿ ಪಡೆದಿದ್ದರೆ ಮಾತ್ರ ಹಕ್ಕು ನೀಡಲಾಗುವುದು ಎಂಬುದು ನ್ಯಾಯಸಮ್ಮತವಲ್ಲ.

ಕರಡು ಮಸೂದೆಯಲ್ಲಿ, ಇತರ ಸಂಪನ್ಮೂಲಗಳಾದ ನೀರು, ತಂತ್ರಜ್ಞಾನ, ಸಾಲ ಇತ್ಯಾದಿಗಳನ್ನು ದೊರಕಿಸುವ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಬುಡಕಟ್ಟು ಜನರಿಗೆ ಅರಣ್ಯದ ಹಕ್ಕನ್ನು ನೀಡುವುದರ ಜತೆಯಲ್ಲೇ ಬದುಕಲು ಅವಕಾಶ ಮಾಡಿಕೊಟ್ಟರೆ ಮಾತ್ರ ದೇಶಕ್ಕೆ ಅಗತ್ಯವಾದ ವನ್ಯ ಸಂರಕ್ಷಣೆಯನ್ನು ಮಾಡಿಸಬಹುದು. ಇಲ್ಲವಾದಲ್ಲಿ ವನ್ಯ ಸಂಪತ್ತು ಮಾಫಿಯಾಗಳ ಪಾಲಾಗುತ್ತದೆ.

ಕರಡು ಮಸೂದೆಯ ವಿಭಾಗ 3(7)ರ ಪ್ರಕಾರ, ವನ್ಯ ಸಂರಕ್ಷಣೆಯ ಜವಾಬ್ದಾರಿಯನ್ನು ಗ್ರಾಮ ಪಂಚಾಯತಿ ಮತ್ತು ಸಮುದಾಯ ಹಕ್ಕುದಾರರಿಗೆ ನೀಡಲಾಗುವುದು. ಇದರಿಂದ ಪ್ರಭುತ್ವವು ತನ್ನ ಜವಾಬ್ದಾರಿಯಿಂದ ಕಳಚಿಕೊಂಡಂತಾಗಿದೆ. ಕೈಗಾರಿಕಾ ಬಂಡವಾಳ ಮತ್ತು ಅರಣ್ಯ ಮಾಫಿಯಾಗಳ ಕೂಟದಿಂದ ವನ್ಯ ಸಂಪತ್ತನ್ನು ಸಂರಕ್ಷಿಸಬೇಕಾದರೆ, ಸರಕಾರವೂ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ.

ಕೊನೆಯದಾಗಿ, ಮಸೂದೆಯು ಅರಣ್ಯದ ಉಪಉತ್ಪನ್ನಗಳ ಹಕ್ಕುಗಳಿಗೆ ಸಂಬಂಧಪಟ್ಟದ್ದಾದರೂ, ಮಹಿಳೆಯರಿಗೆ ಅದರ ಮೇಲಿರುವ ಹಕ್ಕುಗಳ ಪ್ರಶ್ನೆ ಬಂದಾಗ ಭೂಮಿಗೆ ಮಾತ್ರ ಜಂಟಿ ಪಟ್ಟಾ ನೀಡಲಾಗುವುದು. ಆದರೆ ಅರಣ್ಯ ಉತ್ಪನ್ನಗಳ ಬಗ್ಗೆ ಜಂಟಿ ಪಟ್ಟಾ ನೀಡುವ ಕುರಿತು ಯಾವುದೇ ಚಕಾರವೆತ್ತಿಲ್ಲ. (ವಿಭಾಗ 3(6)) ಅರಣ್ಯ ಉತ್ಪನ್ನಗಳ ಹಕ್ಕಿನ ಬಗ್ಗೆಯೂ ಮಹಿಳೆಯರಿಗೆ ಜಂಟಿ ಪಟ್ಟಾ ನೀಡುವ ಬಗ್ಗೆ ಮಸೂದೆಯಲ್ಲಿ ಒತ್ತು ನೀಡಬೇಕು.

**ಮಾಫಿಯಾಗಳಿಂದ ವಿರೋಧ**

ಅರಣ್ಯ ಸಂಪತ್ತನ್ನು ದೋಚುವ, ಕಾಡುಪ್ರಾಣಿಗಳನ್ನು ಕೊಲ್ಲುವ ಮಾಫಿಯಾಗಳಿಂದ ಅರಣ್ಯವನ್ನು ರಕ್ಷಿಸಬೇಕಾಗಿದೆ. ಬುಡಕಟ್ಟು ಜನರಿಗೆ ಅರಣ್ಯ ಉಪಉತ್ಪನ್ನಗಳ ಹಕ್ಕನ್ನು ನೀಡುವುದನ್ನು ಈ ಮಾಫಿಯಾಗಳು ವಿರೋಧಿಸುತ್ತಿದ್ದಾರೆ. ವನ್ಯ ಸಂಪತ್ತಿನ ರಕ್ಷಣೆಗಾಗಿ, ಬುಡಕಟ್ಟು ಜನರು ಸಮಾಧಾನದ ಜೀವನ ನಡೆಸುವುದಕ್ಕಾಗಿ 'ಬುಡಕಟ್ಟು ಜನರ ಅರಣ್ಯ ಹಕ್ಕುಗಳ ಮಸೂದೆ'ಯನ್ನು ದೀರ್ಘವಾಗಿ ಚರ್ಚಿಸಿ, ಅಗತ್ಯವಾದ ಅಂಶಗಳನ್ನು ಸೇರಿಸಿ, ಕಾನೂನನ್ನು ಜ್ಯಾರಿಗೊಳಿಸುವುದು ಅತೀ ಅಗತ್ಯ. ಇದಕ್ಕಾಗಿ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ತ್ವರಿತವಾಗಿ ಈ ಮಸೂದೆ ಜ್ಯಾರಿಗೆ ಬರುವಂತೆ ಒತ್ತಾಯಿಸಬೇಕಾಗಿದೆ.



**ದುಡಿವವರ್ಗದ ಸಮಸ್ಯೆಗಳನ್ನು ಪರಿಹರಿಸಲು ಆಗ್ರಹಿಸಿ ನಡೆದಿರುವ ಚಳುವಳಿ ಹೊಸ ಮಜಲು ತಲುಪಿದೆ. ಆಳುವ ವರ್ಗಗಳ-ಆಡಳಿತದ ಕಾರ್ಮಿಕವರ್ಗದ ವಿರೋಧಿ ನೀತಿ ಪ್ರತಿಭಟಿಸಿ ನಡೆದ ಈ ಚಳುವಳಿ ಅತ್ಯಂತ ಗಮನಾರ್ಹ. ಹೋರಾಟಗಳ ಸರಣಿಯತ್ತ ಒಂದು ನೋಟ**

**ರಾಜ್ಯಾದ್ಯಂತ ಯಶಸ್ವಿ ಜಾಥಾಗಳು 27 ಜಿಲ್ಲೆಗಳಲ್ಲಿಯೂ ಅಭೂತಪೂರ್ವ ಚಳುವಳಿ**

ವರದಿ : ಎಸ್.ಪ್ರಸನ್ನಕುಮಾರ್, ಎಸ್.ವರಲಕ್ಷ್ಮಿ




# ಕಾರ್ಮಿಕರ ಬೇಡಿಕೆಗಳಿಗಾಗಿ ರಾಜ್ಯಾದ್ಯಂತ ಯಶಸ್ವಿ ಹೋರಾಟ

2004ರ ಸೆಪ್ಟೆಂಬರ್ 2ರಂದು ರಾಜ್ಯದ ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ ಹಾಗೂ ಸರ್ಕಾರದ ನೀತಿಗಳ ಬದಲಾವಣೆಗಾಗಿ ಒತ್ತಾಯಿಸಿ 25000ಕ್ಕೂ ಹೆಚ್ಚಿನ ಕಾರ್ಮಿಕರು ಭಾಗವಹಿಸಿದ ಬೃಹತ್ ಪ್ರತಿಭಟನೆ ನಡೆಯಿತು. ಇತ್ತೀಚಿನ ಕಾಲಾವಧಿಯಲ್ಲಿ ನಡೆದ ಕಾರ್ಮಿಕರ ಭಾರಿ ಪ್ರತಿಭಟನೆ ಇದಾಗಿತ್ತು. ರಾಜ್ಯದ 27 ಜಿಲ್ಲೆಗಳಿಂದಲೂ ವಿವಿಧ ಕಾರ್ಮಿಕರು ಭಾಗವಹಿಸಿದ್ದು ವಿಶೇಷವಾಗಿತ್ತು.

ಸೆಪ್ಟೆಂಬರ್ 2 ರಂದು ರಾಜ್ಯ ಸರ್ಕಾರದ ಪರವಾಗಿ ಮನವಿ ಸ್ವೀಕರಿಸಿದ ಕಂದಾಯ ಸಚಿವ ಎಂ.ಪಿ.ಪ್ರಕಾಶ್ ಅವರು ಮುಖ್ಯ ಮಂತ್ರಿಗಳೊಂದಿಗೆ ಚರ್ಚಿಸಿ ಕ್ರಮವಹಿಸುವುದಾಗಿ ಬಹಿರಂಗ ಸಭೆಯಲ್ಲಿ ನೆರೆದಿದ್ದ ಸಾವಿರಾರು ಕಾರ್ಮಿಕರ ಮುಂದೆ ಭರವಸೆ ನೀಡಿದರು. ಆ ನಂತರ ಮುಖ್ಯಮಂತ್ರಿಗಳೊಂದಿಗೆ ದಿನಾಂಕ 4.3.2005ರಂದು ತರಾತುರಿಯಲ್ಲಿ ಸಿಐಟಿಯು ಪದಾಧಿಕಾರಿಗಳ ಸಭೆ ನಡೆಯಿತು. ಈ ಸಭೆಯಲ್ಲಿ ಕಾರ್ಮಿಕ ಮಂತ್ರಿ ತನ್ವೀರ್‌ಶೇಠ್ ಹಾಗೂ ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಆಯುಕ್ತರು ಭಾಗವಹಿಸಿದ್ದರು. ಈ ಸಭೆಯಲ್ಲೂ ಕಾರ್ಮಿಕರ ಹೋರಾಟಗಳಲ್ಲಿ ಪೊಲೀಸರ ಮಧ್ಯಪ್ರವೇಶ ಕುರಿತಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳು ಒಳಗೊಂಡಂತೆ ಎಲ್ಲಾ ಟ್ರೇಡ್ ಯೂನಿಯನ್‌ಗಳ ಮುಖಂಡರೊಂದಿಗೆ ಜಂಟಿ ಸಭೆ ಕರೆಯುವುದಾಗಿ ಮುಖ್ಯಮಂತ್ರಿ ಧರ್ಮಸಿಂಗ್ ಅವರ ಭರವಸೆ ಹೊರತುಪಡಿಸಿ ನಿರ್ಧಿಷ್ಟವಾಗಿ ಯಾವುದೇ ಸಕಾರಾತ್ಮಕ ಬೆಳವಣಿಗೆ ಆಗಿಲ್ಲ.

ಈ ಹಿನ್ನೆಲೆಯಲ್ಲಿ ಸುದೀರ್ಘವಾಗಿ ಚರ್ಚಿಸಿದ ಸಿಐಟಿಯು ರಾಜ್ಯಸಮಿತಿಯು ಸಮ್ಮಿಶ್ರ ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆ, ಪೊಲೀಸ್ ಮಧ್ಯಪ್ರವೇಶ, ಕಾರ್ಮಿಕ ಕಲ್ಯಾಣ ಕ್ರಮಗಳ ಬಗ್ಗೆ ಸರ್ಕಾರದ ನಿರ್ಲಕ್ಷ್ಯ, (ಬಡ್ಜೆಟ್ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿದ್ದೂ) ಕನಿಷ್ಠ ವೇತನ ಕಾನೂನು ಮತ್ತು ಕಾನೂನುಗಳ ಜಾರಿಯಾಗದಿರುವುದು, ಗೌರವಧನದ ಆಧಾರದಲ್ಲಿ ದುಡಿಯುವ ಕಾರ್ಮಿಕರ ಸಮಸ್ಯೆಗಳು, ಕಾಂಟ್ರಾಕ್ಟ್ ಪದ್ಧತಿಯ ವಿಸ್ತರಣೆ, ದಿನಗೂಲಿ ಹಂಗಾಮಿ ಆಧಾರದ ಕಾರ್ಮಿಕರ ದುಡಿಮೆ ಹೆಚ್ಚಳ, ಅಸಂಘಟಿತ ಕಾರ್ಮಿಕರ ಸೇವಾ ನಿಯಂತ್ರಣ ಮತ್ತು ಕಲ್ಯಾಣದ ಬಗ್ಗೆ ನಿರ್ಲಕ್ಷ್ಯ ಇತ್ಯಾದಿ ಸಮಸ್ಯೆಗಳ ಪರಿಹಾರಕ್ಕಾಗಿ (ಬಾಕ್ಸ್) ಸೆಪ್ಟೆಂಬರ್ 2ರ ಹೋರಾಟದ ಮುಂದುವರಿಕೆಯಾಗಿ ರಾಜ್ಯಾದ್ಯಂತ ಜಿಲ್ಲಾ ಮಟ್ಟಗಳಲ್ಲಿ ಪ್ರಬಲ ಹೋರಾಟ ನಡೆಸಲು ಸಿಐಟಿಯು ರಾಜ್ಯಸಮಿತಿ ನಿರ್ಣಯಿಸಿದೆ. 3 ದಿನಗಳು ನಿರಂತರ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಮೇ 16,17,18, ಸಮೂಹಿಕ ಧರಣಿ ಹಾಗೂ ಮೇ 18ರಂದು ಮುತ್ತಿಗೆ ಕಾರ್ಯಕ್ರಮ ನಡೆಸಲು ನಿರ್ಣಯಿಸಿದೆ. ಈ ಹೋರಾಟದ ಯಶಸ್ಸಿಗೆ ಕಾರ್ಮಿಕರನ್ನು ಸಜ್ಜುಗೊಳಿಸಲು ಏಪ್ರಿಲ್ ಕೊನೆಯ ವಾರ ಮತ್ತು ಮೇ ಮೊದಲ ವಾರಗಳಲ್ಲಿ ವ್ಯಾಪಕ ಪ್ರಚಾರಾಂದೋಲನ ನಡೆಸಲಾಗಿದೆ. ಸಿಐಟಿಯು ಪ್ರಮುಖ ಜಿಲ್ಲೆಗಳಲ್ಲಿ ಉಪಜಾಥಾಗಳನ್ನು ಸಂಘಟಿಸಿ ಹೆಚ್ಚಿನ ಕಾರ್ಮಿಕರನ್ನು ತಲುಪಲಾಗಿದೆ.

**ಸಿಐಟಿಯು ಜಾಥಾ**

1886 ರಲ್ಲಿ ಅಮೇರಿಕಾದ ಚಿಕಾಗೋ ನಗರದಲ್ಲಿ "8 ಗಂಟೆಗಳ ಕಾಲ ಕೆಲಸ, 8 ಗಂಟೆ ವಿರಾಮ, 8 ಗಂಟೆ ಮನರಂಜನೆ ಬೇಕೆಂದೂ ಒತ್ತಾಯಿಸಿ ನಡೆದ ಹೋರಾಟದಲ್ಲಿ 4 ಜನ ಕಾರ್ಮಿಕರು ನೇಣುಗಂಬ ಏರಬೇಕಾಯಿತು. ಅಂದು ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಅಗಸ್ಟ್ ಸ್ಪೈಸ್ ಹೇಳಿದಂತೆ ಇಂದಿನ ನಮ್ಮ ಮೌನ ಮುಂದೊಂದು ದಿನ ಶಕ್ತಿಯಾಗಿ ಪ್ರಜ್ವಲಿಸುತ್ತದೆ ಎಂಬ ಆ ಸಂಗಾತಿಯ ಮನದಾಳದ ಆಸೆಯಂತೆ ಇಂದು ಪ್ರಪಂಚದೆಲ್ಲೆಡೆ ಮೇ ದಿನವನ್ನು ಆಚರಿಸಲಾಗುತ್ತಿದೆ.

ಇಡೀ ಪ್ರಪಂಚದ ದುಡಿಯುವ ಜನತೆಯ ಬದುಕಿನ ವಿಮೋಚನೆಯ ದಿನ ಮೇ ದಿನ ಇಂತಹ ಮೇ ದಿನದಂದು ಮಂಡ್ಯದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಪ್ರಾರಂಭವಾಗಿದ್ದು ಸಿಐಟಿಯು ಜಾಥಾ. ಈ ಜಾಥಾ 10 ದಿನಗಳ ಕಾಲ ಮಂಡ್ಯ, ಹಾಸನ, ಕೊಡಗು, ಚಾಮರಾಜ ನಗರ ಮತ್ತು ಮೈಸೂರು ನಗರಗಳಲ್ಲಿ ಸಂಚರಿಸಿ ಮೈಸೂರಿನ ಟೌನ್‌ಹಾಲ್‌ನಲ್ಲಿ ಮೇ 10ರಂದು ಸಂಜೆ ಮುಕ್ತಾಯವಾಯಿತು.




ಜಾಥಾ ಹಲವು ಆರ್ಥಿಕ ಸಂಕಷ್ಟಗಳ ನಡುವೆ ಪ್ರಾರಂಭವಾಯಿತು. ಮಂಡ್ಯ, ಹಾಸನ, ಕೊಡಗು, ಚಾಮರಾಜನಗರ ಜಿಲ್ಲೆಗಳಲ್ಲಿರುವ ಎಲ್ಲಾ ಸಂಘಟನೆಗಳು ಅಸಂಘಟಿತ ಕ್ಷೇತ್ರಕ್ಕೆ ಸೇರಿರುವುದು ಮತ್ತು ಕಾರ್ಮಿಕ ಕಾನೂನುಗಳು ಜಾರಿಯಾಗದಿರುವ ವಿಭಾಗಗಳು.

ಜಾಥಾದ ಉದ್ದೇಶ ಸಂಪೂರ್ಣವಾಗಿ ಅರಿವಿಗೆ ಬಂದ ನಂತರ ಆ ಬಡ ಕಾರ್ಮಿಕರು ಜಾಥಾವನ್ನು ಸ್ವೀಕರಿಸಿದ್ದು, ಸ್ವಾಗತ ಬಯಸಿದ್ದು, ಯಶಸ್ಸು ಆಗಲಿಕ್ಕೆ ದುಡಿದದ್ದು ಅಪಾರ. ಜಾಥಾದಲ್ಲಿರುವ ಸಂಗಾತಿಗಳು ಸಂಘಟಿತ ಮತ್ತು ಅಸಂಘಟಿತ ವಿಭಾಗಕ್ಕೆ ಸೇರಿದವರೇ ಮತ್ತು ಸ್ವತ: ಕಾರ್ಮಿಕರಾಗಿದ್ದವರು.

ಮಂಡ್ಯದ ನಾಗಮಂಗಲಕ್ಕೆ ಸಂಜೆ ಜಾಥಾ ತಲುಪುತ್ತಿದ್ದಂತೆ ಅಲ್ಲಿಯ ಸಾರ್ವಜನಿಕರಿಗೆ ಉತ್ಸಾಹ, ಹಾಡು ಮತ್ತು ಬಾಷಣಗಳ ನಂತರ ಜಾಥಾ ಉದ್ದೇಶ ಒಳ್ಳೆದಿದೆ ಎಂದು ಹಲವಾರು ನಾಗರೀಕರು ಕೈಮುಗಿದರು. ಅಂಗನವಾಡಿ ಕಾರ್ಯಕರ್ತರು ಮನೆಯಲ್ಲಿ ವಾಸ, ಅಲ್ಲಿಯವರೆಗೆ ನಮ್ಮನ್ನು ಸ್ವಾಗತಿಸುವ ಸಡಗರ, ಅಂಗನವಾಡಿ ನೌಕರರಿಗೆ 9 ದಿನಗಳ ಬೇಸಿಗೆ ರಜೆಯ ಸಮಯದಲ್ಲಿ ಬೇಸರ ಮಾಡಿಕೊಳ್ಳದೆ 3ನೇ ಪ್ಲೋರಿನವರಿಗೆ ಕೆಳಗೆ ನೀರನ್ನು ಹೊತ್ತು ರುಚಿಕರವಾದ ಊಟ ಮಾಡಿ ಹಾಕಿದ ನಂತರ ಅವರಿಗೆ ಸಂತೃಪ್ತಿ.

ಹಿರೀಸಾವೆಯಲ್ಲಿ ಹೂಗಳನ್ನು ಮಕರಿಯಲ್ಲಿಟ್ಟುಕೊಂಡು ಮಾರಾಟ ಮಾಡುವ ಒಂದು ಅಜ್ಜಿಗೆ ಜಾಥಾದ ಕರಪತ್ರದಲ್ಲಿರುವುದನ್ನು ಓದಿ ತಿಳಿಸಿದ ನಂತರ 'ಒಂದು ಮಳ' ಹೂ ಕೊಟ್ಟು ಹೋರಾಟ ಯಶಸ್ವಿ ಆಗಲೆಂದೂ ಹಾರೈಸಿದ್ದು, ಚನ್ನರಾಯ ಪಟ್ಟಣದಲ್ಲಿ ಸಭೆಯ ನಂತರ ಹಣ್ಣಿನ ಅಂಗಡಿಯ ರಾಜು "ನಾನು ಬಡತನದಲ್ಲಿ ಬಂದಿರೋನು, ಬಡವರ ಕಷ್ಟದ ಪರಿಹಾರಕ್ಕಾಗಿ ನೀವು ಹೋರಾಟ ನಡೆಸುತ್ತಿದ್ದೀರಿ ಸ್ವಲ್ಪ ಹಣ್ಣುಗಳನ್ನು ತಿನ್ನಿರಿ, ಚೆನ್ನಾಗಿರಿ ಎಂದೂ ಹಾರೈಸಿ ಒಂದು ಗೊನೆ ಬಾಳೆಹಣ್ಣು 5 ಕೆ.ಜಿ ದ್ರಾಕ್ಷಿಯನ್ನು ಸ್ವತಃ ತಂದು ಜೀಪಿಗೆ ಹಾಕಿದ್ದು; ಸಿದ್ಧಾಪುರದಲ್ಲಿ ಸಾರ್ವಜನಿಕ ಸಭೆಯಾದ ನಂತರ ಒಬ್ಬ ತೋಟಕಾರ್ಮಿಕ ಮಾತಾಡಿ ದಣಿದಿದ್ದೀರಿ ನೀರು ಕುಡಿಯಿರಿ ಎಂದು ಬಿಸಿಲರಿ ನೀರಿನ ಬಾಟಲನ್ನು ತಂದುಕೊಟ್ಟಿದ್ದು, ಹೀಗೆ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಹಲವಾರು ಕಾರ್ಮಿಕರು ಸ್ವಯಂಪ್ರೇರಿತರಾಗಿ ಸಹಾಯ ಹಸ್ತ ಚಾಚಿದ್ದರು.

**ಬದಲಾದ ಶೋಷಣೆಯ ರೂಪ**

ಸ್ವಾತಂತ್ರ್ಯ ಪೂರ್ವದಲ್ಲಿ ಕಾರ್ಮಿಕರು ಕೆಲಸದ ಭದ್ರತೆ ಹಾಗೂ ಕನಿಷ್ಠ ಕೂಲಿ ಬೇಕೆಂದೂ ಒತ್ತಾಯಿಸಿ ಮತ್ತು ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದ್ದರು.

ಆದರೆ ಇಂದು ಸ್ವತಂತ್ರ ಬಂದು 57 ವರ್ಷಗಳ ನಂತರ ಕಾರ್ಮಿಕರ ಬೇಡಿಕೆ ಪಟ್ಟಿಯಲ್ಲಿ ಇದೇ ಬೇಡಿಕೆಗಳು ಎಲ್ಲ ವಿಭಾಗದ ಸಾಮಾನ್ಯ ಬೇಡಿಕೆಗಳಾಗಿವೆ.

ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಸಂಘಟನೆ ಕಟ್ಟಿಕೊಂಡು ಹೋರಾಟ ಮಾಡುವಾಗ ಪೊಲೀಸ್, ಸ್ಥಳೀಯ ರಾಜಕಾರಣವನ್ನು ಉಪಯೋಗಿಸಿ ಹೋರಾಟಗಳನ್ನು ದಮನ ಮಾಡುವುದು ಕೆಲವೆಡೆ ಸಾಂಪ್ರದಾಯಿಕ ಎಂಬಂತೆ ನಡೆಯುತ್ತಿದೆ.

ಮೈಸೂರಿನಂತಹ ಜಿಲ್ಲೆಗಳಲ್ಲಿ ಒಂದೇ ಕಾರ್ಖಾನೆಯಲ್ಲಿ ಹಲವು ವಿಧಗಳಲ್ಲಿ ಕಾರ್ಮಿಕರನ್ನು ದುಡಿಸಿ ಅತ್ಯಂತ ಲಾಭವನ್ನು ಗಳಿಸುವುದು ಸಾಮಾನ್ಯವಾಗಿದೆ. ಉದಾ : ಮಾರಿಸ್ ಸ್ಪಿನ್ನರ್ ಲಿಮಿಟೆಡ್ ಎಂಬ ಟೆಕ್ಸ್‌ಟೈಲ್ಸ್ ಕಾರ್ಖಾನೆ ಹುಣಸೂರಿನಲ್ಲಿದೆ. ಖಾಯಂ ಕೆಲಸಗಾರರು 45 ಜನ ತರಬೇತಿ ಪಡೆಯುವವರು 'ಟ್ರೈನೀಸ್) 200, ಗುತ್ತಿಗೆಯಾದಾರದಲ್ಲಿ 65 ಜನ, ಬದಲಿ ಕಾರ್ಮಿಕರು 40 ಜನ ಖಾಯಂ ಮಾತಿಗೊಂಡ ಕೆಲಸಗಾರರನ್ನು ಬಿಟ್ಟರೆ ಉಳಿದವರ ಕೂಲಿ ದಿನಕ್ಕೆ 40ರಿಂದ 65 ರೂಗಳು ಮಾತ್ರ.

ಇವರ್‍ಯಾರಿಗೂ ಇ.ಎಸ್.ಐ, ಪಿ.ಎಫ್ ಇಲ್ಲ. ಯಾವುದೋ ಕಾಗದದ ಮೇಲೆ ಸಹಿ ತೆಗೆದುಕೊಳ್ಳುವುದು. ಹತ್ತಿಯನ್ನು ಹದ ಮಾಡಿ ದಾರ ಮಾಡಬೇಕಾದ ಆ ಕಾರ್ಮಿಕರು ಕೆಲಸ ಮುಗಿಸಿ ಹೊರಗೆ ಬಂದರೆ ಅವರ ಕಣ್ಣು ಹುಬ್ಬುಗಳಲ್ಲಿ, ಮೂಗಿನಲ್ಲಿ, ಮೀಸೆ-ಗಡ್ಡಗಳಲ್ಲಿ, ತಲೆ ಕೂದಲುಗಳ ತುಂಬಾ ಹತ್ತಿಯ ತುಣುಕುಗಳೇ ತುಂಬಿರುತ್ತವೆ.


ಹತ್ತಿಯಲ್ಲಿ ಕೆಲಸ ಮಾಡುವವರಿಗೆ ಯಾವುದೇ ದೂಳು ಹೊಟ್ಟೆಯೊಳಗೆ ಹೋಗದಂತೆ ತಡೆಯುವ ಯಾವುದೇ ರಕ್ಷಣಾ ಕ್ರಮಗಳಿಲ್ಲ.

ಟ್ರೈನಿಗಳಾಗಿ ದುಡಿಯುವ ಕಾರ್ಮಿಕರು ಕೆಲಸಕ್ಕೆ ಸೇರುವ ಮೊದಲೇ " 900 ದಿನಗಳು ಕೆಲಸ ಮಾಡಿದ ನಂತರ ಮಾಲೀಕವರ್ಗ ಕೊಡುವ ಸೌಲಭ್ಯಗಳ ಪ್ಯಾಕೇಜ್‌ನ್ನು (ಅಂದರೆ Settlement) ತೆಗೆದುಕೊಂಡು ಹೋಗುತ್ತೇನೆ ಎಂದು ಪ್ರತಿಯೊಬ್ಬ ಕಾರ್ಮಿಕನಿಂದ ಅಗ್ರಿಮೆಂಟ್ ಮಾಡಿಸಿಕೊಳ್ಳುವುದು" ನಂತರ ಕೆಲಸಕ್ಕೆ ಸೇರಿಸಿಕೊಂಡು 3 ವರ್ಷಗಳಲ್ಲಿ ಸಂಪೂರ್ಣವಾಗಿ ದುಡಿಸಿಕೊಂಡು ಅಲ್ಪ ಪರಿಹಾರದೊಂದಿಗೆ ಮನೆಗೆ ಹೋಗಬೇಕು. ಆತ ಯೂನಿಯನ್ ಸದಸ್ಯನಾಗಬಾರದು.

**ಗುತ್ತಿಗೆ ಕಾರ್ಮಿಕರ ಪರಿಸ್ಥಿತಿ :**

ನಮ್ಮ ಜಾಥಾ ಸುತ್ತಾಡಿದ ಮೈಸೂರು ಜಿಲ್ಲೆ

ಪುಟ 11 ಕ್ಕೆ



# ಜನಸಾಮಾನ್ಯರ ಸೌಲಭ್ಯಗಳಿಗೆ ಎಳ್ಳುನೀರು ಬಿಡುವ ವಿಶ್ವಬ್ಯಾಂಕ್ ನೀತಿ

ಮಹಾರಾಷ್ಟ್ರ ರಾಜ್ಯ ಸರ್ಕಾರ 'ಮಹಾರಾಷ್ಟ್ರ ಜಲ ಸಂಪನ್ಮೂಲ ಸಂರಕ್ಷಣಾ ಪ್ರಾಧಿಕಾರ ಮಸೂದೆ'ಯನ್ನು ಪಾಸು ಮಾಡಿದೆ. ಇದರಲ್ಲೇನು ವಿಶೇಷ ಎಂದು ಕೇಳಬಹುದು. ನೀರಿನ ಖಾಸಗೀಕರಣವೇ ಇದರ ವಿಶೇಷ. ಇಂತಹ ಮಸೂದೆ ಜಾರಿಗೆ ತಂದ ರಾಜ್ಯಗಳಲ್ಲಿ ಮಹಾರಾಷ್ಟ್ರ ಮೊದಲನೆಯದ್ದೂ ಅಲ್ಲ ಕೊನೆಯದ್ದೂ ಅಲ್ಲ. ಆದರೆ ವಿಶ್ವಬ್ಯಾಂಕಿನ ನೀತಿಗಳ ಜಾಡಿನಲ್ಲಿ ಈ ಮಸೂದೆ ಬಂದಿದೆ ಎಂಬುದು ಗಮನಾರ್ಹ.

ವಿಶ್ವಬ್ಯಾಂಕ್ ಆಂಧ್ರ ಪ್ರದೇಶದ ಉದಾಹರಣೆ ತೆಗೆದುಕೊಂಡು ಈ ನೀತಿಗಳ ಜಾರಿಗೆ ಒತ್ತಾಯಪಡಿಸುತ್ತಿದೆ. ಅದರ ಪ್ರಕಾರ ಆಂಧ್ರದ್ದು ದಿಢೀರನೆ ನೀರಿನ ಬೆಲೆ ಹೆಚ್ಚಿಸುವ ನೀತಿ ಅದು ಯಶಸ್ವಿಯಾಗಿದೆಯಂತೆ. ಇಂತಹ ನೀತಿಗಳನ್ನು ಜಾರಿಗೊಳಿಸಹೋಗಿ ಚಂದ್ರಬಾಬು ನಾಯ್ಡು ಅವರ ಸರ್ಕಾರ ಹೀನಾಯ ಸೋಲು ಅನುಭವಿಸಿದ್ದು ಅವರ ಕಣ್ಣಿಗೆ ಕಾಣಿಸುವುದಿಲ್ಲ.

ನೀರಿನ ಖಾಸಗೀಕರಣದಲ್ಲಿ ಲ್ಯಾಟಿನ್ ಅಮೇರಿಕದ ದೇಶಗಳ ನೋವಿನ ಅನುಭವ ಅನೇಕ ಇವೆ. ಅಮೇರಿಕದ ಪಕ್ಕದಲ್ಲೇ ಇರುವ ಈ ದೇಶಗಳಲ್ಲಿ ಈ ನೀತಿಗಳು ಜನರಿಗೆ ಅಪಾರ ಕಷ್ಟನಷ್ಟಗಳನ್ನುಂಟು ಮಾಡಿದವು. ಜನ ಈ ನೀತಿಗಳ ವಿರುದ್ಧ ತಿರುಗಿಬಿದ್ದು ಹೋರಾಡ ತೊಡಗಿದರು.

ನಮ್ಮ ದೇಶದ ಒರಿಸ್ಸಾ ರಾಜ್ಯದಲ್ಲೂ ಇಂತಹ ನೀತಿಗಳನ್ನು ತರಹೋಗಿ ಜನ ಪ್ರತಿಭಟಿಸುವಂತಾಗಿದೆ. ನೀರಾವರಿ ಎನ್ನುವುದು ಶ್ರೀಮಂತ ಜಮೀನುದಾರರ ಹತೋಟಿಗೆ ಹೋಗುವಂತೆ ಈ ನೀತಿಗಳು ಮಾಡಿವೆ.

ವಿಶ್ವ ಬ್ಯಾಂಕಿನ ನೀತಿಗಳನ್ನು ಜಾರಿಗೆ ತರಲು ಆಂಧ್ರದಲ್ಲಿ ನೀರಿನ ಬಳಕೆದಾರರ ಸಂಘ ಎಂಬುದನ್ನು ಪ್ರಾರಂಭಿಸಲಾಯಿತು. ನೀರಿನ ಬಳಕೆದಾರರು ಎಂಬ ಪದವೇ ಅಸಂಬದ್ಧವಾದದ್ದು ಯಾರಾದರೂ ನೀರನ್ನು ಬಳಸದೇ ಇರುವವರಿದ್ದಾರೆಯೇ?

ಇನ್ನೊಂದು ಕಡೆ ಆಂಧ್ರದ ಚಂದ್ರಬಾಬು ನಾಯ್ಡು ಸರ್ಕಾರ ಶುದ್ದೀಕರಿಸಿದ ನೀರನ್ನು ತಂಪುಪೇಯ ತಯಾರಿಸುವ ಕಂಪನಿಗಳಿಗೆ ಲೀಟರಿಗೆ ಬರೀ 25 ಪೈಸೆಗೆ ಮಾರುವ ಹಂತಕ್ಕೆ ಹೋಯಿತು. ಅದೇ ಸಮಯದಲ್ಲಿ ಹೈದರಾಬಾದಿನ ಹಲವು ಪ್ರದೇಶಗಳಲ್ಲಿ ಜನರಿಗೆ ಎರಡೂ ಮೂರು ದಿನಗಳಿಗೊಮ್ಮೆ ಬರೀ ಅರ್ಧ ಗಂಟೆ ಕಾಲ ಸರಬರಾಜು ಮಾಡಲಾಗುತ್ತಿತ್ತು.

ಆಂಧ್ರದ ಮೆಹಬೂಬ ನಗರದ ಕೊಯೆಲ್ ಸಾಗರ್ ಅಣೆಕಟ್ಟಿನ ಪ್ರದೇಶದಲ್ಲಿ ನೀರಿನ ಬಳಕೆದಾರರ ಸಂಘಗಳ ಒಕ್ಕೂಟದ ಉದ್ಘಾಟನೆಗೆ ವಿಶ್ವ ಬ್ಯಾಂಕಿನ ಅಂದಿನ ಅಧ್ಯಕ್ಷ (2000ದಲ್ಲಿ) ವೊಲ್ಫೆನ್ ಸನ್ ಬಂದಾಗ ನೀರಿನ ಬಳಕೆದಾರರಲ್ಲದ (?) ಜನ ತೀವ್ರ ಪ್ರತಿಭಟನೆ ತೋರಿದರು. ಯಾಕೆಂದರೆ ಈ ಯೋಜನೆ ಅವರ ನೀರನ್ನು ಕಸಿದುಕೊಂಡಿತು. ವೊಲ್ಫೆನ್‌ಸನ್ ಮಹಾಶಯ ಕಾರ್ಯಕ್ರಮದ ಸ್ಥಳ ತಲುಪುವುದೇ ಸಾಧ್ಯವಾಗಲಿಲ್ಲ. ಸರ್ಕಾರವೇನೂ ಸುಮ್ಮನಾಗಲಿಲ್ಲ. ಅದು ನಾಯ್ಡು ಸರ್ಕಾರವಲ್ಲವೇ? ಅಣೆಕಟ್ಟಿನ ನಾಮಫಲಕವನ್ನೇ ಇನ್ನೊಂದು ಸ್ಥಳಕ್ಕೆ ಕೊಂಡೊಯ್ದು ಅವರು ಉದ್ಘಾಟನೆ ಮಾಡಿದರು.

ಮಹಾರಾಷ್ಟ್ರದ ಈ ಮಸೂದೆಯನ್ನೇ ನೋಡಿ ಅದು ವಿಶ್ವಬ್ಯಾಂಕ್‌ನ ಪದಕೋಶದಿಂದಲೇ ಪದಗಳನ್ನು ಆಯ್ದುಕೊಂಡಿದೆ. ಅಲ್ಲದೇ ಹನಿ ನೀರಾವರಿ ಅಳವಡಿಸದ ಯಾವುದೇ ರೈತನಿಗೂ ಕಾಲುವೆ ನೀರನ್ನು ಕೊಡಲಾಗದು ಎನ್ನುತ್ತದೆ.

ಹನಿ ನೀರಾವರಿ ಅಳವಡಿಸಲು ಪ್ರತಿ ಎಕರೆಗೆ ಕನಿಷ್ಠ 15000 ರೂಗಳು ಬೇಕಾಗುತ್ತದೆ. ರೈತರು ಪ್ರತಿ ಎಕರೆಗೆ ಇಷ್ಟು ಹೂಡಿಕೆ ಮಾಡಬೇಕು. ಸರ್ಕಾರ ಸಹಾಯಧನವನ್ನು ನೀಡಬಹುದು. ಆದರೆ ಇದರ ಒಟ್ಟು ಪ್ರಯೋಜನ ಹನಿ ನೀರಾವರಿ ಸಾಧನಗಳನ್ನು ಉತ್ಪಾದಿಸುವ ಮತ್ತು ಮಾರಾಟ ಮಾಡುವ ಕಂಪನಿಗಳಿಗೆ ಸರ್ಕಾರ ಪ್ರಾರಂಭಿಸುವ ಪ್ರಾಧಿಕಾರ ಅಧಿಕಾರಿಗಳಿಂದಲೇ ತುಂಬಿಹೋಗಿರುತ್ತದೆ. ಅಂದರೆ ಚುನಾಯಿತ ಜನಪ್ರತಿನಿಧಿಗಳಿಂದ ಇದು ನಡೆಯುವುದಿಲ್ಲ. ನೀರಾವರಿ ನಿರ್ವಹಣೆ ಆಡಳಿತ ಇತ್ಯಾದಿಗಳ ಎಲ್ಲ ಖರ್ಚುಗಳನ್ನು ಬಳಕೆದಾರರಿಂದಲೇ ವಸೂಲು ಮಾಡಬೇಕು. ಒಬ್ಬ ಖ್ಯಾತ ಅರ್ಥಶಾಸ್ತ್ರಜ್ಞರ ಪ್ರಕಾರ ಮಹಾರಾಷ್ಟ್ರದಲ್ಲಿ ಈ ಖರ್ಚು ಪ್ರತಿ ಎಕರೆಗೆ ರೂ.8000ಗಳಷ್ಟಾಗಬಹುದಂತೆ. ಸಣ್ಣ ಮತ್ತು ಅತಿ ಸಣ್ಣ ರೈತರ ಪರಿಸ್ಥಿತಿ ಏನಾಗಬಹುದೆಂಬುದು ಊಹೆಗೆ ಬಿಟ್ಟದ್ದು.

ಇಂತಹ ನೀತಿಗಳ ಮೂಲಕ ಖಾಸಗಿ ಕಂಪನಿಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳ ಕೈಗೆ ಬಡಬೋರೇಗೌಡನ ಜುಟ್ಟನ್ನು ಕೊಡುವ ಹುನ್ನಾರವಂತೂ ಸ್ಪಷ್ಟವಾಗಿಯೇ ಕಾಣಿಸುತ್ತದೆ.

ಈಗಾಗಲೇ (ಎಡರಂಗ ಸರ್ಕಾರಗಳು ಅಧಿಕಾರದಲ್ಲಿರುವ ರಾಜ್ಯಗಳನ್ನು ಹೊರತುಪಡಿಸಿ) ಹಲವು ರಾಜ್ಯಗಳು ಈ ರೀತಿಯ ಆಲೋಚನೆ/ಯೋಜನೆಗಳನ್ನು ಆಯೋಜಿಸುತ್ತಿವೆ/ಜಾರಿಗೊಳಿಸಿವೆ.

ನೀರಿನಂತ ಬಹುಮುಖ್ಯ ನೈಸರ್ಗಿಕ ಸಂಪನ್ಮೂಲವನ್ನು ಖಾಸಗೀಕರಿಸಿದರೆ ಆಗುವ ಪರಿಣಾಮಗಳು ಸ್ಪಷ್ಟವಾಗಿಯೇ ಗೊತ್ತಾಗಿವೆ.

ದೇಶದ ಕೃಷಿ ಇದರಿಂದ ಬಹುದೊಡ್ಡ ಹೊಡೆತ ಅನುಭವಿಸಿದೆ. ಸಾಮ್ರಾಜ್ಯಶಾಹಿಗಳಿಗೆ ಬೇಕಾಗುವುದನ್ನು ನಾವು ಬೆಳೆಯುವಂತಹ (ನಮಗೆ ಬೇಕಾದದ್ದನ್ನು ಬೆಳೆಯಲಾರದೆ) ಪರಿಸ್ಥಿತಿಯನ್ನು ಸೃಷ್ಟಿಸಲಾಗುತ್ತಿದೆ. ಈ ಎಲ್ಲ ನೀತಿಗಳ ಆಳದಲ್ಲಿನ ಉದ್ದೇಶವನ್ನು ನಮ್ಮ ಭೂಜ್ರ್ವಾ-ಜಮೀನ್ದಾರಿ ಆಳುವ ವರ್ಗಗಳು ಕಂಡೂ ಕಾಣದಂತೆ ಜಾರಿಗೊಳಿಸಹೊರಟಿದೆ.

ಈ ನೀತಿಗಳಿಂದ ನೋವುಣ್ಣುವ ಜನತೆ ಹೋರಾಟದ ದಾರಿ ಹಿಡಿಯಬೇಕಾದ ಅವಶ್ಯಕತೆ ತುರ್ತಾಗಿದೆ.

(ಪಿ.ಸಾಯಿನಾಥ ಅವರ ಪ್ರಕಟಿತ ದಿ ಹಿಂದೂ ಪತ್ರಿಕೆ ಲೇಖನದ ಆಧಾರದ ಮೇಲೆ)

# ಕರಾವಳಿ ಜಿಲ್ಲೆಯಾದ್ಯಂತ ದುಡಿವ ಜನರನ್ನು ಹೋರಾಟಕ್ಕೆ ಅಣಿಗೊಳಿಸಿದ ಜಾಥಾಗಳು

ಸಿಐಟಿಯು ಕರ್ನಾಟಕ ರಾಜ್ಯಸಮಿತಿಯ ತೀರ್ಮಾನದಂತೆ ಮೇ 3ರಿಂದ 8ರತನಕ ಕರಾವಳಿ ಜಿಲ್ಲೆಗಳಾದ ದಕ್ಷಿಣಕನ್ನಡ, ಉಡುಪಿ, ಉತ್ತರಕನ್ನಡ ಜಿಲ್ಲೆಯಾದ್ಯಂತ ಸಿಐಟಿಯು ವಾಹನ ಪ್ರಚಾರ ಜಾಥಾ ಸಂಚರಿಸಿತು.

ಸಿಐಟಿಯು ಕರ್ನಾಟಕ ರಾಜ್ಯಸಮಿತಿಯ ಅಧ್ಯಕ್ಷರಾದ ಕಾಂ.ಬಿ.ಮಾಧವರವರು ಮೇ3, ರಂದು ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿ ಪೇಟೆಯಲ್ಲಿ ಜಾಥಾ ಉದ್ಘಾಟಿಸಿದರು.

ಕರ್ನಾಟಕ ರಾಜ್ಯದ ಕಾರ್ಮಿಕವರ್ಗದ ಅಸಂಘಟಿತ ವಲಯದ ಕಾರ್ಮಿಕರಿಗೆ ಕನಿಷ್ಟ ಕೂಲಿ, ಕಲ್ಯಾಣಯೋಜನೆ, ಬೀಡಿಕಾರ್ಮಿಕರಿಗೆ ವಾರದಲ್ಲಿ 6 ದಿನಗಳ ಕೆಲಸ, ಕನಿಷ್ಟ ಕೂಲಿ, 3 ವರ್ಷಗಳ ತುಟ್ಟಿಭತ್ತೆ ಪಾವತಿ, ಧೂಮಪಾನ ನಿಷೇಧ ಕಾನೂನಿಗೆ ತಿದ್ದುಪಡಿಗೆ ಆಗ್ರಹ, ಅಂಗನವಾಡಿ, ಗ್ರಾಮಪಂಚಾಯತ್ ನೌಕರರಿಗೆ ಸೌಲಭ್ಯ, ಅಕ್ಷರದಾಸೋಹ ಕಾರ್ಮಿಕರಿಗೆ ಗೌರವಧನ ಹೆಚ್ಚಳ, ಸೌಲಭ್ಯ, ಟೆಲಿಕಾಂ, ವಿದ್ಯುತ್ ಇಲಾಖೆಯಲ್ಲಿನ ದಿನಕೂಲಿ ನೌಕರರಿಗೆ ಸೌಲಭ್ಯ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಇತ್ಯಾದಿ ಬೇಡಿಕೆಗಳ ಬಗ್ಗೆ ಸಾರ್ವಜನಿಕ ಸಭೆಗಳಲ್ಲಿ ವಿವರಿಸಲಾಯಿತು.

ಜಾಥಾದ ನಾಯಕತ್ವವನ್ನು ಸಿಐಟಿಯು ರಾಜ್ಯಸಮಿತಿಯ ಸಹಕಾರ್ಯದರ್ಶಿ ವಸಂತ ಆಚಾರಿಯವರು ವಹಿಸಿದ್ದು, ಜಾಥಾ ತಂಡದಲ್ಲಿ ಮುಖಂಡರುಗಳಾಗಿ ಸುಕುಮಾರ್, ಜೆ.ಬಾಲಕೃಷ್ಣಶೆಟ್ಟಿ, ಬಿ.ಎಂ.ಭಟ್, ಗೀತಾ, ಯಶೋಧ, ಉಡುಪಿ ಜಿಲ್ಲೆಯಲ್ಲಿ ವಿಶ್ವನಾಥ ರೈ, ದೋಗುಸುವರ್ಣ, ಸಾಧು ಅಮೀನ್, ಹೆಚ್, ವಿಠ್ಠಲ, ಕೆ.ಶಂಕರ್, ಹೆಚ್,ನರಸಿಂಹ, ಮುತ್ತಯ್ಯ, ಉತ್ತರಕನ್ನಡ ಜಿಲ್ಲೆಯಲ್ಲಿ ತಿಲಕಗೌಡ, ಸುಭಾಸ್ ಕೊಪ್ಪೀಕರ್, ಟಿ.ಎಸ್.ನಾಯಕ್, ಯಮುನ ಗಾಂವ್ಕರ್‌ರವರುಗಳು ಇದ್ದು ಅಲ್ಲಲ್ಲಿ ಭಾಷಣ ಮಾಡಿದರು.

ಜಾಥಾದಲ್ಲಿ ಹಾಡುಗಳ ನಿರ್ದೇಶಕರು ಹಾಗೂ ಹಾಡುಗಾರ ರಾದ ಜಯರಾಮ ಮಯ್ಯ, ಈಶ್ವರಿ, ಗೀತಾ, ಯಶೋಧ, ಅಜಯ್, ಸುಭಾಸ್ ನಾಯಕ್ ರವರುಗಳು ಹೋರಾಟದ ಹಾಡುಗಳನ್ನು ಹಾಡಿದರು.

ಜಾಥಾವನ್ನು ಬ್ಯಾನರು, ಬಾವುಟ, ಹೂಮಾಲೆ, ಪಠಾಕಿ ಸಿಡಿಸಿ ಸ್ವಾಗತಿಸಲಾಯಿತು. ಕಾರ್ಮಿಕರು ಮೆರವಣಿಗೆಯಲ್ಲಿ ಜಾಥಾ ತಂಡವನ್ನು ಕೊಂಡೊಯ್ದು ಸಾರ್ವಜನಿಕ ಸಭೆಗಳನ್ನು ನಡೆಸಲಾಯಿತು.

ಮೇ 8ರಂದು ಸಂಜೆ ದಾಂಡೇಲಿಯಲ್ಲಿ ಸಮಾರೋಪ ಸಭೆ ನಡೆಯಿತು. ದಾಂಡೇಲಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಲಿನ ಕಾರ್ಮಿಕ ಮುಖಂಡರಾದ ಕಾಂ.ಸಾವಂತ್, ಟಿ.ಎಸ್. ನಾಯಕ್, ಇನ್ನಿತರರು ಭಾಷಣ ಮಾಡಿದರು.

**ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ ಜಿಲ್ಲಾಧಿಕಾರಿಗಳ ಕಛೇರಿ ಮುಂದುಗಡೆ ಪಿಕೆಟಿಂಗ್, ನೂರಾರು ಕಾರ್ಮಿಕರ ಬಂಧನ**




ಮೇ 12ರಂದು ನೂರಾರು ಕಾರ್ಮಿಕರು ಸಿಐಟಿಯು ಕಾರ್ಮಿಕ ಸಂಘಟನೆಯ ನೇತೃತ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿ ಮುಂದುಗಡೆ ಪಿಕೆಟಿಂಗ್ ಚಳುವಳಿ ನಡೆಸಿ ಬಂಧನ ಕ್ಕೊಳಗಾದರು. ಸಿಐಟಿಯು ಕಛೇರಿಯಿಂದ ಹೊರಟ ಕಾರ್ಮಿಕರ ಮೆರವಣಿಗೆ ಬೀಡಿ ಕಾರ್ಮಿಕರು, ಅಕ್ಷರದಾಸೋಹ, ಕಟ್ಟಡ ಕಾರ್ಮಿಕರ, ಬಿ.ಎಸ್.ಎನ್.ಎಲ್ ದಿನಗೂಲಿ ನೌಕರರ, ಅಂಗನವಾಡಿ ನೌಕರರ ಬೇಡಿಕೆಗಳ ಘೋಷಣೆ ಕೂಗುತ್ತಾ ಜಿಲ್ಲಾಧಿಕಾರಿ ಕಛೇರಿ ಮುತ್ತಿಗೆ ಹಾಕಿದರು.




ಪಿಕೆಟಿಂಗ್ ಚಳುವಳಿ ನಡೆಸುತ್ತಿದ್ದ ಕಾರ್ಮಿಕರನ್ನು ಉದ್ದೇಶಿಸಿ ಸಿಐಟಿಯು ರಾಜ್ಯಸಮಿತಿ ಅಧ್ಯಕ್ಷರಾದ ಬಿ.ಮಾಧವರವರು ಮಾತನಾಡುತ್ತಾ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿ ಮುಂದುಗಡೆ ನಡೆಯುತ್ತಿರುವ ಪಿಕೆಟಿಂಗ್ ಚಳುವಳಿ, ಕರ್ನಾಟಕ ರಾಜ್ಯದ ಕಾರ್ಮಿಕ ವರ್ಗದ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ನಡೆಯುತ್ತಿದ್ದು, 2004ರ ಸೆಪ್ಟೆಂಬರ್ 2ರ ವಿಧಾನಸೌಧ ಚಲೋ ಕಾರ್ಯಕ್ರಮದ ಮುಂದುವರಿದ ಭಾಗವಾಗಿದೆ ಎಂದು ಹೇಳಿದರು. ಸಿಐಟಿಯು ಅಸಂಘಟಿತ ಕಾರ್ಮಿಕರ ಕರಡು ಮಸೂದೆಯನ್ನು ಕರ್ನಾಟಕ ರಾಜ್ಯಸರಕಾರಕ್ಕೆ ನೀಡಿದ್ದು, ಅದರಂತೆ ಮಸೂದೆಯನ್ನು ತರಬೇಕು. ಅಸಂಖ್ಯಾತ ಸಂಖ್ಯೆಯಲ್ಲಿರುವ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರಿಗೆ 1996 ರ ಅಖಿಲ ಭಾರತ ಕಾನೂನನ್ನು ರಾಜ್ಯದಲ್ಲಿ ಜಾರಿಗೆ ತರಬೇಕು. ಬೀಡಿಕಾರ್ಮಿಕರಿಗೆ ವಾರದಲ್ಲಿ 6 ದಿನಗಳ ಕೆಲಸ, 3 ವರ್ಷಗಳ ತುಟ್ಟಿಭತ್ತೆ ಪಾವತಿಸಲು ರಾಜ್ಯ ಸರಕಾರ ಬೀಡಿ ಮಾಲಿಕರ ಮೇಲೆ ಕ್ರಮ ಕೈಗೊಳ್ಳಬೇಕು, ಅಕ್ಷರದಾಸೋಹ ಕಾರ್ಮಿಕರ ಗೌರವಧನ ಏರಿಸಬೇಕು, ಅವರಿಗೆ ಸೌಲಭ್ಯಗಳನ್ನು ನೀಡಬೇಕು, ಗ್ರಾಮಪಂಚಾಯತ್ ನೌಕರರಿಗೆ ನಿವೃತ್ತಿ ವೇತನ ಭಡ್ತಿ ಇನ್ನಿತರ ಸೌಲಭ್ಯ ನೀಡಬೇಕು, ಬಿಎಸ್‌ಎನ್‌ಎಲ್ ದಿನಗೂಲಿ ನೌಕರರಿಗೆ ಸೌಲಭ್ಯ ನೀಡಬೇಕೆಂಬ ಬೇಡಿಕೆಗಳ ಬಗ್ಗೆ ಅವರು ವಿವರಿಸಿದರು.

ಮೇ 3ರಿಂದ 8ರ ತನಕ ಕರಾವಳಿ ಜಿಲ್ಲೆಗಳಾದ ದ.ಕ, ಉಡುಪಿ, ಉತ್ತರ ಕನ್ನಡ ಜಿಲ್ಲೆಯಾದ್ಯಂತ ಸಿಐಟಿಯು ವಾಹನ ಜಾಥಾ ಕರ್ನಾಟಕ ರಾಜ್ಯದ ಕಾರ್ಮಿಕವರ್ಗದ ಬೇಡಿಕೆಗಳ ಬಗ್ಗೆ ಜನಾಭಿಪ್ರಾಯ ಮೂಡಿಸಿ, ಮೇ 12ರಂದು ಜಿಲ್ಲಾಧಿಕಾರಿಗಳ ಕಛೇರು ಎದುರು ಪಿಕೆಟಿಂಗ್ ಚಳುವಳಿ ನಡೆಸಲಾಗಿದೆ. ಈ ಬೇಡಿಕೆಗಳ ಬಗ್ಗೆ ರಾಜ್ಯ ಸರಕಾರ ಸ್ಪಂಧಿಸದಿದ್ದರೆ ಇನ್ನಷ್ಟು ತೀವ್ರತರದ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದು ಸಿಐಟಿಯು ದ.ಕ ಜಿಲ್ಲಾ ಅಧ್ಯಕ್ಷರಾದ ಕೆ.ಆರ್.ಶ್ರೀಯಾನ್‌ರವರು ಎಚ್ಚರಿಕೆ ನೀಡಿದರು.

ನಂತರ ಪಿಕೆಟಿಂಗ್ ಚಳುವಳಿಯಲ್ಲಿ ಭಾಗವಹಿಸಿದ ನೂರಾರು ಕಾರ್ಮಿಕರನ್ನು ಪೋಲೀಸರು ಬಂಧಿಸಿ ನಂತರ ಬಿಡುಗಡೆಗೊಳಿಸಿದರು.

ಪಿಕೆಟಿಂಗ್ ಚಳುವಳಿಯ ನೇತೃತ್ವವನ್ನು ಸಿಐಟಿಯು ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಉಪಾಧ್ಯಕ್ಷರುಗಳಾದ ಯು.ಬಿ.ಲೋಕಯ್ಯ, ರಮಣಿ, ಮಂಜಪ್ಪ.ಕೆ, ಕಾರ್ಯದರ್ಶಿಗಳಾದ ಜೆ.ಬಾಲಕೃಷ್ಣ ಶೆಟ್ಟಿ, ಸುಕುಮಾರ್, ಸಿಐಟಿಯು ನಾಯಕರುಗಳಾದ ಬಾಬು ದೇವಾಡಿಗ ಕೆ.ಸದಾಶಿವದಾಸ್, ಗಂಗಯ್ಯ ಅಮೀನ್, ಜಯಂತಿ ಬಿ.ಶೆಟ್ಟಿ, ಪದ್ಮಾವತಿ ಎಸ್.ಶೆಟ್ಟಿ, ಜಂಯತ್ ನಾಯ್ಕ, ಕೆ.ಪೂವಪ್ಪ ಸಾಲಿಯಾನ್, ರಾಧಾ, ಗಿರಿಜ, ಕೆ.ಯಾದವಶೆಟ್ಟಿ ಮುಂತಾದವರು ವಹಿಸಿದ್ದರು. ಅಂದೆ ಜಿಲ್ಲೆಯ ಬಂಟ್ವಾಳ, ಬೆಳ್ತಂಗಡಿ, ಪುತ್ತೂರು, ಸುಳ್ಯದಲ್ಲೂ ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರು ಪ್ರತಿಭಟಿಸಿ, ಪಿಕೆಟಿಂಗ್ ಚಳುವಳಿ ನಡೆಸಿದ್ದಾರೆ.

**- ವಸಂತಆಚಾರಿ**

# ಕಾರ್ಮಿಕರ ಹೋರಾಟ............

ಪುಟ 9 ರಿಂದ

ಹಲವಾರು ಕಾರ್ಖಾನೆಗಳನ್ನು ಸಂಪರ್ಕಿಸಿದಾಗ ಗುತ್ತಿಗೆ ಪದ್ಧತಿಯ ಬಗ್ಗೆ ಸುಪ್ರೀಂ ಕೋರ್ಟ್ ಕೊಟ್ಟಿರುವ ಆದೇಶ

"ಯಾವುದೇ ವಿಭಾಗದಲ್ಲಿ ಖಾಯಂ ಕೆಲಸವಿದ್ದರೆ ಆ ಕೆಲಸ ಮಾಡುವ ಕಾರ್ಮಿಕರನ್ನು ಖಾಯಂ ಮಾಡಬೇಕೆಂದಿದೆ" ಆದರೆ ಇಂದು ಎಲ್ಲಾ ಕೆಲಸಗಳಿಗೂ ಗುತ್ತಿಗೆ ಅಡಿಯಲ್ಲಿ ಕಾರ್ಮಿಕರನ್ನು ನೇಮಿಸಿಕೊಳ್ಳುವುದು ಸಾಮಾನ್ಯವಾಗಿದೆ. ಕಾರ್ಮಿಕ ಸಂಘ ಇರುವ ಕಾರ್ಖಾನೆಗಳಲ್ಲಿ ಮಾತ್ರ ಗುತ್ತಿಗೆ ಕಾರ್ಮಿಕರಿಗೆ ಇಎಸ್ಐ, ಪಿ.ಎಫ್ ಬಿಟ್ಟರೆ ಶೋಷಿಸುತ್ತಿರುವುದು ಸಾಮಾನ್ಯವಾಗಿದೆ." ಈ ವ್ಯವಸ್ಥೆ ಇಡೀ ರಾಜ್ಯದಾದ್ಯಂತ ಇದೆ.

ನಂಜನಗೂಡಿನ ಕೈಗಾರಿಕಾ ಪ್ರದೇಶದಲ್ಲಿರುವ ಫೈಯರ್ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ 13 ತಿಂಗಳಿಂದ ಮಹಿಳೆಯರ ಮತ್ತು ಪುರುಷ ಕಾರ್ಮಿಕರು ಸುಮಾರು 550 ಜನರು ದುಡಿಯುತ್ತಿದ್ದಾರೆ.

ಇಲ್ಲಿ ಟ್ರೈನಿಗಳೆಂದು ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡು ತಮಿಳುನಾಡಿನ ತಿರುಚ್ಚಿ ಮುಂತಾದ ಕಡೆಗಳಲ್ಲಿ ತರಬೇತಿ ಕೊಡಿಸಿ ಅವರಿಂದ ಕೆಲವು ದಿನಗಳು ಕೆಲಸ ಮಾಡಿಸಿಕೊಂಡು ನಂತರ ಇದ್ದಕ್ಕಿದ್ದಂತೆ ಕೆಲಸಗಾರರನ್ನು ಕೆಲಸದಿಂದ ತೆಗೆಯುವುದು. ಹಾಗೆಯೇ 21 ಜನ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿದ್ದನ್ನು ವಿರೋಧಿಸಿ ಕಾರ್ಮಿಕರು ಸಂಘಟಿತರಾಗಿ, ಆ ಕಾರ್ಖಾನೆಯ ಕೆಲವು ಮಹಿಳಾ ಕಾರ್ಮಿಕರು ಬೇರೆ ಕಾರ್ಮಿಕರನ್ನು ಮನವೊಲಿಸಿ ಸಂಘಕ್ಕೆ ಸೇರಬೇಕೆಂದೂ ಕಾರ್ಮಿಕರ ಮನೆಗಳಿಗೆ ಹೋಗಿ ವಿನಂತಿಸಿದ್ದಕ್ಕೆ ಪೊಲೀಸರು, ಮಾಲೀಕರು ಒಂದಾಗಿ ಏಪ್ರಿಲ್ 14ರಂದು ರಾತ್ರಿ ಆ ಮಹಿಳಾ ಕಾರ್ಮಿಕರನ್ನು ಬಂಧಿಸಿ, ಸ್ಟೇಷನ್ನಿನಲ್ಲಿಟ್ಟು, ಬೆದರಿಸಿ ನಂತರ ಬಿಡುಗಡೆ ಮಾಡಿದ್ದಾರೆ. ಮಾಲೀಕರ ಈ ತಂತ್ರದಿಂದಾಗಿ ಕಾರ್ಮಿಕರು ಇನ್ನಷ್ಟು ಕುಪಿತರಾಗಿ ಸಂಘವನ್ನು ಬಲಪಡಿಸಿಕೊಂಡಿದ್ದಾರೆ. ಆ ಕಾರ್ಮಿಕರ ಮಾತಿನಲ್ಲಿ ಹೇಳುವುದಿದ್ದರೆ "ಸಂಘ ಮಾಡಿದ ನಂತರ ಕಾರ್ಖಾನೆಯಲ್ಲಿ ಹಲವಾರು ಬದಲಾವಣೆಗಳಾಗಿವೆ" ಮಹಿಳೆಯರನ್ನು ಜೂನ್ 6ರಂದು ಇಡೀ ರಾತ್ರಿ ದುಡಿಸಿದ್ದಾರೆ, ನಂತರ ಉತ್ಪಾದನೆ ಇದ್ದಾಗ ರಾತ್ರಿ 8-30, 9-30 ಗಂಟೆಗೆ ದುಡಿಸಿ ಯಾವುದಾದರೂ ಒಂದು ಸರ್ಕಲ್‌ನಲ್ಲಿ ಬಿಡುತ್ತಿದ್ದರು. ನಂತರ ಅವರೇ ಬಸ್ಸು ಹಿಡಿದು ಮನೆಗಳಿಗೆ ತಲುಪಬೇಕಾಗಿತ್ತು. ಅದು Over time ಹೆಸರಲ್ಲಿ, ಸಂಬಳ ಮಾತ್ರ ಸಿಂಗಲ್, ಈಗ ಅದು ಬದಲಾಗಿದೆ" ಎಂಬುದನ್ನು ಬಹಳ ಗಾಂಭೀರ್ಯವಾಗಿ ನುಡಿಯುತ್ತಾರೆ.

ಇನ್ನು ಕರಾವಳಿ ಜಿಲ್ಲೆಗಳಲ್ಲಿ ಮುಖ್ಯ ಉದ್ಯೋಗವಾಗಿರುವ ಪ್ಲಾಂಟೇಶನ್‌ನಲ್ಲಿ ಕಾರ್ಮಿಕರನ್ನು ನೋಡಿದಾಗ, ಅವರು ಇಂದಿಗೂ ವಾಸ ಮಾಡುವ ವಸತಿ ಪ್ರದೇಶಗಳನ್ನು ನೋಡಿದಾಗ ಈ ಸಮಾಜದಲ್ಲಿ ಎಲ್ಲಾ ಕಷ್ಟಗಳನ್ನು ಅನುಭವಿಸಲಿಕ್ಕಾಗಿಯೇ ಇವರು ಇದ್ದಾರೇನೂ ಎಂಬ ಭಾವನೆ ಎಲ್ಲರಿಗೂ ಬಂದೇ ಬರುತ್ತಿತ್ತು.

**ದೇವರು - ಧರ್ಮ**

ಈ ದೇವರು ಧರ್ಮಗಳ ಮುಂದಿಟ್ಟುಕೊಂಡು
ಕೆಲವರೇ ಬೇಡುತ್ತ ಬೀಗಿದರು ಇಂದು
ಬಹುಜನರ ಮೌಢ್ಯವೇ ಇವರೆಲ್ಲ ಮೂಲ
ಈ ಮೂಲ ಅಳಿವುದಕೆ ಇನ್ನೆಷ್ಟು ಕಾಲ?

- ವಿಡಂಬಾರಿ

ಕಾಕೋಳಿ ಎಸ್ಟೇಟಿನ ಕಾರ್ಮಿಕ ಸಂಘದ ನಾಯಕರಾದ ಕಾಂ.ಅಣ್ಣು ಪೂಜಾರಿ ಮನೆಯಲ್ಲಿ ತಂಗಿದ್ದು ಅಂದು ಆ ಪ್ರದೇಶದ ಎಲ್ಲಾ ಕಾರ್ಮಿಕರಿಗೂ ಸಂತೋಷ ತಂದಿತ್ತು. 5-6 ಜನ ಮಹಿಳಾ ಮತ್ತು ಪುರುಷ ಕಾರ್ಮಿಕರು ರಾತ್ರಿ 8.00 ಕ್ಕೆ ಅಡುಗೆ ಕೆಲಸ ಪ್ರಾರಂಭಿಸಿದದರು. ಅಷ್ಟರಲ್ಲಿಯೇ ಕಾಂ.ಅಣ್ಣು ಹತ್ತಿರ ಕಾರ್ಮಿಕರ ಬಗ್ಗೆ ಚರ್ಚೆಯೂ ಮುಗಿದಿತ್ತು.

1946 ರಲ್ಲಿ ಕೊಡಗು, 1956 ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಕಾಡುಮನೆ ಎಸ್ಟೇಟ್, ಕಾರ್ಕ ಕುರ್ಚಿಲ್ ಎಸ್ಟೇಟುಗಳಲ್ಲಿ ಹೋರಾಟ ಮಾಡಿ ಹಲವಾರು ದಬ್ಬಾಳಿಕೆಗಳನ್ನು ಎದುರಿಸಿ 1956 ರಲ್ಲಿ ರಾಜ್ಯದಲ್ಲಿ ಪ್ಲಾಂಟೇಶನ್ ಲೇಬರ್ ರೂಲ್ಸನ್ನು ಜಾರಿ ಮಾಡಿಸಲು ಅಂದು ಪ್ರಾರಂಭವಾದ ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಶ್ರಮಿಸಿತ್ತು.



ಮಡಿಕೇರಿಯಲ್ಲಿ ಜಿಲ್ಲಾಧಿಕಾರಿ ಕಛೇರಿ ಮುತ್ತಿಗೆ

ಆ ಧೀರ ಹೋರಾಟವನ್ನು ಮಾಡಿದವರಲ್ಲಿ ಅರೆಹಳ್ಳಿ ಕೌಕುಳಿ ಎಸ್ಟೇಟಿನ ಕಾರ್ಮಿಕರು ಕೂಡಾ. ಇಂದಿನ ಜಾಗತೀಕರಣದ ನೀತಿಗಳಿಂದಾಗಿ ಕಾಫಿಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆಯಿಲ್ಲವೆಂದೂ ಮಾಲೀಕರು ತಮ್ಮ ಸುಖಕ್ಕೆ ಏನನ್ನು ಅಡ್ಡಿ ಮಾಡಿಕೊಳ್ಳದೇ ಸಂಪೂರ್ಣವಾಗಿ ಕಾರ್ಮಿಕರನ್ನು ಶೋಷಿಸಲು ಮುಂದಾಗಿದ್ದಾರೆ.

ಎಲ್ಲಾ ಕೋಟಗಳಲ್ಲಿ ಶೇ.75 ಭಾಗ ಗುತ್ತಿಗೆಯಾಧಾರದಲ್ಲಿ ಮತ್ತು ದಿನಗೂಲಿಗಳನ್ನಾಗಿ ಬೇರೆ ಬೇರೆ ಊರುಗಳಿಂದ ಸ್ಥಳೀಯರನ್ನು ವಾಹನಗಳಲ್ಲಿ ತುಂಬಿಸಿಕೊಂಡು ಬಂದು ಕೆಲಸ ಮಾಡಿಸಿ ಪುನಃ ಸಂಜೆ ವಾಪಸ್ಸು ಕರೆದುಕೊಂಡು ಹೋಗುವ ಪರಂಪರೆ ದಿನನಿತ್ಯದ್ದು ಆಗಿದೆ.

ಈಗಲೂ ಕಾರ್ಮಿಕ ಕಾನೂನುಗಳನ್ನು ಖಾಯಂ ಕಾರ್ಮಿಕರ ನಡುವೆ ಜಾರಿ ಮಾಡದಿರುವುದು, ಇಂದಿಗೂ ಮಹಿಳಾ ಕಾರ್ಮಿಕರು ಪ್ಲಾಸ್ಟಿಕ್ ಗೋಣಿಚೀಲವನ್ನು ಮೈಗೆ ಧರಿಸಿ, ಪ್ಲಾಸ್ಟಿಕ್ ಬೂಟುಗಳನ್ನು ಹಾಕಿಕೊಂಡು ಗಿಡಗಳಿಗೆ ಔಷಧಿ ಹೊಡೆಯುವ 25 ಲೀಟರ್‌ಗಳ ಕ್ಯಾನನ್ನು ಬೆನ್ನಿಗೆ ನೇತುಹಾಕಿಕೊಂಡು ಕೆಲಸ ಮಾಡುವುದು, ಆ ಕಾರ್ಮಿಕರು ವಾಸ ಮಾಡುವ ಸ್ಥಳಗಳಲ್ಲಿ ನಾಗರೀಕ ಸೌಲಭ್ಯಗಳು ಇಲ್ಲದೇ ಬದುಕುತ್ತಿರುವುದು ಕೇವಲ ಕಥೆಯಲ್ಲ ವಾಸ್ತವ. ಹೀಗೆ ಹಲವಾರು ಪ್ರದೇಶಗಳನ್ನು ಸುತ್ತುವಾಗ ಕಾರ್ಮಿಕರಿಗೆ 'ನನ್ನ ಕಷ್ಟ ಕೇಳಿ' ಎಂದು ನಮಗೆ ಮುಗಿಬಿದ್ದವರೇ ಜಾಸ್ತಿ.

ಇನ್ನು ಎಲ್ಲರಿಗೂ ತಿಳಿದಿರುವಂತೆ ಸರಕಾರಿ ಸಂಸ್ಥೆಗಳಡಿಯಲ್ಲಿ ದುಡಿಯುವ ಅಂಗನವಾಡಿ, ಬಿಸಿಯೂಟ, ಗ್ರಾಮ ಪಂಚಾಯ್ತಿ, ಮುನ್ಸಿಪಾಲಿಟಿಗಳಲ್ಲಿ ದುಡಿಯುವವರು, ಹಮಾಲಿ ಕಾರ್ಮಿಕರು, ಬೀಡಿ ಕಾರ್ಮಿಕರು ಇನ್ನೂ ಸಣ್ಣಪುಟ್ಟ- ಮಧ್ಯಮ ಕಾರ್ಖಾನೆಗಳಲ್ಲಿ ದುಡಿಯುವ ಎಲ್ಲಾ ಕಾರ್ಮಿಕರಿಗೆ ನಮ್ಮ ಜೀವನದ ಬದುಕಿನ ಕಥೆಯನ್ನು ಹೇಳಿಕೊಳ್ಳಲಿಕ್ಕೆ ಸಿಐಟಿಯು ಜಾಥಾ ಒಂದು ಅವಕಾಶವಾಗಿತ್ತು.

ತುಮಕೂರಿನ ತಿಪಟೂರಿನಲ್ಲಿ ಪ್ರಾರಂಭವಾಗಿ 4 ದಿನಗಳ ಕಾಲ ಜಿಲ್ಲೆಯಾದ್ಯಂತ ಸಂಚರಿಸಿ 5 ರಂದು ಕುಣಿಗಲ್‌ನಲ್ಲಿ ಮುಕ್ತಾಯವಾಯಿತು. ಬೆಳ್ತಂಗಡಿ ಮೇ 3 ರಿಂದ ಪ್ರಾರಂಭವಾಗಿ ಮಂಗಳೂರು, ಉಡುಪಿ, ಉ.ಕನ್ನಡ ಜಿಲ್ಲೆಗಳಲ್ಲಿ ಸಂಚರಿಸಿ ಮೇ 8ರಂದು ದಾಂಡೇಲಿಯಲ್ಲಿ ಮುಕ್ತಾಯವಾಯಿತು.

ಮೇ 7ರಂದು ಹೊಸಪೇಟೆಯಲ್ಲಿ ಪ್ರಾರಂಭವಾಗಿ ಜಿಲ್ಲೆಯಾದ್ಯಂತ ಸಂಚರಿಸಿ ಮೇ 9 ರಂದು ಬಳ್ಳಾರಿ ನಗರದಲ್ಲಿ ಮುಕ್ತಾಯವಾಗಿದೆ.

ಮೇ 4ರಂದು ಸಿಂಧನೂರಿನಲ್ಲಿ ಪ್ರಾರಂಭವಾಗಿ ರಾಯಚೂರು, ಗುಲ್ಬರ್ಗಾ ಜಿಲ್ಲೆಗಳಲ್ಲಿ ಸಂಚರಿಸಿ ಬೀದರನಲ್ಲಿ ಮೇ 7 ರಂದು ಮುಕ್ತಾಯವಾಗಿದೆ.

ಬೆಂಗಳೂರು ಮೈಸುರು ರಸ್ತೆ, ನೆಲಮಂಗಲ ರಸ್ತೆ, ಕೆ.ಆರ್.ಪುರಂನಲ್ಲಿ 50ಕ್ಕಿಂತಲೂ ಹೆಚ್ಚು ಸ್ಕೂಟರ್‌ಗಳ ಜಾಥಾ ಬೆಂಗಳೂರಿನಲ್ಲಿ ನಡೆಯಿತು.

ಒಟ್ಟು ರಾಜ್ಯದಲ್ಲಿ ಜಾಥಾಗಳು ನಡೆದು ನೂರಾರು ಸಭೆಗಳನ್ನು ನಡೆಸಲು ಸಾಧ್ಯವಾಗಿದೆ.

ಜಾಥಾದ ಕರೆಯಂತೆ ಮೇ 12ರಂದು ರಾಜ್ಯದ ದುಡಿಯುವ ವರ್ಗ ತಾವು 'ಗುಲಾಮರಲ್ಲ' ನಮ್ಮ ಬದುಕಿ ಉಳಿಯುವ ಕಾರ್ಮಿಕ ಕಾನೂನುಗಳ ಸೌಲಭ್ಯಗಳು ಜಾರಿಯಾಗಬೇಕೆಂದು ಒತ್ತಾಯಿಸಿ 21 ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಜಿಲ್ಲಾ ಕಛೇರಿಗಳನ್ನು ಮುತ್ತಿಗೆ ಹಾಕಲು ಹೋದಾಗ ಪೊಲೀಸರು ಬಂಧಿಸಿ ಬಿಡುಗಡೆ ಮಾಡಿದ್ದಾರೆ. ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಮನೆಗೆ ಹೋಗಲು ಬಿಡುವುದಿಲ್ಲವೆಂದೂ ಪೊಲೀಸ್ ಇಲಾಖೆ ಬಹಳ ಗಂಭೀರವಾಗಿ ತೆಗೆದುಕೊಂಡು ಕಡೆಗೆ ಪ್ರತಿಭಟನೆ ಸಭೆ ನಡೆಯಲು ಬಿಟ್ಟರು. ಮಂಡ್ಯದಲ್ಲಿ ಮಹಿಳಾ ಕಾರ್ಮಿಕರನ್ನು ಎಳೆದಾಡಿ ಅನಗತ್ಯವಾಗಿ ಕ್ಷಮಾಪಣೆ ಕೇಳುವಂತೆ ಒತ್ತಾಯ ಮಾಡಲಾಯಿತು.

ಬೆಂಗಳೂರು, ತುಮಕೂರು, ಕೋಲಾರ, ಹಾಸನ, ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ಉ.ಕನ್ನಡ, ದ.ಕನ್ನಡ, ಉಡುಪಿ, ಬೆಳಗಾಂ, ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ರಾಯಚೂರು, ಕೊಪ್ಪಳ, ಗುಲ್ಬರ್ಗಾ, ಗದಗ್ ಮತ್ತು ಬೀದರ್ ಜಿಲ್ಲೆಗಳಲ್ಲಿ ತೀವ್ರವಾದ ಪ್ರತಿಭಟನೆ ನಡೆದಿದೆ.

ಈ ಹೋರಾಟದಲ್ಲಿ ಟೆಕ್ಸ್‌ಟೇಲ್, ಸಿಮೆಂಟ್, ಸಕ್ಕರೆ, ಗಾರ್ಮೆಂಟ್ಸ್, ಇಂಜನಿಯರ್, ಸಣ್ಣ-ಪುಟ್ಟ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ತೋಟ ಕಾರ್ಮಿಕರು, ಅಂಗನವಾಡಿ, ಬಿಸಿಯೂಟ, ಗ್ರಾಮ ಪಂಚಾಯ್ತಿ ನೌಕರರು, ಹಮಾಲಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಬಿ.ಎಸ್.ಎನ್.ಎಲ್ ಮತ್ತು ಮುನ್ಸಿಪಾಲಿಟಿ ಗುತ್ತಿಗೆ ಕಾರ್ಮಿಕರು ರಾಜ್ಯದಾದ್ಯಂತ ಭಾಗವಹಿಸಿ ತಮ್ಮ ಆಕ್ರೋಶವನ್ನು ವ್ಯಕ್ತ ಮಾಡಿದ್ದಾರೆ.

ಬೆಂಗಳೂರಿನ ಪ್ರತಿಭಟನೆಯಲ್ಲಿ ಸಿಐಟಿಯುವಿನ ರಾಜ್ಯಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಭಾಗವಹಿಸಿ "ಮುಖ್ಯಮಂತ್ರಿಗಳು ಕೂಡಲೇ ಸಿಐಟಿಯು ನಿಯೋಗ"ವನ್ನು ಮಾತುಕತೆಗೆ ಕರೆದು ಈಗಾಗಲೇ ಇಟ್ಟಿರುವ ಬೇಡಿಕೆಗಳನ್ನು ಈಡೇರಿಸುವ ದಿಕ್ಕಿನಲ್ಲಿ ಜಾರಿ ಮಾಡಬೇಕೆಂದೂ ಒತ್ತಾಯಿಸಿದರು. ಇದಾಗದಿದ್ದಲ್ಲಿ ಮುಂದೆ ಇತರ ಎಲ್ಲಾ ಕಾರ್ಮಿಕ ಸಂಘಟನೆಗಳು ಸೇರಿ 'ಕರ್ನಾಟಕ ಬಂದ್' ಮಾಡಲಾಗುವುದು ಎಂದು ಘೋಷಿಸಿದರು.


ಸರ್ಕಾರದ ವತಿಯಿಂದ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳಾದ ಜಾವೇದ್ ಅಕ್ತರ್‌ರವರು ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿಪತ್ರವನ್ನು ಸರ್ಕಾರದ ಪರವಾಗಿ ಸ್ವೀಕರಿಸಿದರು. ಈ ಹೋರಾಟ ಮತ್ತು ಜಾಥಾವನ್ನು ಯಶಸ್ವಿ ಮಾಡಿದ ಎಲ್ಲಾ ಸಂಗಾತಿಗಳಿಗೂ ಸಿಐಟಿಯು ರಾಜ್ಯಸಮಿತಿ ಅಭಿನಂದನೆಗಳನ್ನು ತಿಳಿಸುತ್ತದೆ.

○

**ಸಿಪಿಐ(ಎಂ) ಸದಸ್ಯತ್ವದ ಹೆಚ್ಚಳ : ವರ್ಷವಾರು**

| | 2001 | 2002 | 2003 | 2004 |
|---|---|---|---|---|
| ಸದಸ್ಯತ್ವ | 7,96,073 | 8,35,239 | 8,43,896 | 8,67,763 |
| ಶೇಕಡ : ಹೆಚ್ಚಳ | | 4.91 | 1.03 | 2.82 |

| ರಾಜ್ಯವಾರು ಸಿಪಿಐ(ಎಂ)ನ ವಿಧಾನಸಭಾ ಸದಸ್ಯರ ಸಂಖ್ಯೆ | | ಸಂಸತ್ ಸದಸ್ಯರು: ವರ್ಷ | ಸ್ಪರ್ಧೆ | ಗೆಲುವುಗಳಿಸಿದ | ಮತ(ಶೇ.) |
|---|---|---|---|---|---|
| ಆಂಧ್ರಪ್ರದೇಶ | 09 | | | | |
| ಬಿಹಾರ | 01 | 1967 | 62 | 19 | 4.4 |
| ಜಮ್ಮು/ಕಾಶ್ಮೀರ | 02 | 1971 | 85 | 25 | 5.1 |
| ಕರ್ನಾಟಕ | 01 | 1977 | 53 | 22 | 4.3 |
| ಕೇರಳ | 24 | 1980 | 63 | 36 | 6.1 |
| ಮಧ್ಯಪ್ರದೇಶ | 01 | 1984 | 64 | 22 | 5.7 |
| ಮಹಾರಾಷ್ಟ್ರ | 03 | 1989 | 64 | 22 | 5.7 |
| ಒರಿಸ್ಸಾ | 01 | 1991 | 60 | 35 | 6.2 |
| | | 1996 | 75 | 32 | 6.12 |
| ರಾಜಾಸ್ಥಾನ | 01 | 1998 | 71 | 32 | 5.16 |
| ತ್ರಿಪುರ | 38 | 1999 | 72 | 33 | 5.40 |
| ಉತ್ತರ ಪ್ರದೇಶ | 02 | ಸ್ಪರ್ಧೆ ಮಾಡಿದ ಕ್ಷೇತ್ರಗಳಲ್ಲಿ ಸರಾಸರಿ ಶೇ. 34.59 | | | |
| ಪಶ್ಚಿಮ ಬಂಗಾಳ | 143 | 2004 | 70 | 44 | 5.69 |




ಸೋವಿಯತ್ ದಳಗಳು ನಾಝಿ ದಳಗಳ ಮೇಲೆ ದಾಳಿ ಮಾಡುತ್ತ ಹೋದವು. ಮೇಜರ್-ಜನರಲ್ ಕತುಕೋವ್‌ನ ಕೆಳಗಿದ್ದ ಟ್ಯಾಂಕ್ ಬ್ರಿಗೇಡ್ ಶತ್ರುವನ್ನು ಅಟ್ಟಿಸಿಕೊಂಡು ಮುನ್ನಡೆದಿದ್ದಿತು.

ಇದ್ದಕ್ಕಿದ್ದಂತೆ ಅವರು ನಿಲ್ಲಬೇಕಾಯಿತು. ಟ್ಯಾಂಕುಗಳ ಚಾಲಕರು ಎಂಜಿನ್‌ಗಳನ್ನು ನಿಲ್ಲಿಸಬೇಕಾಯಿತು. ಅವರ ಕಣ್ಣುಂದಿದಿರೆಯೇ ನಾಜಿಗಳು ಅವರ ಕೈಯಿಂದ ತಪ್ಪಿಸಿಕೊಂಡು ಹೋಗುತ್ತಿದ್ದರು. ಯಾರೋ ಈಚೆಗಿನ ದಡದ ಮೇಲಿನಿಂದಲೇ ನಾಜಿ ದಳಗಳತ್ತ ಗುಂಡು ಹಾರಿಸಿದರು. ಆದರೆ ಅದು ಕೇವಲ ಶೆಲ್‌ಗಳ ವ್ಯರ್ಥವಾಗಿದ್ದಿತು.

"ಔಫ್‌ವಿಡೆರ್‌ಜೇಯೆನ್!?" ನಾಜಿಗಳು ಕೂಗಿ ಹೇಳಿದರು.

"ನದಿಯನ್ನು ಸೇತುವೆ ಇಲ್ಲದೆಯೇ ಹಾಗೆಯೇ ದಾಟೋಣ, ಕಾಮ್ರೆಡ್ ಜನರಲ್!" ಯಾರೋ ಮೇಜರ್-ಜನರಲ್ ಗೆ ಸಲಹೆ ಮಾಡಿದರು.

ಜನರಲ್ ಕತುಕೋವ್ ಮಗ್ಲೂಷ ನದಿಯ ಕಡಿದಾದ ದಡಗಳತ್ತ, ರಭಸದಿಂದ ಹರಿಯುತ್ತಿದ್ದ ನೀರಿನತ್ತ ನೋಡಿದ. ಅವನ ಟ್ಯಾಂಕುಗಳು ಆ ಕಡಿದಾದ ಇಳುಕಲಿನಲ್ಲಿ ಹೋಗಲು ಸಾಧ್ಯವಿರಲಿಲ್ಲ.

ಜನರಲ್ ಯೋಚನಾಮಗ್ನನಾಗಿ ಕುಳಿತಿದ್ದ.

ಆಗ ಇದ್ದಕ್ಕಿದ್ದಂತೆ ಟ್ಯಾಂಕುಗಳ ಮುಂದೆ ಒಬ್ಬ ಹೆಂಗಸು ಒಬ್ಬ ಹುಡುಗನೊಂದಿಗೆ ಕಾಣಿಸಿಕೊಂಡಳು.

"ಅಲ್ಲಿ, ನಮ್ಮ ಮನೆಯ ಬಳಿ, ನದಿಯನ್ನು ದಾಟುವುದು ಹೆಚ್ಚು ಸುಲಭ, ಕಾಮ್ರೇಡ್ ಜನರಲ್" ಹೆಂಗಸು ಜನರಲ್ ಕತುಕೋವ್‌ನನ್ನು ಉದ್ದೇಶಿಸಿ ಹೇಳಿದಳು. "ಅಲ್ಲಿ ನದಿ ಕಿರುದೊರೆಯಾಗಿ ಹರಿಯುತ್ತದೆ. ಇಳುಕಲೂ ಅಷ್ಟು ಕಡಿದಾಗಿಲ್ಲ."

ಟ್ಯಾಂಕುಗಳು ಆ ಹೆಂಗಸಿನ ಹಿಂದೆ ಹೋದವು. ಮನೆ ಕಂಡುಬಂದಿತು. ಅದು ಹೊಳೆಯ ಮೇಲೆ ಒಂದು ತಗ್ಗು ಪ್ರದೇಶದಲ್ಲಿ ನಿರ್ಮಿತವಾಗಿದ್ದಿತು. ನಿಜ, ಆ ಸ್ಥಳ ಹಿಂದಿನದಕ್ಕಿಂತ ಹೆಚ್ಚು ಉತ್ತಮವಾಗಿದ್ದಿತು. ಆದರೂ..... ಟ್ಯಾಂಕುಗಳು ಇಲ್ಲೂ ಸೇತುವೆ ಇಲ್ಲದೆ ನದಿ ದಾಟದಾಗಿದ್ದವು.

**"ನದಿಯನ್ನು ಸೇತುವೆ ಇಲ್ಲದೆಯೇ ಹಾಗೆಯೇ ದಾಟೋಣ, ಕಾಮ್ರೆಡ್ ಜನರಲ್!" ಯಾರೋ ಮೇಜರ್-ಜನರಲ್ ಗೆ ಸಲಹೆ ಮಾಡಿದರು.**
**ಜನರಲ್ ಕತುಕೋವ್ ಮಗ್ಲೂಷ ನದಿಯ ಕಡಿದಾದ ದಡಗಳತ್ತ, ರಭಸದಿಂದ ಹರಿಯುತ್ತಿದ್ದ ನೀರಿನತ್ತ ನೋಡಿದ.**
**ಫ್ಯಾಸಿಸ್ಟರ ವಿರುದ್ಧ ಸೋವಿಯತ್‌ನ ಸಾಮಾನ್ಯ ಪ್ರಜೆಗಳು ಹೋರಾಡಿದ ಕಥೆ.**

## ಮನೆ

"ಸೇತುವೆ ಬೇಕೇ ಬೇಕು" ಟ್ಯಾಂಕ್ ಚಾಲಕರು ಹೇಳಿದರು. "ಸೇತುವೆ ಕಟ್ಟಲು ದಿಮ್ಮಿಗಳು ಬೇಕು."

"ದಿಮ್ಮಿಗಳು ಬೇಕಾದರೆ ಅಲ್ಲಿವೆ, ನೋಡಿ"



ಆ ಹೆಂಗಸು ಉತ್ತರಿಸಿದಳು.

ಟ್ಯಾಂಕ್ ಚಾಲಕರು ಸುತ್ತ ನೋಡಿದರು. ಎಲ್ಲೂ ದಿಮ್ಮಿಗಳು ಕಾಣಲಿಲ್ಲ.

"ಅಲ್ಲಿವೆ ನೋಡಿ" ಹೆಂಗಸು ಮತ್ತೆ ಹೇಳಿದಳು, ತನ್ನ ಮನೆಯತ್ತ ತೋರಿಸುತ್ತ.

" ಆದರೆ ಅದು ಮನೆಯಲ್ಲವೇ!" ಚಾಲಕರು ಆಕ್ಷೇಪಿಸಿದರು.

ಹೆಂಗಸು ತನ್ನ ಮನೆಯತ್ತ ನೋಡಿದಳು, ಆಮೇಲೆ ಸೈನಿಕರತ್ತ ನೋಡಿ ಹೇಳಿದಳು: "ಮನೆಯಾದರೇನಂತೆ. ಅವು ಮರದ ಹಲಗೆಗಳಲ್ಲವೇ. ನಮ್ಮ ಜನ ಎಷ್ಟೊಂದು ಕಳೆದುಕೊಂಡಿದ್ದಾರೆ. ಅದಕ್ಕೆ ಹೋಲಿಸಿದರೆ ಈ ಮನೆ ಏನು ಮಹಾ! ಅಲ್ಲವೇನೋ ಮಗು ಪೇತ್ಯ?" ಎಂದು ಮಗನ ಕಡೆಗೆ ತಿರುಗಿ ಕೇಳಿದಳು. ಮತ್ತೆ ಸೈನಿಕರತ್ತ ತಿರುಗಿ ಹೇಳಿದಳು: "ಮನೆಯನ್ನು ಕೆಡವಿ ಮರದ ಹಲಗೆ ತೆಗೆದುಕೊಳ್ಳಿ."

ಸೈನಿಕರು ಮನೆಯನ್ನು ಮುಟ್ಟುವ ಸಾಹಸ ಮಾಡದಾದರು. ಆಗಲೇ ದಟ್ಟವಾದ ಹಿಮ ಶೈತ್ಯ ಪ್ರಾರಂಭವಾಗಿದ್ದಿತು. ಚಳಿಗಾಲ ಸಮೀಪಿಸುತ್ತಿತ್ತು. ಇಂಥ ಕಾಲದಲ್ಲಿ ಮನೆ ಇಲ್ಲದೇ ಏಗುವುದೆಂತು?

ಹೆಂಗಸು ಸೈನಿಕರ ಮನಸ್ಸಿನಲ್ಲಿದ್ದುದನ್ನು ಗ್ರಹಿಸಿದಳು.

"ಅದರ ಬಗೆಗೆ ನೀವು ಯೋಚನೆ ಮಾಡಬೇಡಿ. ನಾವು ಎಲ್ಲಾದರೂ ನೆಲಮಾಳಿಗೆಯಲ್ಲಿ ಇದ್ದುಕೊಳ್ಳುತ್ತೇವೆ. ಅಲ್ಲವೇನೋ, ಪೇತ್ಯ?"

"ಹೌದು, ಅಮ್ಮ" ಪೇತ್ಯ ಉತ್ತರಿಸಿದ.

ಆದರೂ ಸೈನಿಕರು ಹಿಂದುಮುಂದು ನೋಡಿದರು. ಚಡಪಡಿಸಿದರು.

ಆಗ ಹೆಂಗಸು ಒಂದು ಕೊಡಲಿಯನ್ನು ಕೈಗೆತ್ತಿಕೊಂಡು ತನ್ನ ಮನೆಯ ಒಂದು ಮೂಲೆಗೆ ಹೋಗಿ, ಪಕ್ಕದ ಮರದ ದಿಮ್ಮಿಗಳ ಮೇಲೆ ಮೊದಲ ಹೊಡೆತ ನೀಡಿದಳು.

"ಸರಿ, ನಾವು ನಿಮಗೆ ಏನು ಹೇಳಬಹುದು.... ವಂದನೆಗಳು" ಜನರಲ್ ಕತುಕೋವ್ ಹೇಳಿದ.

ಟ್ಯಾಂಕ್ ಚಾಲಕರು ಮನೆಯನ್ನು ಕೆಡವಿದರು. ಅದರಿಂದ ದೊರೆತ ದಿಮ್ಮಿ ಹಾಗೂ ಹಲಗೆಗಳಿಂದ ತಾತ್ಕಾಲಿಕ ಸೇತುವೆ ನಿರ್ಮಿಸಿ, ನದಿಯನ್ನು ದಾಟಿ ನಾಜಿಗಳನ್ನು ಅಟ್ಟಿಸಿಕೊಂಡು ಹೋದರು.

ಟ್ಯಾಂಕುಗಳು ಹೊಸ ಸೇತುವೆ ದಾಟಿ ಹೋದಂತೆ ಆ ಹೆಂಗಸೂ ಅವಳ ಮಗನೂ ಸೀನಿಕರಿಗೆ ಕೈಬೀಸಿ ವಿದಾಯ ಹೇಳಿದರು. "ನಿಮ್ಮ ಹೆಸರುಗಳೇನು?" ಟ್ಯಾಂಕ್ ಚಾಲಕರು ಕೂಗಿ ಕೇಳಿದರು. "ನಾವು ಯಾರ ಹೆಸರಿನಲ್ಲಿ ಒಳ್ಳೆಯ ಮಾತು ಹೇಳಬೇಕು?"

"ಅಲೆಕ್ಸಾಂಡ್ರಾ ಗ್ರಿಗೋರೈವ್ನಾ ಕುಜ್ನೆತ್ಸೋವಾ ಅಂತ ನನ್ನ ಹೆಸರು. ನನ್ನ ಮಗನ ಹೆಸರು ಪ್ಯೋತ್ರ್ ಇವಾನೊವಿಚ್ ಕುಜ್ನೆತ್ಸೋವ್."

"ನಾವು ನಿಮಗೆ ತುಂಬ ಕೃತಜ್ಞರು, ಅಲೆಕ್ಸಾಂಡ್ರಾ ಗ್ರಿಗೋರೈವ್ನಾ. ಮತ್ತೆ ನೀನು, ಪ್ಯೋತ್ರ್ ಇವಾನೊವಿಚ್, ಒಬ್ಬ ಧೀರ ವ್ಯಕ್ತಿಯಾಗಿ ಬೆಳೆಯುವೆ."

ಟ್ಯಾಂಕುಗಳು ಧಾವಿಸಿಕೊಂಡು ಹೋಗಿ ಶತ್ರುಗಳ ಮೇಲೆ ಬಿದ್ದು ಅವರನ್ನು ಸದೆ ಬಡಿದವು. ಆಮೇಲೆ ಇನ್ನೂ ಪಶ್ಚಿಮಕ್ಕೆ ಮುನ್ನಡೆದವು.

ಯುದ್ಧದ ಆರ್ಭಟ ಹಿಂದೆ ಸರಿಯಿತು. ಮೃತ್ಯುವಿನ ತಾಂಡವ ನೃತ್ಯ ಹಾಗೂ ಘೋರ ದುರಂತಗಳು ನೀತವು. ವರ್ಷ ಕಳೆದಂತೆ ಯುದ್ಧ ನಮ್ಮ ನೆನಪಿನ ಹಿನ್ನೆಲೆಗೆ ಸರಿಯುತ್ತಿದೆ. ಆದರೆ ಆಗ ಜರುಗಿದ ವೀರೋಚಿತ ಕಾರ್ಯಗಳು ಸದಾನಮ್ಮ ನೆನಪಿನಲ್ಲಿ ಹಚ್ಚಹಸುರಾಗಿ ಇರುವುವು.

ಮಗ್ಲೂಷ ನದಿಯ ಬಳಿಯ ಸಾಹಸಕೃತ್ಯಗಳ ನೆನಪನ್ನೂ ಮರೆಯಲಾಗಿಲ್ಲ. ಮಟ್ಟಹಳ್ಳಿ ನೊವೊ-ಪೆತ್ರೋವ್‌ಸ್ಕೊಯೆಗೆ ಹೋಗಿ ನೋಡಿ. ಇಂದು ಅಲ್ಲಿ ಅದೇ ಸ್ಥಳದಲ್ಲಿ ಅದೇ ತಗ್ಗು ಪ್ರದೇಶದಲ್ಲಿ ಮನೆಯೊಂದು ನಿಂತಿದೆ. ಅದರ ಬಾಗಿಲ ಮೇಲೆ ಈ ಬರಹವಿದೆ: "ಅಲೆಕ್ಸಾಂಡ್ರಾ ಗ್ರಿಗೋರೈವ್ನಾ ಹಾಗೂ ಪ್ಯೋತ್ರ್ ಇವಾನೊವಿಚ್ ಕುಜ್ನೆತ್ಸೋವ್‌ರಿಗೆ. ದ್ವಿತೀಯ ಲೋಕಯುದ್ಧದ ಸಮಯದಲ್ಲಿ ತೋರಿದ ವೀರೋಚಿತ ಕಾರ್ಯಾಕ್ಕಾಗಿ." ಯುದ್ಧಾನಂತರ ಟ್ಯಾಂಕ್ ಚಾಲಕರು ಈ ಸ್ಥಳಕ್ಕೆ ಹಿಂದಿರುಗಿ ಈ ಮನೆಯನ್ನು ನಿರ್ಮಿಸಿದ್ದರು.

ಮಗ್ಲೂಷ ನದಿ ಬಳುಕಿಕೊಂಡು ಹರಿಯುತ್ತ ಹೋಗಿದೆ. ಈ ನದಿಯ ಮೇಲೆ ಮನೆಯೊಂದು ನಿಂತಿದೆ. ಅದಕ್ಕೆ ಒಂದು ವೆರಾಂಡಾ ಹಾಗೂ ಒಂದು ದ್ವಾರಮಂಟಪ ಇವೆ. ಅದರ ಕಿಟಕಿಗಳು ಉಜ್ವಲ ಜಗತ್ತಿನತ್ತ ತೆರೆದು ನೋಡುತ್ತಿದೆ.

(ರಶಿಯನ್ ಇತಿಹಾಸದ ಕಥೆಗಳು - ಗ್ರಂಥದಿಂದ)



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ; ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH